FINANCIAL BUSINESS

Discussion and voting of Demands for Grants for 1982-83

ಶ್ರೀ ಎ. ಬಿ. ಜಕ್ಕನೂರ್ (ಕಾರ್ಮಿಕ ಸಚಿವರು)—.

ಸನ್ಮಾನ್ಯ ಅಧ್ಯಕ್ಷರೇ ನನ್ನ ಮುಖ್ಯ ಖಾತೆಗಳ ಬೇಡಿಕೆಯಮೇಲೆ ನೆನ್ನೆ ಮತ್ತು ಮೊನ್ನೆ ಎರಡು ದಿವಸಗಳಿಂದಲೂ ಈ ಸದನದಲ್ಲಿ ಚರ್ಚೆಯಾಗಿದೆ. ಮಾನ್ಯ ಅನೇಕ ಸಚಿವರು ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಹಾಗೆಯೇ ಕೆಲವೊಂದು ಆಪಾದನೆಗಳನ್ನು ಕೂಡ ಮಾಡಿದ್ದಾರೆ. ಅವರ ಬಹುತೇಕ ಸೂಚನೆಗಳಿಗೆ ಉತ್ತರ ಕೊಡುವ ಮೊದಲು ನಾನು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಅಧ್ಯಕ್ಷರೇ ಲೇಬರ್ ಫೋರ್ಸ್‌ಗಳು ಎನ್ನುವ ಬಗ್ಗೆ ಮಾಹಿತಿ ಕೊಡಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ೮೩,೯೨,೮೭೪ ಲೇಬರ್ ಫೋರ್ಸ್ ಇದ್ದಾರೆ. ೧೯೮೧ನೇ ಇಸವಿಯ ಅಂಕಿಅಂಶಗಳ ಪ್ರಕಾರ ೧೯೮೧ Census preliminary figures ಇವುಗಳಲ್ಲಿ Number of plantation workers 92,264, number of agricultural labourers 36:36,200, number of Beedi Workers about 3 lakhs, motor transport workeres 23,712, shops and commercial establishment employees 2,85,650 and in other employment including Government service-35,98,614. Total-83 92.874 ಆಗುತ್ತದೆಂದು ನಮಗೆ ಕಂಡುಬಂದಿದೆ. ಕಾರ್ಮಿಕರ ಹಿತ ಕಲ್ಯಾಣ ಮಾಡಲು ಕಾರ್ಮಿಕರ ಬಗ್ಗೆ ಕಾಯಿದೆಗಳನ್ನು ಸರಿಯಾಗಿ implement ಮಾಡಲು ನಮ್ಮ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಮಾನ್ಯ ಸದಸ್ಯರನೇಕರು ಕೆಲವಾರು ವಿಷಯಗಳನ್ನು ಹೇಳಿದರು. ಮುಖ್ಯವಾಗಿ ನಮ್ಮ ಖಾತೆಯಲ್ಲಿ ಹ್ಯಾಂಡ್ಸ್ ಕಡಿಮೆ ಇದ್ದಾರೆಂದು ಹೇಳಿರುತ್ತಾರೆ. ಆದುದರಿಂದ ಹೋದ ಸಲ ಒಬ್ಬ ಡೆಪ್ಯುಟಿ ಲೇಬರ್ ಕಮಿಷನರ್, ೨೦ ಲೇಬರ್ ಇನ್‌ಸ್ಪೆಕ್ಟರ್ಸ್ ಪೋಸ್ಟ್ ಕ್ರಿಯೇಟ್ ಮಾಡಿದ್ದೇವೆ ಈ ವರ್ಷ ೧೫ ಲೇಬರ್ ಇನ್‌ಸ್ಪೆಕ್ಟರ್ಸ್ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಬೇಕೆಂದು ಮಾಡಿದ್ದೇವೆ. ಇದು ಅಲ್ಲದೆ Govt. have also notified revenue inspectors as inspectors under minimum wages. This will strengthen the enforcement machinery especially for implementation of minimum wages. ಮತ್ತು in order to have proper enforcement and supervision of conciliations, it is proposed to have one Assistant Labour Comissioner with one Labour Office each in Bangalore, Mangalore and Mysore to deal exclusively with conciliation matters. ಇದನ್ನು ಸಹ ಮಾನ್ಯ ಸದಸ್ಯರು ಬೇರೆ ಮಾಡಿದ್ದರೆ ಸರಿಯಾಗುತ್ತಿತ್ತು ಎಂದು ವ್ಯಾಖ್ಯಾನ ಮಾಡಿದ್ದಾರೆ. ಸರ್ಕಾರ ಬಗ್ಗೆ ಪರಿಶೀಲನೆ ಮಾಡಿ ಯಾವ ಪ್ರಕಾರವಾಗಿ ಮಾಡಬೇಕೆಂದು ಪರಿಶೀಲನೆ ಮಾಡುತ್ತೇವೆ. The Industrial Disputes pending at the beginning of 1980-81 was 406, 1981-82-263. Receipts in 1980-81-1174; 1981-82 1018, total: 1508. Disputes settled-1980-81-795; 1981-81-82-442. Disputes faild: 1980-81-386; 1981-82-477. Withdrawn · 1980-81 136; 1981-82 141. Balance: 1980-81: 263; 1981-82: 221. ಇನ್ನು ಮಾನ್ಯ ಸದಸ್ಯರು ಕೋರ್ಟ್‌ಗಳಲ್ಲಿ, ಟ್ರಿಬ್ಯುನಲ್‌ಗಳಲ್ಲಿ ಬಹಳಷ್ಟು ಕೇಸಸ್ ಪೆಂಡಿಂಗ್ ಇದೆ ಎಂದು ಎತ್ತಿ ತೋರಿಸಿದ್ದಾರೆ Cases pendihg at the beginning 1980-81-2260; 1981-82-2,614. Cases disposed: 1980-81-1076; 1981-82-887; balance 1981-82-3,163. ಡಿಸ್‌ಪೋಸಲ್ ಕಡಿಮೆ ಇದೆ. ಇದು ಏತಕ್ಕೆ ಕಡಿಮೆಯಾಯಿತು ಎಂದರೆ ಮಾನ್ಯ ಸದಸ್ಯರು ಕೆಲವೊಂದು ಪ್ರಿಸೈಡಿಂಗ್ ಆಫೀಸರನ್ನು ನೇಮಕ ಮಾಡಿಲ್ಲ. ಮತ್ತೊಬ್ಬರು ರಿಟೈರ್ ಆಗುವವರನ್ನು ನೇಮಕ ಮಾಡಿದ್ದೀರಿ ಮತ್ತು ಅವರು ರಿಟೈರ್ಡ್ ಆದಮೇಲೆ ಬೇರೆಯವರನ್ನು ನೇಮಕ ಮಾಡಲೇ ಇಲ್ಲ. ಈ ಸರ್ಕಾರ ಹುಬ್ಬಳಿಯಲ್ಲಿ ಒಂದು ಅಡಿಷನಲ್ ಟ್ರಿಬ್ಯುನಲ್ ಮತ್ತು ಗುಲ್ಬರ್ಗದಲ್ಲಿ ಒಂದು ಅಡಿಷನಲ್ ಲೇಬರ್ ಕೋರ್ಟನ್ನು ಸ್ಥಾಪನೆ ಮಾಡಬೇಕೆಂದು ಮಾಡಿ

ದ್ದೇವೆ. ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಪೋಸ್ಟ್ ಫಿಲಪ್ ಆಗತಕ್ಕಂಥ ಪ್ರಿಸೈಡಿಂಗ್ ಆಫೀಸರ್‌ಗೆ ಎಷ್ಟು ಕೇಸಸ್‌ಗಳು ಇರುತ್ತವೆಯೋ ಅವುಗಳನ್ನು ಡಿಸ್‌ಪೋಸ್ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇವೆ work stoppages i. e. Strikes and lock-cuts in 1980–81–6; 1981–82–26 Workers involved: 1980-81 1,40,813; 1981–82–53,783. Mandays lost–1980–81–38,06,127; 1981–82–12,53,422. Wages lost 12,68,24, 312 rupees in 1980–81 and Rs 4,04,228,392 in 1981–82. Production lost: In 1980–81 Rs. 95,41,31,314; in 1981–82 Rs. 20, 79 03 554. Closures: 1980–81–12 and in 1981–82–1. Lay-offs: 1980–81–34; 1981–82–17. Retrenchments: 1981-81-13; 1981–82-3 Workers involved in closures: 1980-81 9,893; 1981–82–11. Workers involved in Lay-offs: 1980–81 8,757, 1981–82 3,667. Workers involved in Retrenchment 1980–81 389; 1981–82 20. ಆನಂತರ ಮೇ ತಿಂಗಳಲ್ಲಿ ಮಾನ್ಯ ಅಧ್ಯಕ್ಷರೇ ಇದನ್ನು ಹೇಳಬಯಸುತ್ತೇನೆಂದರೆ ೧೯೮೦–೮೧ ರಲ್ಲಿ ಇದ್ದುದಕ್ಕಿಂತ ೧೯೮೧–೮೨ಕ್ಕೆ ಬಹಳಷ್ಟು ಪರಿಸ್ಥಿತಿ ಸುಧಾರಿಸಿದೆ. ಲೇ ಆಫ್ಸ್ ಕಡಿಮೆಯಾಗಿದೆ. ಸ್ಟ್ರೈಕ್ಸ್ ಕಡಿಮೆಯಾಗಿದೆ, ಡಿಸ್‌ಪ್ಯೂಟ್ಸ್ ಕಡಿಮೆಯಾಗಿದೆ. ಇಷ್ಟೇ ಅಲ್ಲದೆ ಸ್ಪೆಷಲ್ ಡ್ರೈವ್ ನಾವು ತೆಗೆದು ಕೊಂಡು ಮಿನಿಮಮ್ ವೇಜಸ್ಸನ್ನು ನಾವು ಬಹಳಷ್ಟು ರಿವೈಸ್ಡ್ ಮಾಡಿದ್ದೇವೆ. ಬಹುಶ: ರಾಷ್ಟ್ರದ ಯಾವ ರಾಜ್ಯದಲ್ಲೂ ಸಹ ಇಷ್ಟು ಬೃಹತ್ ಪ್ರಮಾಣದಲ್ಲಿ ಮಿನಿಮಮ್ ವೇಜಸ್ ರಿವೈಸ್ಡ್ ಮಾಡಿಲ್ಲ. ೪-೫ರಲ್ಲಿ ನಾವು ಹೊಸದಾಗಿ ಕಂಡಸಾರಿ ಶುಗರ್ ಫ್ಯಾಕ್ಟರಿ, ಸಿರಿಕಲ್ಚರ್, ಟ್ಯಾಡಿ ಟ್ಯಾಪಿಂಗ್ ಸಾಯಿಲ್ ಕನ್‌ಸರ್‌ವೇಷನ್ ಮತ್ತು ವೈನ್ ಮುಂತಾದೆಡೆಗಳಲ್ಲಿ ಮಿನಿಮಮ್‌ವೇಜಸ್‌ನ್ನು ಫಿಕ್ಸ್ ಮಾಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನುಳಿದಂತೆ ಸಾಧಾರಣವಾಗಿ ೨೦ರಲ್ಲಿ ರಿವೈಜ್ ಮಾಡಿದ್ದೇವೆ. ೧೯೭೩, ೧೯೭೪, ೧೯೭೫ರಲ್ಲಿ ನಿಗದಿ ಮಾಡಿದ ಮಿನಿಮಮ್ ವೇಜಸ್‌ನ್ನು ಇಲ್ಲಿಯುವರೆಗೆ ಹೆಚ್ಚು ಮಾಡಿರಲಿಲ್ಲ. ಅಲ್ಲಿಂದೀಚೆಗೆ ಮಾನ್ಯ ಸದಸ್ಯರು ಹೇಳಿದಂತೆ ದಿನಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಆದರೆ ಈ ಕಾರ್ಮಿಕರ ವೇತನವನ್ನು ಹೆಚ್ಚು ಮಾಡದ ಕಾರಣದಿಂದ ಮೊದಲಿನ ದರದಲ್ಲಿಯೇ ಪಗಾರ ಪಡೆಯುತ್ತಾ ಬಂದಿದ್ದಾರೆ. ಇಂತಹವರ ಪಗಾರವನ್ನು ಹೆಚ್ಚು ಮಾಡಬೇಕೆಂದುಕೊಂಡು ಈಗಾಗಲೇ ೪೫ರ ಪೈಕಿ ೨೬ರಲ್ಲಿ ರಿವೈಜ್ ಮಾಡಿದ್ದೇವೆ. ಇದರ ವಿವರ ನಮ್ಮ ಇಲಾಖೆಯ ೧೯೮೧–೮೨ರ ವಾರ್ಷಿಕ ವರದಿಯಲ್ಲಿ ಕೊಟ್ಟಿದೆ.

Employment in any Confectioneries,

Employment in Bakeries,

ಈ ಎರಡಕ್ಕೆ ಸಂಬಂಧಪಟ್ಟಂತೆ ಡ್ರಾಫ್ಟ್ ನೋಟಿಫಿಕೇಷನ್ ಇಷ್ಯೂ ಮಾಡಿದ್ದೇವೆ. ಇವುಗಳ ಜೊತೆಗೆ ಇನ್ನೂ ೩ ಇಂಡಸ್ಟ್ರಿಗಳ ಬಗ್ಗೆ ನಾವು ಡ್ರಾಫ್ಟ್ ನೋಟಿಫಿಕೇಷನ್ ಇಷ್ಯೂ ಮಾಡಿದ್ದೇವೆ. ಅವುಗಳು ಈ ರೀತಿ ಇವೆ ;—

Employment in Regulated Markets,

Employment in Mandis and Bazars.

ಇವೂ ಅಲ್ಲದೆ ಇನ್ನೂ ಕೆಲವಕ್ಕೆ ಮಾಡುವುದು ಇದೆ. ಅವುಗಳು ಯಾವುವು ಎಂದರೆ, Oil Mill, Engineering industries including Automobile Foundry without attaching machine shops. Foundries with or without machine shops Automobile Engineering including servicing, repairing work, textile industries ; ಇವುಗಳ ಬಗ್ಗೆ ಕೂಡ ಸರ್ಕಾರ ಮಿನಿಮಮ್ ವೇಜಸ್‌ನ್ನು ಹೆಚ್ಚು ಮಾಡಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. Cashew Industry ಇದಕ್ಕಾಗಿ ಒಂದು ಕಮಿಟಿ ರಚನೆ ಮಾಡಲಾಗಿದ್ದು ಅದರ ವರದಿ ಸಹ ಸರ್ಕಾರಕ್ಕೆ ಬಂದಿದೆ. ಈ ವರದಿಯನ್ನು ಈಗ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅದೇ ರೀತಿ Handloom, Powerloom, and cotton industries ನಲ್ಲಿ

ಮಿನಿಮಮ್ ವೇಜಸ್‌ನ್ನು ೧೯೭೪, ೧೯೭೫, ೧೯೭೭ರಲ್ಲಿ ನಿಗದಿ ಮಾಡಿದ್ದು. ಈ ರೀತಿ ಮಿನಿಮಮ್ ವೇಜಸ್‌ನ್ನು ಆ ಸಮಯದಲ್ಲಿ ನಿಗದಿ ಮಾಡಿದಾಗ ಅದರ ವಿರುದ್ಧ ಕೆಲವರು ಹೈಕೋರ್ಟಿನಲ್ಲಿ ಛಾಲೆಂಜ್ ಮಾಡಿದ್ದಾರೆ. ಅದು ಇನ್ನೂ ನಿಕಾಲೆಯಾಗಿಲ್ಲ. ಈ ಕಾರಣದಿಂದ ಮತ್ತೆ ಇದನ್ನು ರಿವೈಜ್ ಮಾಡ ಬೇಕೋ ಅಥವಾ ಬೇಡವೋ ಎಂಬ ಬಗ್ಗೆ ಸಲಹೆ ಕೇಳಿದಾಗ, ಹೈಕೋರ್ಟಿನಲ್ಲಿ ಮೊದಲಿನ ವೇಜಸ್ ತೀರ್ಮಾನವಾಗದಿದ್ದರೂ ಸಹ ಹೊಸ ವೇಜಸ್‌ನ್ನು ನಿಗದಿ ಮಾಡಲು ಅಡ್ಡಿ ಬರುವುದಿಲ್ಲವೆಂದು ಹೇಳಿ ದ್ದಾರೆ. ಆದ್ದರಿಂದ ಬೇಗನೆ ಒಂದು ಡ್ರಾಫ್ಟ್ ನೋಟಿಫಿಕೇಷನ್ ಇಷ್ಯೂ ಮಾಡುತ್ತೇವೆ. ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ನಾವು ರಿವಿಜನ್ ಮಾಡಿದ್ದೇವೆ. ಹೋಟೇಲ್, ಸಿನಿಮಾ ಹಾಗೂ ಬಹುತೇಕ ಕೈಗಾರಿಕೆಗಳಲ್ಲಿ ಮೊದಲು ಇದ್ದ ವೇಜಸ್‌ಗಿಂತ ಈಗ ೨೦೦ ರಿಂದ ೩೫೦ ಪಟ್ಟು ಜಾಸ್ತಿಯಾಗಿದೆ. ಜಾಸ್ತಿ ಮಾಡಿರುವ ಪ್ರಮಾಣದಲ್ಲಿ ವೇಜಸ್ ಕೊಡುವುದಕ್ಕಾಗುವುದಿಲ್ಲವೆಂದು ಕೆಲವರು ಕೋರ್ಟಿಗೆ ಹೋಗಿ ದ್ದಾರೆ. ಒಟ್ಟಿನಲ್ಲಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ನಾವು ಜಾಸ್ತಿ ಮಾಡಿದ್ದರೂ ಸಹ ಮಾನ್ಯ ಫರ್ನಾಂಡೀಸ್ ಅವರು ಸರ್ಕಾರಕ್ಕೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಲಿಲ್ಲ. ಸುಮಾರು ೨೭-೨೮ ಇಂಡಸ್ಟ್ರಿಗಳಲ್ಲಿ ಅಂದರೆ ಬೇರೆ ಯಾವ ರಾಜ್ಯದಲ್ಲಿಯೂ ಮಾಡದಂಥ ಪ್ರಮಾಣದಲ್ಲಿ ನಾವು ರಿವಿಜನ್ ಮಾಡಿದ್ದೇವೆ. ಇದು ಒಳ್ಳೆಯ ಕೆಲಸವಾಗಿದೆ ಬೇರೆ ರಾಜ್ಯದವರಿಗೆ ಇದು ಉತ್ತಮ ನಿದರ್ಶನವಾಗಿದೆ. ಈ ರೀತಿ ಕಾರ್ಮಿಕರಿಗೆ ಅನುಕೂಲವಾಗುವ ಕೆಲಸವನ್ನು ಮಾಡಿದ್ದರೂ ಸಹ ಮಾನ್ಯ ಸದಸ್ಯರು ಸರ್ಕಾರಕ್ಕೆ ವಂದನೆ ಸಲ್ಲಿಸುವ ಸೌಜನ್ಯವನ್ನೂ ಸಹ ತೋರಿಸಲಿಲ್ಲ. ಮಾನ್ಯ ಫರ್ನಾಂಡೀಸ್ ಅವರು ವಿರೋಧ ಪಕ್ಷದಲ್ಲಿದ್ದು ಕಾರ್ಮಿಕ ಧುರೀಣರೂ ಸಹ ಆಗಿದ್ದಾರೆ, ಅದ್ದರಿಂದ ಅವರು ಯಾವಾಗಲೂ ಕಾರ್ಮಿಕರ ಬಗ್ಗೆ ನೋಡುತ್ತಾರೆ. ಸರ್ಕಾರವನ್ನು ದೂಷಣೆ ಮಾಡಿದರೆ ಕಾರ್ಮಿಕರಿಗೆ ಒಳ್ಳೆಯದಾಗುತ್ತದೆಂದು ಈ ರೀತಿ ಹೇಳಿದ್ದಾರೆಂದು ಕಾಣುತ್ತದೆ. ಬೀಡಿ, ಹೋಟೇಲ್ ಹಾಗೂ ಸಿನಿಮಾ ನೌಕರರ ವೇಜಸ್ ವಿಚಾರದಲ್ಲಿ ನನ್ನ ಮೇಲೆ ನೇರವಾದ ಆಪಾದನೆ ಮಾಡಿದ್ದಾರೆ. ಇದರ ಬಗ್ಗೆ ನಾನು ಪ್ರತಿಯೊಂದಕ್ಕೂ ಉತ್ತರ ಕೊಡುತ್ತೇನೆ.

ಇನ್ನು ನಮ್ಮ ಅಧಿಕಾರಿಗಳಿಗೆ ೧೫ ದಿವಸಗಳ ಕಾಲ ರಾಜ್ಯಾದ್ಯಂತ ಎಲ್ಲ ಕಡೆಯೂ ಅನಿರೀಕ್ಷಿತವಾಗಿ ಭೇಟಿ ಕೊಟ್ಟು ತನಿಖೆ ಮಾಡಬೇಕೆಂದು ಆದೇಶ ಕೊಡಲಾಗಿತ್ತು. ಮಿನಿಮಮ್ ವೇಜಸ್ ಸರಿಯಾಗಿ ಕೊಡುತ್ತಿದ್ದಾರೆಯೋ ಹೇಗೆ, ರಿಜಿಸ್ಟರ್‌ಗಳನ್ನು ಸರಿಯಾಗಿ ಇಟ್ಟಿದ್ದಾರೆಯೋ ಹೇಗೆ, ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿದ್ದಾರೆಯೋ ಹೇಗೆ ಎಂಬುದನ್ನು ತಪಾಸಣೆ ಮಾಡುವಂತೆ ಹೇಳಲಾಗಿತ್ತು. ಆದರ ಪ್ರಕಾರ 5696 inspections were conducted throughout the State. ಇದರಲ್ಲಿ ೪೦೮೮ ಕಡೆಗಳಲ್ಲಿ ಕಾನೂನಿಗೆ ಅನುಗುಣವಾಗಿ ನಡೆದುಕೊಂಡಿರಲಿಲ್ಲ. ಇಲ್ಲೆಲ್ಲಾ ಕಾಯಿದೆಯನ್ನು ಉಲ್ಲಂಘನೆ ಮಾಡಿದ ಬಗ್ಗೆ ನೋಟೀಸ್ ಜಾರಿ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸುಮಾರು ೧೫೦ ಕೇಸ್‌ಗಳಲ್ಲಿ prosecutions are being processed. ಈ ಕೇಸ್‌ಗಳಲ್ಲಿಯೂ ಕೂಡ ಒಂದೆರಡು ಸಲ ನೋಟೀಸ್ ಕೊಟ್ಟು ನಂತರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಇನ್ನು Legislative Changes ಬಗ್ಗೆ ಹೇಳುತ್ತೇನೆ. Amendments to Shops and Commercial Establishment Act to provide for annual renewal, registration and enhancement of fees ; ಇದು ಈಗಾಗಲೇ ಈ ಮನೆಯಲ್ಲಿಡಲಾಗಿದೆ.

Legislation to provide payment of subsistence allowance to provide for payment to workmen placed under suspension pending enquiry is under consideration. ಇದನ್ನು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಏಕೆಂದರೆ, ಎಷ್ಟೋ ಕಡೆಗಳಲ್ಲಿ ಕಾರ್ಮಿಕರನ್ನು ಸಸ್ಪೆಂಡ್ ಮಾಡುತ್ತಾರೆ. ಈ ಸಮಯದಲ್ಲಿ ಅವರ ಗತಿ ಏನು ? ಅದಕ್ಕಾಗಿ ಸಸ್ಪೆಂಡ್ ಅವಧಿಯಲ್ಲಿ subsistence allowance ಕೊಡುವ ಬಗ್ಗೆ ಒಂದು ಕಾಯಿದೆಯನ್ನು ತರುವುದಕ್ಕೆ ಸರ್ಕಾರ ಆಲೋಚನೆ ಮಾಡಿದೆ.

Legislation regarding recognition of trade unions and prevention of unfair labour practice Act ; ಇದನ್ನು ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡಿದೆ. ಮಹಾರಾಷ್ಟ್ರದಲ್ಲಿ ಈ ಒಂದು ಕಾಯಿದೆ ಇದೆ. ಆದ್ದರಿಂದ ಇಲ್ಲಿಯೂ ಕೂಡ ಇದರ ಬಗ್ಗೆ ಲೇಬರ್ ಲೀಡರ್ಸ್‌ನ್ನು ಕರೆಸಿ ಅವರ ಸಲಹೆಯನ್ನು ಪಡೆಯುತ್ತೇವೆ.

Legislation regarding closure is also under consideration. ಕೆಲವು ಸಲ ಇದ್ದಕ್ಕಿದ್ದಂತೆ ಕಾರ್ಖಾನೆಗಳನ್ನು ಮುಚ್ಚಿಬಿಡುತ್ತಾರೆ. ಇದರಿಂದ ಅಲ್ಲಿನ ಕಾರ್ಮಿಕರಿಗೆ ತೊಂದರೆಯಾಗುತ್ತದೆ, ಆದ್ದರಿಂದ ಮಹಾರಾಷ್ಟ್ರ ಸರ್ಕಾರದವರು ಮಾಡಿರುವ ರೀತಿಯಲ್ಲಿಯೇ ಇಲ್ಲಿಯೂ ಸರ್ಕಾರದ ಅನುಮತಿ ಇಲ್ಲದೆ ಮುಚ್ಚಬಾರದೆಂದು ಒಂದು ಕಾನೂನು ತರಬೇಕೆಂದು ಯೋಚನೆ ಮಾಡಿದ್ದೇವೆ. ಈ ವಿಚಾರಗಳಿಗೆ ಸಂಬಂಧಪಟ್ಟಂತೆ ಯಾವುದಾದರೂ ಒಂದು ರೀತಿಯ ಕಾನೂನು ಮಾಡುವುದು ಅವಶ್ಯಕವಿದೆ.

ಇನ್ನು ತಾ: ೧ನೇ ಜುಲೈ ೧೯೮೨ರ ವರೆಗೆ ನಮ್ಮ ರಾಜ್ಯದಲ್ಲಿ ೧೩,೯೪೫ ಫ್ಯಾಕ್ಟರಿಗಳು ರಿಜಿಸ್ಟರ್ಡ್ ಆಗಿವೆ. ಇವುಗಳ ಪೈಕಿ ೪೫೭೨ರಲ್ಲಿ ೫೦ಕ್ಕಿಂತ ಹೆಚ್ಚು ಕಾರ್ಮಿಕರು ಇದ್ದಾರೆ. ಈ ಫ್ಯಾಕ್ಟರಿಗಳು ಒಂದು ಸಲ ರಿಜಿಸ್ಟರ್ಡ್ ಆದ ಮೇಲೆ ಕಾರ್ಮಿಕರಿಗೆ ಸಂಬಂಧಪಟ್ಟ ಪ್ರತಿಯೊಂದು ವಿಚಾರಗಳನ್ನು ಸಹ ಕಾರ್ಮಿಕ ಇಲಾಖೆಗೆ ಅವರು ತಿಳಿಸುವಂತೆ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇದೊಂದು ಉತ್ತಮವಾದ ಸಲಹೆಯಾಗಿದೆ. ಮಾನ್ಯ ಸದಸ್ಯರ ಸಲಹೆ ಪ್ರಕಾರ ನಾವು ಎಲ್ಲ ಫ್ಯಾಕ್ಟರಿಗಳವರಿಗೂ ಸೂಚನೆ ಕೊಡುತ್ತೇವೆ

ಇನ್ನು ಮಿನಿಮಮ್ ವೇಜಸ್ ನಿಗದಿ ಮಾಡುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ನಾನು ಬೀಡಿ ಇಂಡಸ್ಟ್ರಿ ಬಗ್ಗೆ ಹೇಳುತ್ತೇನೆ. ಈ ಬೀಡಿ ಇಂಡಸ್ಟ್ರಿಯಲ್ಲಿ ಕೆಲಸ ಮಾಡುವ ನೌಕರರ ಬಗ್ಗೆ ಮಾನ್ಯ ಕಕ್ಕಿಲಾಯ ಅವರು ನೆನ್ನೆ ಇಲ್ಲಿ ಮಾತನಾಡಿದ್ದಕ್ಕಿಂತ ಇನ್ನೂ ಜೋರಾಗಿ ಜನವರಿ ತಿಂಗಳಲ್ಲಿ ಸಭೆ ಸೇರಿದ್ದಾಗ ಮಾತನಾಡಿದ್ದಾರೆ. ಇದರ ಜೊತೆಗೆ ನನ್ನ ಮೇಲೆ ಆಪಾದನೆ ಕೂಡ ಮಾಡಿದ್ದಾರೆ. ಇವರಿಗೆ ಒಂದು ರೀತಿಯ ಸಂಶಯವಿದೆ. ಏನೆಂದರೆ ಒಂದು ಸಾವಿರ ಬೀಡಿಗಳನ್ನು ಕಟ್ಟಲು ೮ ರೂಪಾಯಿ ಹತ್ತು ಪೈಸೆ ಎಂದು ಪ್ರಿಲ್‌ಮಿನರಿ ನೋಟೀಸ್‌ನಲ್ಲಿ ಇದ್ದರೂ ಸಹ ಜಾರಿಗೆ ಕೊಟ್ಟಿದ್ದು ೭ ರೂಪಾಯಿ ೪೦ ಪೈಸೆ ಮಾತ್ರ. ಆದ್ದರಿಂದ ಇದರಲ್ಲಿ ಏನೋ ಇದೆ ಎಂಬತಕ್ಕಂಥ ದೊಡ್ಡ ಸಂಶಯ ಅವರಲ್ಲಿದೆ. ಒಂದು ರೀತಿಯ ಅನುಮಾನ ಹೊಂದಿದ್ದಾರೆ. ಮಾನ್ಯ ಫರ್ನಾಂಡೀಸ್ ಅವರೂ ಸಹ ಇದೇ ಒಂದು ಸಂಶಯ ಇಟ್ಟುಕೊಂಡು ನನ್ನ ಮೇಲೆ ಆಪಾದನೆ ಮಾಡಿದ್ದಾರೆ. ಇದಕ್ಕೆ ನಾನು ಈಗಾಗಲೇ ಕಾರಣ ಕೊಟ್ಟಿದ್ದೇನೆ. ಆದರೂ ನಾನು ಇನ್ನೊಮ್ಮೆ ಹೇಳುತ್ತೇನೆ.

೧೦-೩೦ ಎ. ಎಂ.

ಪ್ರಿಲಿಮಿನರಿ ನೋಟಿಫಿಕೇಶನ್ ಇಷ್ಯು ಮಾಡಿದ ನಂತರ, ಬೋರ್ಡ್‌ನವರು ೮ ರೂಪಾಯಿ ೧೦ ಪೈಸೆ ಮಾಡಬೇಕೆಂದು ನಿರ್ಣಯ ಕೊಟ್ಟ ನಂತರ ಆಫಿಶಿಯಲ್ ನೋಟಿಫಿಕೇಶನ್ ಇಷ್ಯು ಮಾಡುವಷ್ಟರೊಳಗೆ ಸೆಪ್ಟೆಂಬರ್ ತಿಂಗಳಿನಲ್ಲಿ ದೆಹಲಿಯಲ್ಲಿ ಒಂದು ಸಭೆಯನ್ನು ಕರೆಯಲಾಯಿತು. ಯಾವ್ಯಾವ ರಾಜ್ಯದಲ್ಲಿ ಬೀಡಿ ಇಂಡಸ್ಟ್ರಿ ಇದೆ ಆಯಾ ರಾಜ್ಯದ ಕಾರ್ಮಿಕ ಮಂತ್ರಿಗಳನ್ನು ಕೇಂದ್ರ ಕಾರ್ಮಿಕ ಮಂತ್ರಿಗಳು ಕರೆದು ಚರ್ಚೆ ನಡೆಸಿದ್ದಾರೆ. ಆ ಸಭೆಯಲ್ಲಿ ಏನಾಯಿತು ಎಂಬುದನ್ನು ಸಂಪೂರ್ಣವಾಗಿ ವ್ಯಕ್ತಪಡಿಸಿದ್ದೇನೆ. ಆ ಸಭೆಯಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳಲಾಯಿತು. ಅದೇನೆಂದರೆ Minutes of the meeting of the revision of minimum wages for Beedi Industries. ಕಾರ್ಮಿಕ ಮಂತ್ರಿಗಳಾದ ಎನ್. ಡಿ. ತಿವಾರಿಯವರು ಅಧ್ಯಕ್ಷತೆ ವಹಿಸಿದ್ದರು.

A meeting of the Labour Ministers of some of the states was held on Friday the 11th September 1981 to consider the problem of wide disparity in the rates of minimum wages prescribed by various States for employees in Beedi Industries. Sri N. D. Tiwari, Union Minister for Industries and Labour Presided.

The following were discussed :

"The Ministers noted that because of the wide disparity in the rates of minimum wages prescribed by the various States for employment in Beedi Industries there was desire

for the industries to move from the States where the rates were high to those were they are low since it is a labour intensive one. Its movement from one place to another would not involve closure of establishment and physical transfer of equipment from one place to another. It could be done impercetibly by adjustment of the production levels.''

ಶ್ರೀ ಬಿ. ವಿ. ಕಕ್ಕಿಲಾಯ.—ಕೇಂದ್ರ ಸರ್ಕಾರದವರು ತಮಗೂ ಆದೇಶ ಕೊಟ್ಟಿದ್ದಾರೆ. ಮಿನಿಮಮ್ ವೇಜಸ್ ಫಿಕ್ಸ್ ಮಾಡುವುದಕ್ಕೆ ಅಖಿಲ ಭಾರತ ಕಾರ್ಮಿಕ ಪ್ರತಿನಿಧಿಗಳ ಸಭೆಯನ್ನು ಕರೆಯಬೇಕೆಂದು ಆದೇಶ ಕೊಟ್ಟಿದ್ದರು. ಆ ಪ್ರಕಾರ ತಾವು ಒಮ್ಮೆ ಕರೆದಿದ್ದೀರಿ, ಅಲ್ಲಿಗೆ ಕೈ ಬಿಟ್ಟಿದ್ದೀರಿ. ಕೇಂದ್ರ ಸರ್ಕಾರದವರು ಕೈಬಿಟ್ಟರೂ ತಾವು ಏತಕ್ಕೆ ಪ್ರಯತ್ನ ಮಾಡಲಿಲ್ಲ.

ಶ್ರೀ ಎ. ಬಿ. ಜಕನೂರ್.—ತಾವು ಹೇಳುವುದು ನಿಜವಿದೆ. ಈ ವಿಷಯ ಪ್ರಸ್ತಾಪಕ್ಕೆ ಬಂತು. ಕೆಲವೊಂದು ರಾಜ್ಯದವರು ನಮ್ಮ ರಾಜ್ಯಗಳಲ್ಲಿ ನಾವು ನಾವೇ ಮಾಡುತ್ತಿದ್ದೇವೆಂದು ಹೇಳಿದರು. ಒಂದು ವೇಳೆ ಹಾಗೆ ತೆಗೆದುಕೊಳ್ಳಬೇಕಾದರೆ ಈಗ ಏನಾಗಿದೆ ಅಂದರೆ ರಾಜ್ಯ ಸರ್ಕಾರ As per the law the State Government have to fix the wages. ನ್ಯಾಷನಲ್ ವೇಜಸ್ ಫಿಕ್ಸ್ ಮಾಡಬೇಕಾದರೆ ಕೇಂದ್ರ ಸರ್ಕಾರ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಫಿಕ್ಸ್ ಮಾಡಬೇಕಾದರೆ ಕಾಯದೆಯನ್ನು ದುರಸ್ತಿ ಮಾಡಬೇಕಾಗುತ್ತದೆ. ಆಗ ಕೆಲವು ಸಮಯ ಬೇಕಾಗುತ್ತದೆ, ಅದು ಹಾಗೆಯೇ ಉಳಿಯಬಾರದೆಂದೂ ಕೇಂದ್ರ ಸರ್ಕಾರದವರು ಯಾವಾಗ ಮಾಡುತ್ತಾರೋ ಎನ್ನುವ ಅಭಿಪ್ರಾಯಕ್ಕೆ ಬಂದು ಡಿಸ್‌ಪ್ಯಾರಿಟಿ ಕಡಿಮೆ ಮಾಡಿ ೨೫ ಪೈಸೆಗಳಿಗಿಂತ ಜಾಸ್ತಿ ಇರಬಾರದೆಂದು ಆ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ಒಂದು ಸಾವಿರ ಬೀಡಿಯನ್ನು ಒಬ್ಬ ಮನುಷ್ಯ ಒಂದು ದಿವಸಕ್ಕೆ ಕಟ್ಟಬಹುದು ಎನ್ನುವ ಅಭಿಪ್ರಾಯ ಇದೆ. With a view to reduce the disparity the Ministers of the State came to the conclusion ಒಂದು ಸಾವಿರ ಬೀಡಿ ಕಟ್ಟಿದರೆ ಎಷ್ಟು ರೇಟ್ ಇರಬೇಕೆಂದು ಹೇಳುವಾಗ wages may be **fixed on** All-India Index basis with reference to the basis needs of the workers. So on this bases and with reference to All India Consumers price-index number. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ರೇಟನ್ನು ಫಿಕ್ಸ್ ಮಾಡುವಾಗ ೨೫ ಪೈಸೆಗಳಿಗಿಂತ ಹೆಚ್ಚು ಮಾಡಬಾರದೆಂದು ತೀರ್ಮಾನ ಮಾಡಲಾಗಿದೆ. Ministers agreed that the minimum wages for employment in Beedi Indistries may be fixed this year between Rs. 7-8 per day. ನಮ್ಮ ರಾಜ್ಯ ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ರಾಜ್ಯದವರನ್ನು ಕೇಳಿಕೊಂಡಿದ್ದೇವೆ.

ಶ್ರೀ ಮೈಖೇಲ್ ಫರ್ನಾಂಡೀಸ್.—ಕೇರಳ ರಾಜ್ಯವನ್ನು ಏತಕ್ಕೆ ಬಿಟ್ಟಿದ್ದೀರಿ ?

ಶ್ರೀ ಎ. ಬಿ. ಜಕನೂರ್.—ಕೇರಳ ಏತಕ್ಕೆ ಕನ್ಸಿಡರ್ ಮಾಡಲಿಲ್ಲ ಅಂದರೆ ಅಲ್ಲಿ ರೇಟು ಬಹಳ ಹೈ ಇದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಕೇರಳದವರು, ನಮ್ಮಲ್ಲಿ ೫ ಪೈಸೆ ಜಾಸ್ತಿ ಮಾಡಿದಾಗ ಅವರು ನಮ್ಮ ಸರ್ಕಾರದ ಮೇಲೆ ಚಾಲೇಂಜಿಂಗ್ ತೆಗೆದುಕೊಂಡು ದಿನೇಶ್ ಬೀಡಿ ಎಂದು ಮಾಡಿಕೊಂಡು ೧೨ ರೂಪಾಯಿ ಕೊಡುತ್ತಿದ್ದಾರೆ. ಜೊತೆಗೆ ಡೆತ್ ಫಂಡ್, ಇನ್ಸ್‌ರೆನ್ಸ್ ಮಾಡುತ್ತಿದ್ದಾರೆ. ನೀವು ೮ ರೂಪಾಯಿಗೆ ಫಿಕ್ಸ್ ಮಾಡಿ.

ಶ್ರೀ ಎ. ಬಿ. ಜಕನೂರ್.—ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಿ. ಕಲ್ಕತ್ತ ಮತ್ತು ಕೇರಳದಲ್ಲಿ ಎಷ್ಟಿದೆ ಎಂಬುದನ್ನು ಹೇಳುತ್ತೇನೆ. ಕೇರಳದಲ್ಲಿ ಹೆಚು ಇತ್ತು, ಒರಿಸ್ಸಾದಲ್ಲಿ ೩ ರೂಪಾಯಿ ಇತ್ತು. ಕೇರಳ ಲೆವೆಲ್‌ಗೆ ಹೋದರೆ ಬಹಳ ಆಗುತ್ತದೆಂದು ಎಲ್ಲಾ ರಾಜ್ಯದ ಮಂತ್ರಿಗಳು ಈ ವರ್ಷ ೭-೮ ರೂಪಾಯಿ ಮಾಡೋಣ, ಮತ್ತೆ ರಿವಿಷನ್ ಮಾಡೋಣವೆಂದು ಮಾಡಿದ್ದೇವೆ. ನಾವು ನಿಮ್ಮ ಲೆವೆಲ್‌ಗೆ ಬರುವ ತನಕ ನೀವು ರೈಸ್ ಮಾಡಬೇಡಿ ಎಂದು We requested the Hon'ble

Minister who was present there on behalf of the Kerala Govt. ನೀವು ರೈಸ್ ಮಾಡಬೇಡಿ ಎಂದು ಕೇಳಿಕೊಂಡಿದ್ದೇವೆ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಅವರ ಜೊತೆ ಮಾತನಾಡಿದ್ದೇವೆ. ಪ್ರಿಲಿಮಿನರಿ ನೋಟಿಫಿಕೇಶನ್ ರೆಡಿ ಇತ್ತು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ತಾವು ಹೆಚ್ಚಿಗೆ ಕೊಡುವುದಕ್ಕೆ ಇಷ್ಟವಿಲ್ಲದಿದ್ದರೆ, ಕೇರಳದವರು ಹೆಚ್ಚಿಗೆ ಕೊಡುವುದನ್ನು ಕಡಿಮೆ ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ಎ. ಬಿ ಜಕನೂರ್.—ಆ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು ಹೇಳಿದ್ದೇವೆ. ಅವರು ಹೆಚ್ಚು ಮಾಡುವುದನ್ನು ಮಾಡುತ್ತಾರೆ, ನಮ್ಮ ರಿಕ್ವೆಸ್ಟ್ ಅಷ್ಟೆ. ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದು ಇಷ್ಟು ಮಾಡಿದ್ದೇವೆ. for rolling 1000 jodi beedies irrespective of the price Rs. 7.20 paise. for rolling Sadhu beedies Rs. 7-00 from 1-1-1982. ಈ ಡಿಸ್‌ಪ್ಯಾರಿಟಿ ಏತಕ್ಕೆ ಆಯಿತು ಅಂದರೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವ್ಯತ್ಯಾಸವಿರಬೇಕೆಂದು ಈ ರೀತಿ ರೇಟ್ ಫಿಕ್ಸ್ ಮಾಡಲಾಗಿದೆ. ಮುಂದೆ ಎಲ್ಲರೂ ಹೆಚ್ಚು ಮಾಡೋಣವೆಂದು ಹೇಳಿದ್ದಾರೆ ಅದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ತಮಿಳುನಾಡಿನಲ್ಲಿ ೭ ರೂಪಾಯಿ ೨೦ ಪೈಸೆ ಕೊಟ್ಟರೂ ವ್ಯಾರಿಯಬಲ್ ಡಿ. ಎ. ಆಡ್ ಮಾಡಿದ್ದಾರೆ. All the State Governments should take immediate steps to revise the mi imum wages for employment in beedi industries so as to be effective latest by 1-1-1982. there should be a notification which inclusive of dearness allowance linked with Madras City CPI No. 4/81 which is based on 1960-100. In future the rates will be for every five points over and above the average index number of Madras City for the year 1981 increase of 2 paise shall be paid as dearness allowance. I am telling what the Tamil Nadu has done.

ಶ್ರೀ ಬಿ. ವಿ ಕಕ್ಕಿಲಾಯ.—ಈಗಿನ ಕಾಸ್ಟ್ ಆಫ್ ಲೀವಿಂಗ್ ತೆಗೆದುಕೊಂಡರೆ ೮ ರೂಪಾಯಿ ೧೦ ಪೈಸೆಗಿಂತ ಜಾಸ್ತಿಯಾಗುತ್ತದೆ.

ಶ್ರೀ ಎ. ಬಿ. ಜಕನೂರ್.—ಇದ್ದದ್ದು ಹೇಳುತ್ತಿದ್ದೇನೆ. ಜಾಸ್ತಿಯಾಗುತ್ತದೋ ಕಡಿಮೆಯಾಗುತ್ತದೋ ಅದು ಬೇರೆ. ಅಲ್ಲಿ ಅವರು ಏನು ಮಾತನಾಡಿದರು ಎಂದರೆ ಈ ರೀತಿ ಹೇಳಿದರು. Some States found it difficult to revise the minimum wages. They introduced the ADA formula. They should add the ADA or every year revise the minimum wages. In Tamilnadu, they have made that the first claculation shall be effective from 1st April, 1983 based on the average consummer price index. for Madras City from January, 1982 to December, 1982. ೧೯೮೨ ರಲ್ಲಿ ೭.೧೦ ಪೈಸೆ ಮಾಡಿದಾಗ ಕ್ಯಾಲುಕಲೇಷನ್ ಪ್ರಕಾರ ೫ ಪಾಯಿಂಟ್ಸ್ ಆದರೆ ಇಲ್ಲಿ Two paise they will get more. ಆ ಮೇಲೆ ಆಂಧ್ರ ಪ್ರದೇಶದವರು ಏನು ಮಾಡಿದ್ದಾರೆ ಎಂದರೆ ಅವರು ಒಂದು ಜೋನ್ ಮಾಡಿದ್ದಾರೆ. ನಾನು ಮ್ಯಾಕ್ಸಿಮಮ್ ಬಗ್ಗೆ ಹೇಳುತ್ತೇನೆ. ಮಿನಿಮಮ್ ಬೇಡ. ಅಲ್ಲಿ ಮ್ಯಾಕ್ಸಿಮಮ್ ೭.೩೦ ಪೈಸೇ, ಮಿನಿಮಮ್ ೭.೨೦ ಪೈಸೇ. ಅವರು ವೇರಿಯಬಲ್ ಡಿ ಎ. ಆಡ್ ಮಾಡಲಿಲ್ಲಾ, ಮಹಾರಾಷ್ಟ್ರದವರೂ ಕೂಡ ಆಡ್ ಮಾಡಲಿಲ್ಲಾ. We thought it better to revise every year. Again we have taken up for revision. The file has come. For the year 1983, we are revising and before December, final notification will be issued to be effective from January, 1983. ಈವೊತ್ತಿನ ದಿವಸ ನಾವು ಅದನ್ನು ಕನ್ಸಿಡರ್ ಮಾಡಿ ನೋಡುವುದಾದರೆ ೭.೨೦ ತಮಿಳ್‌ನಾಡಿನಲ್ಲಿದೆ, ೭.೩೦ ಆಂಧ್ರ ಪ್ರದೇಶದಲ್ಲಿದೆ, ೭.೪೦ ನಾವು ಮಾಡಿದ್ದೇವೆ. ಈ ವರ್ಷ ನಾವೇನೂ ಕಡಿಮೆ ಮಾಡಿಲ್ಲಾ. ತಾವು ಈಗ ೮ ಮಾಡಬೇಕು ಅಂತ ಹೇಳಿದಿರಿ, ಹಾಗೆ ಮಾಡಿದರೆ there will be disparity. ಹಾಗೆ ತೊಂದರೆಯಾಗಬಾರದು

ಅಂತ ನಾವು ಕಾರ್ಮಿಕರ ಬಗ್ಗೆ ಈ ಒಂದು ನಿಲುವನ್ನು ತೆಗೆದುಕೊಂಡಿದ್ದೀವಿ. ಇನ್ನೂ ಇದಕ್ಕಿಂತಲೂ ಹೆಚ್ಚಿಗೆ ಮಾಡಿದರೆ ಸರಿಹೋಗಲಾರದು ಅಂತ ಮಾಡಲಿಲ್ಲ. ಆದರೆ ಮಾಲೀಕರ ಅಭಿಪ್ರಾಯ ಏನು ಇತ್ತು ಎಂದರೆ ೧೦೦೦೦ ಬೀಡಿಗೆ ೬.೯೫ ಇರಬೇಕೆಂದು ಇತ್ತು. ಈ ಬಗ್ಗೆ ಅವರು ರೆಪ್ರೆಸೆಂಟೇಷನ್ ಸಹ ಕೊಟ್ಟಿದ್ದಾರೆ. ಅವರು ಕೇಂದ್ರ ಸರ್ಕಾರಕ್ಕೂ ಕೂಡ ಬರೆದಿದ್ದಾರೆ, ನಮಗೂ ಬರೆದಿದ್ದಾರೆ. ಬೋರ್ಡ್ ಮುಂದೆ ಆರ್ಗ್ಯು ಸಹ ಮಾಡಿದ್ದಾರೆ. ಎಲ್ಲಾ ಕಡೆಯೂ ಮೇಜರ್ ಆಗಿ ಹೇಳುವುದು ೮.೧೦ ಇರಬೇಕು ಎಂದು. ಇವನ್ನು ನಾವು ಕನ್ಸಿಡರ್ ಮಾಡಬೇಕಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಇನ್ನೂ ವ್ಯವಸ್ಥೆ ಮಾಡಿಲ್ಲಾ. ಈ ಮೀಟಿಂಗ್ ಅನ್ನು ಯಾರು ಮಾಡಿದರು ಎಂದರೆ ಮಧ್ಯ ಪ್ರದೇಶದವರು ಮತ್ತು ಇನ್ನು ಇತರೇ ರಾಜ್ಯಗಳ ಕೆಲವು ಮಂತ್ರಿಗಳು ಸೇರಿ ಒಂದು ಸಭೆ ಕರೆದು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡರು. ಎಲ್ಲಾ ಇಂಡಸ್ಟ್ರೀಸ್ ಕೂಡ ಒಂದೇ ಕಡೆ ಮೈಗ್ರೇಟ್ ಆದರೆ ನಾವು ಹೀಗೆ ಮಾಡಬೇಕಾಗುತ್ತದೆ ಎಂದು ಹೇಳಿ ಈ ಒಂದು ನಿರ್ಣಯವನ್ನು ತೆಗೆದುಕೊಂಡರು. ಅವರು ಈ ಒಂದು ಸಭೆಯನ್ನು ಕರೆಯದೇ ಹೋಗಿದ್ದರೆ ಬಹುಶಃ ೮.೧೦ ಆಗುತ್ತಿತ್ತೋ ಏನೋ. ಮಾನ್ಯ ಸದಸ್ಯರು ಮಾತನಾಡುವಾಗ ಏನು ಹೇಳಿದರು ಎಂದರೆ ನಮ್ಮನ್ನು ಸೂಟ್ ಕೇಸ್ ತೆಗೆದುಕೊಂಡು ಬರುತ್ತಾರೆ. ಬ್ಯಾಗ್ ತೆಗೆದುಕೊಂಡು ಬರುತ್ತಾರೆ ಅಂತ ಹೇಳುತ್ತಾರೆ. ದಯವಿಟ್ಟು ನಾನು ಹೇಳುತ್ತೇನೆ ಕೇಳಿ. ಅದು ಹೆಚ್ಚುವುದಿಲ್ಲ. ಆದುದರಿಂದ ಸೂಟ್ ಕೇಸ್ ಆಗಲಿ ಈ ಬ್ಯಾಗ್ ಆಗಲಿ ನಾನು ಎಂದೂ ನೋಡುವವನಲ್ಲ ಅಲ್ಲದೆ ನಾನು ಹುಟ್ಟಿದಾಗಿನಿಂದಲೇ ಈ ಸಮಾಜವಾದದಲ್ಲಿ ವಿಶ್ವಾಸ ಇಡುವಂಥಾ. ನಮ್ಮ ಧರ್ಮದಲ್ಲಿ ಒಂದು ತತ್ವ ಇದೆ. ಅಪರಿಗ್ರಹ ಎಂದು. ಅಂದರೆ ಯಾರು ಹೆಚ್ಚು ಅನ್ಯಾಯ ಮಾಡಿ ಸಂಪಾದನೆ ಮಾಡತಕ್ಕಂಥಾದ್ದು ಯೋಗ್ಯವಲ್ಲ, ಒಂದು ವೇಳೆ ನ್ಯಾಯವಾಗಿ ಸಂಪಾದನೆ ಮಾಡಿದರೂ ಕೂಡ ತನ್ನ ಸಂಸಾರದ ಬಳಕೆಗೆ ಎಷ್ಟು ಹಣ ಇರಬೇಕೋ ಅದಕ್ಕಿಂತ ಹೆಚ್ಚು ಹಣ ಇರಕೂಡದು. ತಮಗೆ ಹೇಳಬೇಕಾದರೆ ಕಾರ್ಮಿಕರಲ್ಲಿ ನಿಮಗಿಂತಲೂ ಹೆಚ್ಚಿನ ಕಳಕಳಿ ನನಗೆ ಇದೆ, ಅವರ ಕಷ್ಟ ಏನು ಅನ್ನುವುದು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಯಾರೇ ಆಗಲಿ ಸೂಟ್ ಕೇಸನ್ನಾಗಲಿ ಬ್ಯಾಗನ್ನಾಗಲಿ ತೆಗೆದುಕೊಂಡರೆ ಅದು ಹೆಚ್ಚುವುದಿಲ್ಲ. ಈ ಮಾತನ್ನು ತಾವು ಎಲ್ಲಿಯಾದರೂ ನನ್ನನ್ನು ಪ್ರಮಾಣ ಮಾಡಿ ಹೇಳಿ ಎಂದರೆ, ಹೇಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಮಂತ್ರಿಗಳು ಎನ್‌ಕ್ವೈರಿ ಮಾಡಲಿಕ್ಕೆ ಏರ್ಪಾಡು ಮಾಡಿದರೆ ನಾನು ದಾಖಲೆಗಳನ್ನು ಕೊಡುತ್ತೇನೆ.

ಶ್ರೀ ಎ. ಬಿ. ಜಕನೂರ್.—ನೋಡೋಣ. ನನ್ನ ಹೇಳಿಕೆಯಲ್ಲಿ ಸಬಲವಾದ ಕಾರಣಗಳು ಇವೆ, ದಯವಿಟ್ಟು ಕೇಳಬೇಕು ಕೇಂದ್ರ ಸರ್ಕಾರದವರೇ ಅಲ್ಲ, ಎಲ್ಲಾ ಮಂತ್ರಿಗಳೂ ಕೂಡ ಈ ಸಭೆಯಲ್ಲಿ ಬಂದು ತೆಗೆದುಕೊಂಡಂಥಾ ನಿರ್ಣಯಕ್ಕನುಗುಣವಾಗಿ ೨೦ ಪೈಸೇ ಕೊಟ್ಟರೆ ನಮ್ಮ ನೆರೆ ರಾಜ್ಯದವರಿಗೆ ತೊಂದರೆ ಆಗಬಾರದು ಅಂತ ಹೇಳಿದರು. ಅದರಂತೆ ನಾವು ೭.೨೦ ರಿಂದ ೭.೪೦ ಮಾಡುವುದಕ್ಕೆ ಬರುತ್ತಿತ್ತು. ಆದಷ್ಟು ಕಡಿಮೆ ಎಂದರೆ ೭.೬೦ಕ್ಕೆ ಬರುತ್ತದೆ. ಇದು ಎಲ್ಲಾ ಕಡೆಯೂಲ್ಲೂ ಇಲ್ಲ ಈ ದೃಷ್ಟಿಯನ್ನಿಟ್ಟುಕೊಂಡು ಈ ಬಗ್ಗೆ ಮಹತ್ವವಾದ ನಿರ್ಣಯ ಮಾಡಿದೆ. ಇದರಲ್ಲಿ ಇನ್ನೇನೂ ಬೇರೆ ಉದ್ದೇಶ ಇಲ್ಲ. ಒಂದು ಕಡೆ ಮಾಲೀಕರು ಹೇಳುತ್ತಾರೆ ಈ ಆಜ್ಞೆಯನ್ನು ಅವರು ಹೇಳಿದಹಾಗೆ ಮಾಡಿದರೆ ರಿಟ್ ಪಿಟಿಷನ್ ಹೆಚ್ಚಾಗುತ್ತದೆ. ಎಷ್ಟೋ ಕಡೆಗಳಲ್ಲಿ ಹೀಗೆ ಆಗಲಿಲ್ಲಾ ಎಂದು ರಿಟ್ ಫೈಲ್ ಮಾಡಿದ್ದಾರೆ. Why should they go to the High Court ? They have questioned this Notification. The writ petition is pending. They are also aggrieved......

ಶ್ರೀ ಬಿ. ವಿ. ಕಕ್ಕಿಲಾಯ.—ಹೈಕೋರ್ಟ್‌ನವರು ಸ್ಟೇ ಕೊಟ್ಟಿಲ್ಲವಲ್ಲಾ.

ಶ್ರೀ ಎ. ಬಿ. ಜಕನೂರ್.—ಕೆಲವಕ್ಕೆ ಸ್ಟೇ ಕೊಟ್ಟಿದ್ದಾರೆ, ಕೆಲವಕ್ಕೆ ಸ್ಟೇ ಕೊಟ್ಟಿಲ್ಲಾ. ಇನ್ನು ಪ್ರಾವಿಡೆಂಟ್ ಫಂಡ್ ಬಗ್ಗೆ ಹೇಳುವುದಾದರೆ ಪ್ರಾವಿಡೆಂಟ್ ಫಂಡ್ ಕಮೀಷನರಿಗೆ ಹೇಳಿದ್ದೇವೆ. ಅಲ್ಲಿ ಕಾರ್ಮಿಕರಲ್ಲಿ ಏನು ವಸೂಲ್ಮಾಡಿದ್ದರೋ ಅದನ್ನು ಕ್ಯಾಲಿಕುಲೇಟ್ ಮಾಡಿ ಆ ಹಣವನ್ನು ತುಂಬಬೇಕು ಎಂದು ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ ಒಂದು ವೇಳೆ ಮುಂದೆ ಯಾರಾದರೂ ಕಲೆಕ್ಟ್ ಮಾಡಿದರೆ ಅವರಿಗೆ ರಶೀತಿ ಕೊಡಬೇಕು ಎಂದು ಹೇಳಿದ್ದೇವೆ, ಅದಕ್ಕೆ ಅವರು ಒಪ್ಪಿಕೊಳ್ಳುತ್ತಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನು ಆ ಪ್ರಶ್ನೆಯನ್ನು ಎತ್ತಲಿಲ್ಲಾ. ಅವರು ಯಾವ ತಾರೀಕಿನಿಂದ ವಸೂಲ್ಮಾಡುತ್ತಿದ್ದಾರೋ ಆ ತಾರೀಕು ಫಿಕ್ಸ್ ಮಾಡಿ ಎಂದು. ಜನವರಿ ೧೯೬೦ ರಿಂದ ಮಾಡಿದ್ದಾರೆ. ಅದರ ಹಿಂದಿನದ್ದು ಏನಾಯಿತು ?

ಶ್ರೀ ಎ. ಬಿ. ಜಕನೂರ್.—ಅದನ್ನೂ ಸಹ ತುಂಬಿ ಅಂತ ಹೇಳಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ತಮಗೆ ಹೇಳಬೇಕಾದರೆ ಪ್ರಾವಿಡೆಂಟ್ ಕಮೀಷನರ್ ಹತ್ತಿರ ಈ ಮಾತನಾಡಿದಾಗ ಟ್ರೇಡ್ ಯೂನಿಯನ್‌ನವರು ಇರಲಿಲ್ಲಾ, ಅವರ ಹತ್ತಿರ ಬೇರೆಯವರು ಹೋಗಿ ಒಪ್ಪಂದ ಮಾಡಿಕೊಂಡು ಬಂದಿದ್ದಾರೆ. ಅವರ ಪ್ರಕಾರ ೯ ತಿಂಗಳಿಂದ ವರ್ಕರ್ಸ್ ಹತ್ತಿರ ಏನು ವಸೂಲ್ಮಾಡಿದ್ದಾರೆ. ಅದರ ಬಗ್ಗೆ ತೀರ್ಮಾನವೇ ಇಲ್ಲ ಅದರ ಬಗ್ಗೆ ಅವರು ತುಂಬಲಿಕ್ಕೆ ಒಪ್ಪಿಕೊಂಡಿಲ್ಲಾ. ನೀವು ಹೇಳಿದ ಹಾಗೆ ಮಾಡಿದರೆ ನಾನು ಹೇಳಲೇ ಬೇಕಾಗಿಲ್ಲಾ.

ಶ್ರೀ ಎ. ಬಿ. ಜಕನೂರ್.—ಬೇಕಾದರೆ ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ತುಂಬಿಸೋಣ. ಅವರು ಅಲ್ಲಿಯವರೆಗೆ ಏನು ಕಲೆಕ್ಟ್ ಮಾಡಿದ್ದಾರೆ ಅದನ್ನು ಕಲೆಕ್ಟ್ ಮಾಡಿ ಅದನ್ನು ತುಂಬಿಸೋಣ. ಮುಂದೆ ಏನಾದರೂ ಕಲೆಕ್ಟ್ ಮಾಡಿದರೆ ಅದಕ್ಕೆ ರಶೀತಿ ಕೊಡುವ ಹಾಗೆ ಹೇಳಿದ್ದೇವೆ. ಯಾರಾದರೂ ರಿಟ್ ಫೈಲ್ ಮಾಡಿದ್ದರೆ ಅವರಿಗೆ ಹಾಗೆ ಮಾಡಿಲ್ಲಾ. ಕೆಲವರು ಆ ದುಡ್ಡನ್ನು ತುಂಬಬೇಕು ಎಂದು ಪ್ರೊಟೆಸ್ಟ್ ಮಾಡುತ್ತಿದ್ದಾರೆ, ಆ ಬಗ್ಗೆ ಏನೂ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಅದನ್ನು ಮತ್ತೆ ಬೇಕಾದರೆ ಪರಿಶೀಲಿಸಿ ಆ ಕೆಲಸವನ್ನು ಮಾಡಿಸೋಣ.

ಇನ್ನು ಹೋಟೆಲ್ಸ್ ಮತ್ತು ಸಿನಿಮಾಗಳ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಒಂದು ಪದೇ ಪದೇ ಬರುತ್ತಾ ಇದೆ, ಹೋದಸಲವೂ ಸಹ ಈ ಮನೆಯಲ್ಲಿ ಹೇಳಿದ್ದರು. ಒಂದು ಬಿಲ್ಲೂ ಸಹ ಬಂದಿತ್ತು. ಈ ಬಗ್ಗೆ ಒಂದು ಪಾಂಪ್ಲೆಟ್ಸ್ ಅನ್ನು ಹಂಚಿದ್ದರು. ೨೦ ಲಕ್ಷವೋ ೧೦೦ ಲಕ್ಷವೋ ನನಗೆ ಸರಿಯಾಗಿ ಏನೂ ಗೊತ್ತಿಲ್ಲ, ಏನೋ ಮಾಡಿದ್ದರು. ಅದರ ಬಗ್ಗೆ ತಮಗೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಒಂದು ಪ್ರಿಲಿಮಿನರಿ ನೋಟಿಫಿಕೇಷನ್ ತಾವು ನೋಡಿರಬಹುದು, ಫೈನಲ್ ನೋಟಿಫಿಕೇಷನ್ ಸಹ ತಾವು ನೋಡಿರಬಹುದು. ಅದರಲ್ಲಿ ನೋಡಿದರೆ ಈಗ ಏನೇನೂ ವ್ಯತ್ಯಾಸವಾಗಿಲ್ಲ. ಇದರಲ್ಲಿ ನನ್ನದು ಒಂದು ಅಭಿಪ್ರಾಯ ಇತ್ತು. ಅದೇನೆಂದರೆ ನಾಳೆ ದಿವಸ ಇದೇನಾದರೂ ಹೈಕೋರ್ಟಿಗೆ ಹೋದರೆ, ಅವರು ಏನಾದರೂ ಸ್ಟೇ ಕೊಟ್ಟರೆ ಆವಾಗ ಈ ಕಾರ್ಮಿಕರ ಕಲ್ಯಾಣ ಆಗುವುದಿಲ್ಲ. ಆದುದರಿಂದ ನನ್ನ ಅಭಿಪ್ರಾಯ ಏನೆಂದರೆ ಇದಕ್ಕೆ ಸಂಬಂಧಪಟ್ಟ ಯೂನಿಯನ್‌ನವರನ್ನೂ ಕರೆಸಿ ಮಾಲೀಕರನ್ನೂ ಕರೆಸಿ ಒಂದು ಜಂಟಿ ಸಭೆ ಏರ್ಪಾಡು ಮಾಡಿ ಇಬ್ಬರ ವಾದವಿವಾದವನ್ನು ಕೇಳಿ ೫ ಪರ್ಸೆಂಟ್ ಹೆಚ್ಚು ಕಡಿಮೆ ಮಾಡಿ ಅವರ ಒಪ್ಪಿಗೆಯನ್ನೂ ಸಹ ತೆಗೆದುಕೊಂಡು ಒಂದು ಫೈನಲ್ ನೋಟಿಫಿಕೇಷನ್ ಮಾಡಿದರೆ ನಾಳೆ ದಿವಸ ಹೈಕೋರ್ಟಿಗೆ ಹೋಗುವುದು ಬಂದ್ ಆಗುತ್ತದೆ ಎನ್ನುವುದು ನನ್ನ ಭಾವನೆ. ಜನವರಿ-ಫೆಬ್ರುವರಿಯಲ್ಲಿ ಈ ಸದನ ನಡೆದಾಗ ಶ್ರೀ ಬಿ. ವಿ. ಕಕ್ಕಿಲಾಯ ಅವರು ಬಹಳಷ್ಟು ಮಾತನಾಡಿದ್ದಾರೆ. ನಾವು ಕೊಟ್ಟಿರುವುದು ಬಹಳ ಕಡಿಮೆ ಎಂದು ಸರ್ಕಾರದ ಮೇಲೆ ವ್ಯಯಕ್ತಿಕ ಆಪಾದನೆ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರಾದ ಶ್ರೀ ಎ. ಲಕ್ಷ್ಮೀಸಾಗರ್‌ರವರು ಮೊನ್ನೆ ದಿವಸ ಮಾತನಾಡುವಾಗ ಹೋಗಲಿ, ಮುಂದೆಯಾದರೂ ಇದನ್ನು ಬೇಗನೆ ಮಾಡಿ ಎಂದು ಹೇಳಿದ್ದಾರೆ. ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಮಾತನ್ನು ನಾನು ಮುಖ್ಯಮಂತ್ರಿಗಳಿಗೂ ಕೂಡ ಹೇಳಿದ್ದೇನೆ. ನಾನು ಹೇಳಿದ ರೀತಿ ಮಾತನಾಡಿದರೆ ನಾಳೆ ದಿವಸ ಅವರು ಹೈಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲ, ಅಂತ ಹೇಳಿದ್ದೇನೆ. ಈ ಸದನದಲ್ಲಿ ಮಾನ್ಯ ಸದಸ್ಯರು ಮಾತನಾಡುವಾಗ ಇದನ್ನು ವಿಶೇಷವಾಗಿ ಪ್ರಸ್ತಾಪ ಮಾಡಿ, ನಾವು ಕೊಟ್ಟಿರುವುದು ಏನೂ ಕಡಿಮೆ, ಇದರಲ್ಲಿ ಏನೋ ವ್ಯವಹಾರ ನಡೆದಿದೆ ಅನ್ನುವುದನ್ನು ಸಂಶಯಪಟ್ಟು ಮಾತನಾಡಿದ್ದಾರೆ. ತಮಗೆ ಹೇಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಇದನ್ನು ಏನೂ ಬದಲಾವಣೆ ಮಾಡುವುದೂ ಬೇಡ ಹಾಗೇನೇ ಇಷ್ಯೂ ಮಾಡುತ್ತೇನೆ ಎಂದು ಹೇಳಿದಾಗ ಅವರು ಇದನ್ನು ಕಡಿಮೆ ಮಾಡಬೇಡಿ ಇದ್ದಷ್ಟೇ ಇಷ್ಯೂ ಮಾಡಿ ಎಂದು ಹೇಳಿದರು. ಸ್ವಾಮಿ, ಈ ಹೋಟೆಲರ್ಸ್, ಸಿನಿಮಾ ಮತ್ತು ಇತರ ಇಂಡಸ್ಟ್ರೀಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ನಾವು ಯಾವುದರಲ್ಲೂ ಕಡಿಮೆ ಮಾಡಿಲ್ಲ. You must have seen that. Except the variable D. A. ಅದರಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿದ್ದೇವೆ.

ಶ್ರೀ ಕೆ. ಭಾಸ್ಕರನಾಯ್ಡು.—ಇವರು ಇಲ್ಲಿ ಸುಮ್ಮನೆ ಹೇಳುತ್ತಿದ್ದಾರೆ' ಎಂದು ಮಾನ್ಯ ಕಕ್ಕಿಲಾಯರವರು, ಶ್ರೀ ಬೊಮ್ಮಾಯಿಯವರು, ಶ್ರೀ ಮೈಕೇಲ್ ಫರ್ನಾಂಡಿಸ್‌ರವರು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಇದರಲ್ಲಿ ಅದು ಏನಿದೆ ಎಂಬುದನ್ನು ಈಗಲಾದರೂ ಹೇಳಿ. ಹೋಟೆಲ್‌ದು ಇದೆ, ಬೀಡಿದು ಇದೆ ಎಂದು ಮೊದಲಿನಿಂದಲೂ ಹೇಳುತ್ತಿದ್ದರು. ದಿನಾ ಕೇಳಿ–ಕೇಳಿ ನಮಗೆ ಸಾಕಾಗಿದೆ. ಈಗಲಾದರೂ ಅದು ಏನು ಎಂಬುದನ್ನು ಹೇಳಲಿ.

ಶ್ರೀ ಬಿ. ವಿ. ಕಕ್ಕಿಲಾಯ.—ನಾವು ಈ ಬಗ್ಗೆ ಬಹಿರಂಗವಾಗಿ ಹ್ಯಾಂಡ್‌ಬಿಲ್ ಪಬ್ಲಿಷ್ ಮಾಡಿದ್ದೇವೆ. ಇನ್ನೂ ಬೇಕಾದರೆ ಸಾವಿರಾರು ಜನರನ್ನು ಕೂರಿಸಿ ಹೊರಗಡೆ ಅದನ್ನು ಹೇಳುವುದಕ್ಕೆ ನಾವು ತಯಾರು ಇದ್ದೇವೆ. ಅವರು ನಮ್ಮ ಮೇಲೆ ಮಾನನಷ್ಟ ವ್ಯಾಜ್ಯವನ್ನು ಹಾಕಲಿ. ಕೋರ್ಟಿನಲ್ಲಿ ನೋಡಿಕೊಳ್ಳೋಣ. ಅವರು ಪ್ರೂವ್ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಆಮೇಲೆ ಪರಿಣಾಮ ಏನಾಗುತ್ತದೆ ನೋಡಿಕೊಳ್ಳೋಣ. ನಾವು ಅದನ್ನು ವಿಧಾನಸೌಧದ ಮುಂದೆ ಎಲ್ಲರ ಎದುರುಗಡೆ ಹೇಳುವುದಕ್ಕೆ ತಯಾರು ಇದ್ದೇವೆ, ಇಲ್ಲ ಎಂದರೆ ಮಾನ್ಯ ಮುಖ್ಯ ಮಂತ್ರಿಯವರು ಈ ಬಗ್ಗೆ ಎನ್‌ಕ್ವೈರಿಗೆ ಏರ್ಪಾಟು ಮಾಡಲಿ, ನಾವು ಅಲ್ಲಿ ಎವಿಡೆನ್ಸ್ ಕೊಡುತ್ತೇವೆ.

ಶ್ರೀ ಕೆ. ಭಾಸ್ಕರನಾಯ್ಡು.—ನಾವು ನಿಮ್ಮದು ಎಲ್ಲಾ ಸ್ಟಂಟ್‌ಗಳನ್ನು ನೋಡಿದ್ದೇವೆ. ಇಲ್ಲಿ ಏನೋ ಒಂದು ಹೇಳಿಬಿಡುವುದು, ಅಲ್ಲಿ ಹೋಗಿ ಗಲಾಟೆ ಮಾಡಿಸುವುದು. ಈಗ ನೀವು ಹೇಳಿ. ಅದು ಕರೆಕ್ಟಾಗಿ ಇದ್ದರೆ ನಾವು ಬೇಕಾದರೆ ನಿಮಗೆ ಸಪೋರ್ಟ್ ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಭಾಸ್ಕರನಾಯ್ಡುರವರೇ, ನಾವು ಮಾನ್ಯ ಮಂತ್ರಿಯವರು ಅವರ ಉತ್ತರದಲ್ಲಿ ಆ ಬಗ್ಗೆ ಏನು ಹೇಳುತ್ತಾರೆಯೋ ಅದನ್ನು ಕೇಳಿಕೊಂಡು ಆಮೇಲೆ ಹೇಳಬೇಕು ಅಂತ ಇದ್ದೇವೆ. ನೀವು ಈ ಮಧ್ಯದಲ್ಲೇ ಹೇಳಬೇಕು ಅಂತ ಹೇಳುತ್ತಿದ್ದೀರಿ. ನಾವು ಈ ಬಗ್ಗೆ ಒಂದು ನೋಟೀಸನ್ನು ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಅದರಲ್ಲಿ ಏನು ಹೇಳಿದ್ದೇವೆ ಎಂದರೆ ಮಾನಿಟರಿ ಕನ್ಸಿಡರೇಷನ್ ಸಲುವಾಗಿ ಇಷ್ಟೆಲ್ಲಾ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದೇವೆ. ಮಂತ್ರಿಗಳ ಬಗ್ಗೆ ಚಾರ್ಜಸ್ ಮಾಡಬೇಕಾದರೆ, ಹಣ ತಿಂದದ್ದರ ಬಗ್ಗೆ ಹೇಳಬೇಕಾದರೆ ನೋಟೀಸ್ ಕೊಡಬೇಕು ಅಂತ ಇದೆ. ಅವರು ನೋಟೀಸ್ ಕೊಟ್ಟು ಮಾತನಾಡಬೇಕು ಅಂತ ಹೇಳಿದರು. ಅದರ ಪ್ರಕಾರ ನಾವು ನೋಟೀಸ್ ಕೊಟ್ಟಿದ್ದೇವೆ. ಹೈಕೋರ್ಟ್ ಆರ್ಡರ್ ಆದಮೇಲೂ ಕೂಡ ರೂಲ್ ಪ್ರಕಾರ ಅವರು ನಡೆದುಕೊಂಡಿಲ್ಲ ಎಂದು ನಾವು ಅದರಲ್ಲಿ ಹೇಳಿದ್ದೇವೆ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಂಡು ಆಮೇಲೆ ಅದನ್ನು ನಾವು ಇಲ್ಲಿ ಹೇಳಬೇಕು ಅಂತ ಇದ್ದೇವೆ.

ಶ್ರೀ ಕೆ. ಭಾಸ್ಕರನಾಯ್ಡು.—ಆಗಲಿ.

ಶ್ರೀ ಮೈಕೇಲ್ ಫರ್ನಾಂಡಿಸ್.—ನಮ್ಮ ಕೆಲಸ ಯಾವ ರೀತಿ ಎಂದರೆ ಮೊದಲು ಅವರಿಗೆ ಒಂದು ಅವಕಾಶ ಕೊಡಬೇಕು. ನಾವು ಅವರ ಮೇಲೆ ಅನೇಕ ಆಪಾದನೆಗಳನ್ನು ಮಾಡಿದ್ದೇವೆ. ಬೀಡಿ ಬಗ್ಗೆ ಆಯಿತು. ಹೋಟೆಲ್ ಬಗ್ಗೆಯೂ ಇದೆ. ಅವರು ಇನ್ನೂ ಅವರ ಉತ್ತರವನ್ನು ಮುಗಿಸಿಲ್ಲ. ಆಮೇಲೆ ನಾವು ಕೇಳುತ್ತೇವೆ.

ಶ್ರೀ ಕೆ. ಭಾಸ್ಕರನಾಯ್ಡು.—ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಸುಮ್ಮನೆ ಕುಳಿತ್ತಿದ್ದೇವೆ. ಬೆದರಿಸುವುದು ಅವರು, ಕೆಲಸ ಮಾಡಿಸಿಕೊಳ್ಳುವುದು ಅವರು. ನಮಗೂ ಅವಕಾಶ ಬರಲಿ, ನಾವು ಹೇಳುತ್ತೇವೆ. ಯಾರ್‍ಯಾರ ವಿಷಯ ಏನೇನು ಇದೆ ಎಂಬುದು ಎಲ್ಲಾ ಹೊರಗೆ ಬರಲಿ.

ಶ್ರೀ ಬಿ. ವಿ. ಕಕ್ಕಿಲಾಯ.—ಲೇಬರ್ ಇಲಾಖೆ ಇರತಕ್ಕಂಥಾದ್ದೇ ನಮ್ಮ ಕೆಲಸ ಮಾಡಿಸುವುದಕ್ಕೆ ನಾವು ಇರುವುದೇ ಅವರಿಂದ ಕೆಲಸ ಮಾಡಿಸಿಕೊಳ್ಳುವುದಕ್ಕೆ. ಲೇಬರ್ ಇಲಾಖೆ ಇರುವುದು, ಲೇಬರ್ ಮಿನಿಸ್ಟರ್ ಇರುವುದು ನಮ್ಮ ಕೆಲಸ ಮಾಡುವುದಕ್ಕೆ. ಅವರು ನಮ್ಮ ಕೆಲಸವನ್ನು ಮಾಡಬೇಕು. ಅದು ನಮ್ಮ ಹಕ್ಕಿದೆ. ಹಾಗಿಲ್ಲದಿದ್ದರೆ ಯಾರ ಕೆಲಸ ಮಾಡುವುದಕ್ಕೆ ಲೇಬರ್ ಇಲಾಖೆ ಇರುವುದು?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ನಾನು ಒಂದು ವಿಚಾರವನ್ನು ಹೇಳಿಬಿಡುತ್ತೇನೆ. ಈ ಬಗ್ಗೆ ಒನ್‌ಮ್ಯಾನ್ ಎನ್‌ಕ್ವೈರಿ ಕಮಿಷನ್ ಮಾಡಲಿ. ಅದಕ್ಕೆ ಮಾನ್ಯ ಭಾಸ್ಕರನಾಯ್ಡುರವರೇ

ಎನ್‌ಕ್ವೈರಿ ಕಮಿಷನ್ ಅಧ್ಯಕ್ಷರಾಗಲಿ. ಅವರ ಮುಂದೆ ಎವಿಡೆನ್ಸ್ ಇಡುತ್ತೇವೆ. ಮಾನ್ಯ ಮಂತ್ರಿಗಳನ್ನು ಅದಕ್ಕೆ ಒಪ್ಪಿಸಿಬಿಡಿ. ನಾವು ಆಪಾದನೆಗಳನ್ನು ಪ್ರೂವ್ ಮಾಡಿದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನೀವು ಹೇಳಿ. ನಾವು ಪ್ರೂವ್ ಮಾಡದೇ ಇದ್ದರೆ ನಮ್ಮ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನೀವೇ ಹೇಳಿ.

ಶ್ರೀ ಕೆ. ಭಾಸ್ಕರನಾಯುಡು.—ನನ್ನ ಒನ್‌ಮ್ಯಾನ್ ಕಮಿಷನ್ ಆಗುವುದು ಬೇಡ.

ಶ್ರೀ ಪಂಪಾಪತಿ.—ನಮ್ಮ ಲೇಬರ್ ಮಿನಿಸ್ಟರ್‌ರವನ್ನು ಒಳಕ್ಕೆ ಹಾಕಿಸಬೇಕು ಎನ್ನುವ ಪೂರ್ಣವಾದ ಇಚ್ಛೆ ಇದ್ದಹಾಗೆ ಕಾಣುತ್ತದೆ.

ಶ್ರೀ ಎ. ಬಿ. ಜಕನೂರ್.—ಈಗ ಯಾರೂ ಒಳಕ್ಕೆ ಹೋಗುವುದಿಲ್ಲ ತಗೊಳ್ಳಿ. ಯಾರೂ ಒಳಕ್ಕೆ ಹಾಕಿಸುವುದಕ್ಕೆ ಆಗುವುದಿಲ್ಲ, That is not the case. Prevention of Corruption Act is applicable. Go to the Court, file a case and prove it. ಮಾನ್ಯ ಅಧ್ಯಕ್ಷರೇ, ನಾನು ಹೋಟೆಲ್ ಬಗ್ಗೆ ಹೇಳಿಯಾಯಿತು. ಈಗ ಈ ಸಿನಿಮಾ ಬಗ್ಗೆ ಹೇಳುತ್ತಿದ್ದೇನೆ, ಈ ಪ್ರಿಲಿಮಿನರಿ ನೋಟಿಫಿಕೇಷನ್‌ನಲ್ಲಿ ಏನಿದೆ ಅವರಲ್ಲಿ ಒಂದನ್ನೂ ನಾವು ಕಡಿಮೆ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಪ್ರಿವೆನ್‌ಷನ್ ಆಫ್ ಕರಪ್‌ಷನ್ ಆಕ್ಟ್ ಪ್ರಕಾರ ಕೋರ್ಟಿಗೆ ಹೋಗಿ ಕೇಸ್ ಹಾಕಿ ಎಂದು ಅವರು ಹೇಳುತ್ತಿದ್ದಾರೆ. Let him agree.

SRI A.B. JAKANUR.—Why should I agree? You file a complaint.

SRI A. LAKSHMISAGAR.—Let him agree for being prosecuted.

SRI A.B. JAKANUR.—No question of agreement.

MR. DEPUTY SPEAKER.—You have got your right.

(INTERRUPTION)

SRI A. LAKSHMISAGAR.—Sir, the Hon'ble Minister Sri A.B. Jakanur jolly well knows as to what he is talking about. I cannot lodge a complaint without there being the sanction of the concerned authorities. I cannot get it. The only way left for him to get the clearance from the allegations which we have made against him is that let him agree for being prosecuted. I will face the consequences and the Members of the opposition will face the consequences. Let him not speak in a challenging tone.

(ಇಂಟರಪ್‌ಷನ್)

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಮಾನ್ಯ ಅಧ್ಯಕ್ಷರೇ, ಅವರು go to the Court ಎಂದು ಹೇಳುತ್ತಿದ್ದಾರೆ. ಅವರ ಮನೋಭಾವ ಮತ್ತು ಮಾಲೀಕರ ಮನೋಭಾವ ಒಂದೇ ಇದೆ, ಇದೇನು ಇದು!

ಶ್ರೀ ಎ.ಬಿ. ಜಕನೂರ್.—ಸ್ವಾಮಿ, ನನ್ನ ಬಗ್ಗೆ ಕೆಲವು ಆಪಾದನೆಗಳು ಇದೆ. ಅದರ ಬಗ್ಗೆ ನಾನು ಉತ್ತರ ಕೊಡಬೇಕಾಗುತ್ತದೆ. ಈ ದಿಶೆಯಲ್ಲಿ ನಾನು ಮಾನ್ಯ ಸದಸ್ಯರುಗಳನ್ನು ಕನ್‌ವಿನ್ಸ್ ಮಾಡಬೇಕಾಗುತ್ತದೆ. ಅವರು ಕನ್‌ವಿನ್ಸ್ ಆಗಲಿಲ್ಲ ಎಂದರೆ ಅದು ಬೇರೆ ಪ್ರಶ್ನೆ. ಆದರೂ I must do my duty.

SRI K. BHASKAR NAIDU.—Why do you want to answer that ?

SRI A.B. JAKANUR.—I have to explain. I have to defend myself. ಈಗ ಈ ಹೋಟೆಲ್ ಮತ್ತು ಸಿನಿಮಾದವರಿಗೆ ನಾವು ಕೊಟ್ಟಿರತಕ್ಕಂಥಾದರಲ್ಲಿ ಅವರಿಗೆ ಸಂಶಯವಿದೆ. ಅದರಲ್ಲಿ ಅವರ ವೇಜಸ್‌ನಲ್ಲಿ ಏನಾದರೂ ನಾವು ಕಡಿಮೆ ಮಾಡಿದ್ದೇವೆಯೇ ? ಇಲ್ಲ. ೧೯೭೪, ೭೫, ೭೬, ೭೭ ಹೀಗೆ ಈ ಹಿಂದಿನ ೪ ವರ್ಷಗಳಲ್ಲಿ ಹಿಂದಿನ ಸರ್ಕಾರದವರು ಏನು ಫಿಕ್ಸ್ ಮಾಡಿದ್ದರು ಅದನ್ನು ರಿವಿಷನ್ ಮಾಡಿರಲಿಲ್ಲ. ನಾವು ಅದನ್ನು ರಿವಿಷನ್ ಮಾಡಿದ ಮೇಲೆ ೨೫೦ percent ಗಳವರೆಗೆ ಅದು ಹೆಚ್ಚಾಗಿದೆ. A last man who was getting Rs. 180 per month is now getting more than Rs. 380. ಇದು ಹೆಚ್ಚಾಗಿದೆ. ಹಾಗಿದ್ದರೂ ಈ ಹೋಟೆಲ್ ಇಂಡಸ್ಟ್ರೀಸ್ ಕ್ಲೋಸ್ ಮಾಡಬೇಕಾಗುತ್ತದೆ ಎನ್ನುವ ಗ್ರೀವೆನ್ಸಸ್ ಇತ್ತು ಅವರದು. ಈ ವೇರಿಯಬಲ್ ಡಿ.ಎ. ಬಗ್ಗೆ ಅದನ್ನು ನಾವು ಸ್ವಲ್ಪ ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತಿದ್ದೇನೆ. ಅದನ್ನು ಏತಕ್ಕೆ ಕಡಿಮೆ ಮಾಡಿದ್ದೇವೆ? There are certain grounds. ಈ ವೇರಿಯಬಲ್ ಡಿ.ಎ. ಬಗ್ಗೆ ಪ್ರಿಲಿಮಿನರಿ ನೋಟಿಫಿಕೇಷನ್ ಕೊಡುವ ಮುಂದೆ ೨೫ ಪೈಸೆ ಫಾರ್ ೫ ಪಾಯಿಂಟ್ಸ್ ತರಹ ೨೫ ಪೈಸೆ, ೩೦ ಪೈಸೆ, ೪೦ ಪೈಸೆ ತನಕ ಇತ್ತು. ಒಂದು ಪಾಯಿಂಟ್‌ಗೆ ೫ ಪೈಸೆ, ೬ ಪೈಸೆ, ೭ ಪೈಸೆಯ ತನಕ ಹೋಗುತ್ತಿತ್ತು. ಅದನ್ನು ನಮ್ಮ ಸೆಕ್ರೆಟರಿಯವರು, ಲೇಬರ್ ಕಮೀಷನರ್‌ರವರು ಕ್ಯಾಲ್ಕುಲೇಟ್ ಮಾಡಿ ನೋಡಿದ್ದಾರೆ. What will be the next year's jump? ನೆಕ್ಸ್ಟ್ ಜಂಪ್ ೩೦, ೪೦, ೫೦ ರೂಪಾಯಿ ವರೆಗೆ ಹೆಚ್ಚಾಗುತ್ತಿತ್ತು. ಇದು ಇನ್‌ಕ್ರಿಮೆಂಟ್ ಇದ್ದ ಹಾಗೆ. ಗೌರ್ನಮೆಂಟ್ ಸರ್ವಿಸ್‌ನಲ್ಲಿ ಕೂಡ ೧೦, ೧೫ ರೂಪಾಯಿಗಳ ಇನ್‌ಕ್ರಿಮೆಂಟ್ ಸಿಕ್ಕುವುದಿಲ್ಲ. ಅದು ಒಮ್ಮೆಲೆ ಇಷ್ಟು ಆಯಿತು ಎಂದರೆ ಹೈಕೋರ್ಟ್‌ನಲ್ಲಿ ನಾಳೆ ತಡೆಯಲಿಕ್ಕಾಗುವುದಿಲ್ಲ. ಇದರ ಬಗ್ಗೆ ನಾವು ಚೌಕಾಸಿ ಮಾಡಿಲ್ಲ. ನೆರೆ ರಾಜ್ಯಗಳಲ್ಲಿ ಇದರ ಬಗ್ಗೆ ಎಷ್ಟು ಮಾಡಿದ್ದಾರೆ? ತಮಿಳುನಾಡಿನಲ್ಲಿ ೨ ಪೈಸೆ ಫಾರ್ ೫ ಪಾಯಿಂಟ್ಸ್ ಎಂದು ಮಾಡಿದ್ದಾರೆ. ಕೇರಳದಲ್ಲಿ ಎಷ್ಟು ಮಾಡಿದ್ದಾರೆ? Kerala 2 paise for every increase of five points. ವೇಜಸ್ ಕಡಿಮೆ ಇದೆ. ಅವರು ಅದನ್ನು ೧೯೭೯ರಲ್ಲಿ ಮಾಡಿದ್ದಾರೆ. ಅದನ್ನೇ ನಾನು ಹೇಳುತ್ತಿದ್ದೇನೆ. The total wages as on 17-6-80 varies from Rs. 644 to Rs. 726 according to areas ಕೇರಳದ ಮಿನಿಸ್ಟರ್ ಕೂಡ ಮೀಟಿಂಗ್‌ಗೆ ಬಂದಿದ್ದರು. ಅಲ್ಲಿನ ಸೆಟಲ್‌ಮೆಂಟ್ ಇದಕ್ಕಿಂತಲೂ ಹೆಚ್ಚಾಗಿದೆ. ಇದು ೭೦–೭೫ರ ವರೆಗೆ ಬರುತ್ತದೆ ಎಂದು ಅವರು ಹೇಳಿದರು. ಇದನ್ನು ಯಾವಾಗ ಫಿಕ್ಸ್ ಮಾಡಿದ್ದಾರೆ ಎಂದರೆ ೧೫–೧೨–೭೯ರಲ್ಲಿ ಫಿಕ್ಸ್ ಮಾಡಿದ್ದಾರೆ. ಅದರ ನಂತರ ಅವರು ರಿವೈಸ್ ಮಾಡಿದ್ದಾರೆ. ಆ ಸೆಟಲ್ ಮೆಂಟ್ ಪ್ರಕಾರ ಅದು ಇದಕ್ಕಿಂತಲೂ ಜಾಸ್ತಿ ಇದೆ.

11-00 A.M.

It is more than this. I am telling you what are the facts. ಒಂದು ವೇಳೆ ನಾವು ೫ ಪೈಸೆ ಅಥವಾ ೬ ಪೈಸೆ ೭ ಪೈಸೆ ಮಾಡಿದರೆ ಅವರು ಹೈಕೋರ್ಟ್‌ಗೆ ಹೋಗುತ್ತಾರೆ. ಅದನ್ನು ಸರ್ಕಾರದವರು ಅರಿತುಕೊಂಡು ಈಗ ನಾವು ಪರ್ ಪಾಯಿಂಟ್‌ಗೆ ೨ ಪೈಸೆಯನ್ನು ಹಾಕಿದ್ದೇವೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಸರ್ಕಾರ ಏನಾದರೂ ರೇಟ್ ಜಾಸ್ತಿ ಮಾಡಿದರೆ ಅವರು ಹೈಕೋರ್ಟಿಗೆ ಹೋಗಿ ಒಂದು ರಿಟ್ ಫೈಲ್ ಮಾಡುತ್ತಾರೆ. Thousands of writs have been filed in the High Court by hoteliers, cinema owners. ಇದರಲ್ಲಿ ೫೦ ಪರ್ಸೆಂಟ್ ಹೆಚ್ಚಳಕ್ಕೆ ಸ್ಟೇ ಕೊಟ್ಟಿದ್ದಾರೆ. ಇದನ್ನು ವೆಕೇಟ್ ಮಾಡಲು ಕೋರ್ಟಿಗೆ ವಿನಂತಿಸಲು ಅಡ್ವೋಕೇಟ್ ಜನರಲ್ ರವರಿಗೆ ತಿಳಿಸಿದ್ದೇವೆ. ಇದರಲ್ಲಿ ಏನು ಆಧಾರವಿಲ್ಲ. ಇದರಲ್ಲಿ ಏನೂ ಅಂಡರ್ ಹ್ಯಾಂಡ್ ಡೀಲಿಂಗ್ ನಡೆದಿಲ್ಲ. Where is the document ? What is the proof? ಮತ್ತೆ ಮಾನ್ಯ ಸದಸ್ಯರಾದಂತ ಶ್ರೀಮಾನ್ ಲಕ್ಷ್ಮಿಸಾಗರ್‌ರವರು ಹೇಳಿದರು ಯಾವುದಾದರೂ ಒಂದು ಆರ್ಟಿಕಲ್ ಪ್ರಕಾರ ಹೈಕೋರ್ಟಿನಲ್ಲಿ ಒಂದು ರಿಟ್ ಫೈಲ್ ಮಾಡಬಹುದು, ಅದನ್ನು ಮಾನ್ಯ ಸದಸ್ಯರು ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಆ ರೀತಿ ಮಾಡಿದರೆ ನಮ್ಮನ್ನು ಬ್ಲೇಮ್ ಮಾಡಿದಂತಾಗುತ್ತದೆ. Preliminary notification issue ಮಾಡಿದ್ದೇವೆ. ಯಾವುದರಲ್ಲಿಯೂ ಕೂಡ ನಾವು ವರ್ಕರ್ಸ್‌ಗೆ ಕಡಿಮೆ ಮಾಡಿಲ್ಲ. ಯಾವ ಅನ್ಯಾಯವನ್ನೂ ಸಹ ಸರ್ಕಾರ ಮಾಡಿಲ್ಲ...

SRI S. M SHEERNALY CHANDRASHEKAR.—Then why not you accept their challenge? If it is a clear cut case, you can accept a challange. If you do not accept it, they will dis-believe you.

SRI A.B. JAKANUR —No. Why do you presume like that? ನಾವು ಈ ವರ್ಕರ್ಸ್‌ಗೆ ಯಾವುದರಲ್ಲಿಯೂ ಕೂಡ ಕಡಿಮೆ ಮಾಡಿಲ್ಲ. ಎಲ್ಲವನ್ನು ಸಹ ಸರಿಯಾಗಿ ಕೊಟ್ಟಿದ್ದೇವೆ. ಅದರಲ್ಲಿಯೂ ಕೂಡ ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡಿದ್ದಾರೆ. ಮತ್ತೆ ಇದರಲ್ಲಿ ಯಾವುದೇ ರೀತಿಯ ಅಂಡರ್ ಹ್ಯಾಂಡ್ ಡೀಲಿಂಗ್ ನಡೆದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ನಮ್ಮ ಮೇಲೆ ಬೇಕಾದಷ್ಟು ಚಾರ್ಜಸ್ ಮಾಡಿದ್ದಾರೆ. I am going to face them. ಈಗ ಯಾವುದಾದರು ಒಂದು ಪ್ರಿಂಟಿಂಗ್ ಪ್ರೆಸ್‌ಗೆ ಹೋಗಿ ಈ ರೀತಿ ಒಂದು ಪತ್ರಿಕೆಯನ್ನು ಮುದ್ರಿಸಿ ಕೊಡಿ ಎಂದು ಹೇಳಿದರೆ ಅವರು ಪ್ರಿಂಟ್ ಮಾಡಿ ಕೊಡುತ್ತಾರೆ. ಇದನ್ನು ಜನರು ಹೇಗೆ ನಂಬುತ್ತಾರೆ? There must be some tangible documentary *prima facie* evidence. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹೈಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ.

SRI A. LAKSHMISAGAR.—Circumstantial evidence is some times stronger than direct evideuce.

SRI A.B. JAKANUR.—That is only in rare cases. That is only in criminal cases where documentary evidence is not available where the chance of circumstances will lead to that conclusion.

SRI A. LAKSHMISAGAR.—The principle of evidence is that there are two counts of evidences–direct and circumstantial. You are also a criminal Lawyer. And often times circumstantial evidence in a particular set of circumstances is more credible than the direct evidence.

SRI A.B. JAKANUR.—I have no objection. I am telling you ಇದರಲ್ಲಿ ತಾವು ಏನೂ ಸಂಶಯ ಪಡಬೇಕಾಗಿಲ್ಲ. ಇದನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದ್ದೇನೆ. It does not take the place of proof

ಶ್ರೀ ಶೀನರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಂ ಮಾನ್ಯ ಮಂತ್ರಿಗಳನ್ನು ರಾವಣನು ಸೀತೆಯನ್ನು ಅಗ್ನಿ ಪರೀಕ್ಷೆ ಮಾಡಿದ ರೀತಿಯಲ್ಲಿ ಪರೀಕ್ಷೆ ಮಾಡುತ್ತಿದ್ದಾರೆ.

MR. DEPUTY SPEAKER.—Please do not interrupt.

SRI A.B. JAKANUR.—They have agrieved. They have challenged it saying that it is too much. ಅವರ ಪ್ರಕಾರ ೫೦ ಪರ್ಸೆಂಟ್ ಅಂತ ಮೊದಲು ಏನು ಇತ್ತು, ಅದನ್ನು ನಾವು ಈಗ ೨೫೦ to ೩೦೦% ಮಾಡಿದ್ದೇವೆ. ಇದರಲ್ಲಿ ಯಾವುದೇ ರೀತಿಯ ಅನಾನಂಕೂಲ ಕೂಡ ಆಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವುದೇ ಬ್ಯಾಗ್ ಮತ್ತು ಸೂಟ್ ಕೇಸ್ ವ್ಯವಹಾರ ಇಲ್ಲಿ ಇಲ್ಲ.

(ಶ್ರೀ ಎಂ.ಸಿ. ಬಸಪ್ಪನವರು ಪೀಠವನ್ನು ಅಲಂಕರಿಸಿದರು)

SRI MICHAEL B. FERNANDES,—Sir, the hon. Minister has given an impression that there has been no difference between the Preliminary Notification and the Final Notification. That is his plan of the moment in wages. But then wages is only a part of the pay-packet. The wages were kept low because a substantially reasonable was

proposed by the Committee. That reasonable DA was not less than 25 paise for every five points. As and when these five points came, the worker had to get 25 paise for all the days in the month. That was worked out. Now it has come down to two paise per point and the payment to be made is once a year. When the hon. Minister says that there has been no change at all in the wage, he is not telling the whole truth.

SRI S.M. SHEERNALLY CHANDRASEKHAR.—Sir, hon. Member Sri Lakshmisagar has reffered to the hon. Minister as a 'criminal lawyer' That should be expunged. He is not a 'criminal' lawyer.

CHAIRMAN.—I will look into it.

SRI A.B. JAKANUR.—In courts also they will say like that only. Nothing will happen if he refers so. He is also a criminal lawyer. ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಫರ್ನಾಂಡೀಸ್‌ರವರು ಹೇಳಿದಂತಹ ವಾದ ಸರಿಯಾದುದ್ದಲ್ಲ. ಸರ್ಕಾರದವರು ಅಂತಿಮವಾಗಿ ಒಂದು ನೋಟಿಫಿಕೇಶನ್ ಹೊರಡಿಸಿದ ಮೇಲೆ ಎಲ್ಲಾ ಹೋಟೆಲ್ ಕಾರ್ಮಿಕರು ಮತ್ತು ಸಂಘ ಸಂಸ್ಥೆಯ ನೌಕರರು ನಮಗೆ ಮತ್ತು ನಮ್ಮ ಸರ್ಕಾರಕ್ಕೆ ತುಂಬಾ ಧನ್ಯವಾದಗಳನ್ನು ತಿಳಿಸಿದ್ದಾರೆ. ತಾವು ಸಹ ಇದರ ಬಗ್ಗೆ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಬೇಕು. ಇವತ್ತು ಎಲ್ಲಾ ಕಾರ್ಮಿಕರು ಸಂತೋಷವಾಗಿದ್ದಾರೆ. ಇವತ್ತು ಸರ್ಕಾರದ ದೃಷ್ಟಿಯಲ್ಲಿ ಎಲ್ಲಾ ಕಾರ್ಮಿಕರಿಗೂ ಒಂದೇ ರೀತಿಯ ವ್ಯವಸ್ಥೆಯನ್ನು ಮಾಡಿಕೊಡಬೇಕೆಂಬ ಮನಸ್ಸು ಇದೆ. ನಾನು ಕಾರ್ಮಿಕ ಮಂತ್ರಿಯಾಗಿ I will have to look first to the interests of the labourers. And I will also have to see that the industries survive, ನಮ್ಮ ದೃಷ್ಟಿ ಯಾವಾಗಲೂ ಕಾರ್ಮಿಕರನ್ನು ಚೆನ್ನಾಗಿ ನೋಡಿಕೊಳ್ಳಬೇಕೆನ್ನುವ ದೃಷ್ಟಿ ಒಂದೊಂದು ಸಾರಿ ನಮ್ಮ ಮೇಲೆ ಹೋಟೆಲ್ ಮಾಲೀಕರು ಮತ್ತು ಸಂಘ ಸಂಸ್ಥೆಗಳ ಮಾಲೀಕರು ನಮ್ಮ ಹತ್ತಿರ ಬಂದು ತಾವು ಸಂಬಳ ಜಾಸ್ತಿ ಮಾಡಿದ್ದೀರಿ ನಾವು ನಮ್ಮ ಹೋಟೆಲ್‌ಗಳನ್ನು ಮತ್ತು ಸಂಸ್ಥೆಗಳನ್ನು ಮುಚ್ಚಬೇಕಾದಂತಹ ಪರಿಸ್ಥಿತಿ ಬಂದಿದೆ ಎಂದು ಹೇಳಿದರು ಆಗ ನಾವು ಅವರಿಗೆ ತಿಳಿಸಿದ್ದೇವೆ ನಿಮಗೆ ಯಾವ ರೀತಿಯಲ್ಲಿಯೂ ನಷ್ಟವಾಗುವುದಿಲ್ಲವೆಂದು ಸಹ ತಿಳಿಸಿದ್ದೇವೆ.

ಶ್ರೀ ಮೈಕೇಲ್ ಫರ್ನಾಂಡೀಸ್.–ಹೋಟೆಲ್ ಮಾಲೀಕರು ಈ ಸಂಸ್ಥೆಗಳ ಮಾಲೀಕರು ಕಾರ್ಮಿಕರ ಬೆವರು ಸುರಿಸಿಕೊಂಡು ಆದರಿಂದ ಹೆಚ್ಚಿನ ಲಾಭವನ್ನು ಪಡೆದು ದೊಡ್ಡ ದೊಡ್ಡ ಬಂಗಲೆಗಳನ್ನು ಮತ್ತು ದೊಡ್ಡ ದೊಡ್ಡ ಸಿನಿಮಾ ಟಾಕೀಸ್‌ಗಳನ್ನು ಕಟ್ಟಿಸಿಕೊಂಡಿದ್ದಾರೆ ಇವರಿಗೆ ಸಂಬಳ ಹೆಚ್ಚು ಕೊಟ್ಟರೆ ಅವರಿಗೆ ಮುಚ್ಚುವಂತಹ ಪರಿಸ್ಥಿತಿ ಹೇಗೆ ಬರುತ್ತದೆ ?

ಶ್ರೀ ಎ.ಬಿ. ಜಕನೂರು.—ಮಾಲೀಕರು ಬಂದಾಗ ನಾನು ಕೂಡ ಅವರಿಗೆ ಇದೇ ಪ್ರಶ್ನೆಯನ್ನು ಕೇಳಿದ್ದೇನೆ.

ಇನ್ನು Public under takings strike ಬಗ್ಗೆ ಹೇಳುವುದಾದರೆ ಅದರ ಸಲುವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಮೈಕಲ್ ಫರ್ನಾಂಡೀಸ್ ಅವರಿಗೆ ನಮ್ಮ ಸರ್ಕಾರದ ಮೇಲೆ, ಕೇಂದ್ರ ಸರ್ಕಾರದ ಮೇಲೆ ಮತ್ತು ನನ್ನ ಮೇಲೆ ಕೋಪ ಇದೆ. ಅವರ ಕೋಪಕ್ಕೆ ಕಾರಣ ಮಾನ್ಯ ಮುಖ್ಯ ಮಂತ್ರಿಗಳು ಅವರ ಆಶ್ವಾಸನೆ ಪ್ರಕಾರ ನಡೆಯುತ್ತಿಲ್ಲ ಅಂತ ಅವರು ಕಾರ್ಮಿಕರ ಕೇಸ್‌ನ್ನು Labour Court refer ಮಾಡಿಲ್ಲ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅಧ್ಯಕ್ಷರೇ, ಈ ಸದನಕ್ಕೆ ಗೊತ್ತಿದೆ. ಶ್ರೀಮಾನ್ ಬೊಮ್ಮಾಯಿಯವರು ಕಾರ್ಮಿಕರ ಮುಖಂಡರ ಜೊತೆಯಲ್ಲಿ ಇದ್ದರು. ಮುಖ್ಯಮಂತ್ರಿಗಳು ಕಾರ್ಮಿಕರ ಮುಖಂಡರ ಹಾಗೂ ಜೆಎಫ್ ಲೀಡರ್ಸ್ ಸಭೆ ಕರೆದು strike with draw ಮಾಡಿ ಯೋಗ್ಯ ವಾತಾವರಣವನ್ನು ಕಲ್ಪಿಸಿಕೊಡಿ ಎಂದು ಹೇಳಿದರು. ಅದರಂತೆ ಕಾರ್ಮಿಕರು ಸ್ಟ್ರೈಕ್ withdraw ಮಾಡಿದರು. ಆದರೆ, ಆಗ ಮುಖ್ಯಮಂತ್ರಿಗಳು ಯಾವ ಆಶ್ವಾಸನೆಯನ್ನೂ ಕೊಟ್ಟಿರಲಿಲ್ಲ, ಡೆಲ್ಲಿಗೆ ಹೋಗಿದ್ದಾಗ ಈ ವಿಷಯ ಪ್ರಸ್ತಾಪವಾಯಿತು. "You withdraw the strike. Let

us refer it for adjudication ಎಂದು ಹೇಳಿದಾಗ clause is amply clear'' ಎಂದು ಹೇಳಿ Arbitration ಗೆ ಹೋಗುವುದು ಬೇಡವೆಂದರು. ಆದರೆ, ಅವರು ನಾವು ಕೇಂದ್ರ ಸರ್ಕಾರವನ್ನು ಕೇಳುತ್ತೇವೆ ಎಂದರು. ಆಮೇಲೆ ಅಲ್ಲಿ talks fail ಆಯಿತು. ನಂತರ ಮಾಲೀಕರ ಹತ್ತಿರ ಮಾತನಾಡುವ ಅವಕಾಶವೇ ಇರಲಿಲ್ಲ. ಬಾಗಿಲು ಮುಚ್ಚಿತ್ತು ಅನಂತರ ಮುಖ್ಯಮಂತ್ರಿಗಳು ನಿಮಗೆ ಅವಕಾಶ ಇಲ್ಲ, Negotiation doors are closed now. You have to come to certain understandings and settlement'' ಎಂದು ಹೇಳಿದರು. ಆಗ ನಾನು ಹೇಳಿದ್ದೆ— ''ಈಗ ತಾನೆ ನಾನು ಕಾರ್ಮಿಕ ಖಾತೆಯನ್ನು ವಹಿಸಿಕೊಂಡಿದ್ದೇನೆ. ಗಡಿಬಿಡಿ ಮಾಡಲಿಕ್ಕೆ ಹೋಗಬೇಡಿ. ನಾನು ಏನಾದರೂ ಮಾಡಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುತ್ತೇನೆ'' ಎಂದೆ. ಆದರೆ ನನ್ನ ಮಾತನ್ನು ಅವರು ಕೇಳಲಿಲ್ಲ. ಪ್ರತಿಭಟನೆ ಮಾಡಿದರು. ಆದರೆ ನನಗೆ ಅವರ ಬಗ್ಗೆ ಸಿಟ್ಟಿಲ್ಲ. ಈಗ There are two matters pending with State Government. We have requested the Central Government, to take decision regarding one matter. It is for them to take a decision.

ಆಮೇಲೆ ಎರಡನೇ ವಿಷಯದಲ್ಲಿ ಹೇಳಬೇಕು ಎಂದರೆ ಜೆಎಫ್ ಲೀಡರ್ಸ್‌ಗಳು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿದ್ದರು. ನಂತರ ಮುಖ್ಯಮಂತ್ರಿಗಳು ನನಗೆ ಅಡ್ವೋಕೇಟ್ ಜನರಲ್ ಲಾ ಸೆಕ್ರೆಟರಿ ಮತ್ತು Secretary Social and Labour ಇವರನ್ನು ಕರೆದು ವಿಚಾರ ಮಾಡಿರಿ ಅಂತ ಹೇಳಿದರು. ಆ ಪ್ರಕಾರ ಮೀಟಿಂಗನ್ನು ಕರೆದಿದ್ದೆನು ಅದರಲ್ಲಿ ಕ್ರಿಮಿನಲ್ ಕೇಸ್‌ಗಳನ್ನು ಡಿಸ್‌ಕಶನ್ ಮಾಡಲಾಯಿತು. There we came to a conclusion. The matter is pending before the High Court, regarding interpretation of Clause (1)(1). When the matter is seized of the attention of the High Court we should not take decision hurriedly. Let the Higt Court decide in the matter. High Court decision ಆದ ಮೇಲೆ Government may consider the matter.

ಶ್ರೀ ಮೈಕೇಲ್ ಫರ್ನಾಂಡೀಸ್.—ಎರಡು ವರ್ಷದ ಸಮಸ್ಯೆ ಇದು. ಈಗ ಮಂತ್ರಿಗಳು ಅದನ್ನು ಉಲ್ಟಾಪಲ್ಟಾ ಮಾಡುವುದಕ್ಕೆ ಹೋಗಿದ್ದಾರೆ. ಇದರ ಬಗ್ಗೆ ಡಿಬೇಟ್‌ನಲ್ಲಿ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಇಲ್ಲ. ಕೋರ್ಟಿಗೆ ಹೋಗಿದ್ದು ಏಕೆ ಎಂದರೆ...... You have failed to refer the matter. Therefore, we went to the court. It is just like putting a cart before the horse.

CHAIRMAM.—Unless he yields, you cannot stand and start your speech. First you should request him to yield.

SRI A. B. JAKANUR.—I am just telling why there was delay.

SRI MICHAEL B. FERNANDES.—Why did you go to Delhi ? What did we talk ? Why did we talk ? He doesn't say this.

CHAIRMAN.—I am sorry, you cannot intervene like this

SRI A. B. JAKANUR.—I am explaining why there was delay. ಅದನ್ನೇ ನಾನು ಹೇಳುತ್ತಾ ಇದ್ದೇನೆ. ನಾವು ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಮೊದಲು ಇದು ಲೇಬರ್ ಕೋರ್ಟಿಗೆ ಹೋಯಿತು.

SRI MICHAEL B. FERNANDEZ.—You want to cover up this. You have decided not to send it to the Labour Court.

ಶ್ರೀ ಎ. ಬಿ. ಜಕನೂರ್.—ಲೇಬರ್ ಕೋರ್ಟಿನಲ್ಲಿ ಮುಗಿದ ತಕ್ಷಣ ಅಲ್ಲಿಂದ ಹೈಕೋರ್ಟಿಗೆ ಹೋಗಿದ್ದಾರೆ ಹೈಕೋರ್ಟಿನಲ್ಲಿ ಮ್ಯಾಟರ್ ಪೆಂಡಿಂಗ್ ಇದ್ದಾಗ We are awaiting the

decision of the High Court. After that, Government will take decision

SRI MICHAEL B. FERNANDEZ.—You tell us that you will refer it. We will withdraw.

SRI A. B. JAKANUR.—How can I tell you ?

CHAIRMAN.—I am requesting once again that it is not correct to intervene when the Minister is replying. If you want to say anything you can request him to yield and intervene.

SRI S. R. BOMMAI.—I would request the Minister to yield for a minute so that the point may be clear. The point is. the labourers have gone to the court seeking directions from the High Court for the Government to make a reference. If the Gevernment assures that the reference will be made writ will be withdrawn. The opinion of the Advocate General during the pendency of the writ petition that we intend to take decision is not a correct advice. If the Government could assure that the reference will be made, they will withdraw it. This is the point.

ಶ್ರೀ ಎ. ಬಿ. ಜಕನೂರು.—ಮಾನ್ಯ ಬೊಮ್ಮಾಯಿಯವರು ಹೇಳಿದ್ದು ಸ್ವಲ್ಪ ವಿಚಾರ ಮಾಡಂಥ ಪ್ರಶ್ನೆ. ನಾವು ಹೀಗೆ ಡಿಸಿಷನ್ ತೆಗೆದುಕೊಳ್ಳುತ್ತೇವೆಂದು ಇಲ್ಲಿ ಅಶ್ಯೂರೆನ್ಸ್ ಕೊಡಲಿಕ್ಕೆ ಬರುವುದಿಲ್ಲ. ಏಕೆಂದರೆ ರೆಫರೆನ್ಸ್ ಮಾಡಬೇಕಾದರೆ, What is the provision ? We have to look to the Industrial Disputes Act: We have to examine whether it amounts to dispute or not, first. If it amounts to dispute, then the Government can refer, other wise not, Therefore, I cannot give assurance.

SRI MICHAEL B. FERNANDEZ.—Then, why you take shelter under the Court. That is your considered opinion.

SRI A. B. JAKANUR.—Before coming to conclusion, we have to examine.

SRI MICHAEL FERNANDEZ.—How much time you have taken ? Two years to examine.

SRI A. B. JAKANUR.—Because you have gone to High Court. This is the opinion of the Government. I cannot advise the party to withdraw the suit. ಆ ರೀತಿ ಇಷ್ಯೂ ಮಾಡಲಿಕ್ಕೆ ಬರುವುದಿಲ್ಲ. ನಮ್ಮದು, ನಿಮ್ಮದು ವೈಯುಕ್ತಿಕವಾಗಿ ದಾವೆ ಹೂಡಿದ್ದರೆ ನೀವು ವಿತ್‌ಡ್ರಾ ಮಾಡಿಕೊಳ್ಳಿ, ಇಲ್ಲದೇಹೋದರೆ ನಾವು ವಿತ್‌ಡ್ರಾ ಮಾಡಿಕೊಳ್ಳುತ್ತೇವೆ ಎಂದು ಹೇಳಬಹುದು. ಆದರೆ ಇದು ಆ ಪ್ರಶ್ನೆ ಅಲ್ಲ.

ಶ್ರೀ ಮೈಕೇಲ್ ಬಿ ಫರ್ನಾಂಡಿಸ್.—ಫೆಬ್ರುವರಿ ೧೯೮೧ ರಲ್ಲಿ ಆಯಿತು ಎಂದು ಹೇಳುತ್ತಿದ್ದೀರಲ್ಲ ಅದರಲ್ಲಿ ಸಂಶಯ ಬರುತ್ತಾ ಇದೆ. You are proving yourself false by taking like this.

SRI A. B. JAKANUR. That is your view. ಈ ದೃಷ್ಟಿಯಿಂದ ಹಾಗೆ ಹೇಳಲಿಕ್ಕೆ ಆಗುವುದಿಲ್ಲ. ಅದು ಮುಗಿದ ನಂತರ ಬೇಗನೆ ಡಿಸಿಷನ್ ತೆಗೆದುಕೊಳ್ಳಬಹುದು. Then you can

press. Government will consider the aspects of law and examine and then take suitable decision.

SRI S. R. BOMMAI.—Then, why did you give assurance to this House ?

ಶ್ರೀ ಎ. ಬಿ. ಜಕನೂರ್. – ಹೈಕೋರ್ಟ್ ಡೈರೆಕ್ಟ್ ಮಾಡಿದರೆ ನಾವು ಕೊಟ್ಟೇಕೊಡಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಒಂದು ವರ್ಷ ಅವರು ಸ್ಟ್ರೈಕ್ ಮಾಡಿದರು. Whether it amounts to industrial dispute or not have to be decided by the Government. ಆ ರೀತಿ ಮಾಡಿದರೆ ಹೇಗೆ.

ಶ್ರೀ ಎ. ಬಿ. ಜಕನೂರ್.—ಸ್ಟ್ರೈಕ್ ಪಿರೀಡ್ ಅಲ್ಲ, ಸ್ಟ್ರೈಕ್ ಪಿರೀಡ್ ಬಗ್ಗೆ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಹೇಳಿದ್ದೇವೆ. ಅವರು they want to consider the whole matter. ಅದನ್ನು ನ್ಯಾಷನಲ್ ಟ್ರಿಬ್ಯುನಲ್‌ಗೆ ಕಳಿಸಬೇಕು ಎಂದು ವಿಚಾರ ಮಾಡುತ್ತಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಿಮ್ಮ ಅಧಿಕಾರವನ್ನು ಅವರಿಗೆ ಏಕೆ ಕೊಡುತ್ತೀರಿ, ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಏಕೆ ಕೊಡುತ್ತೀರಿ.

ಶ್ರೀ ಎ. ಬಿ. ಜಕನೂರ್.—ಒಂದು ಕೋರ್ಟಿನಲ್ಲಿ ಒಂದು ಡಿಸಿಷನ್ ತೆಗೆದುಕೊಂಡು, ಮತ್ತೊಂದು ಕೋರ್ಟಿನಲ್ಲಿ ಇನ್ನೊಂದು ಡಿಸಿಷನ್ ತೆಗೆದುಕೊಂಡರೆ...

SRI MICHAEL B. FERNANDEZ.—Lock-out was only in Bangalore. ಇಡೀ ರಾಜ್ಯದ ಪ್ರಶ್ನೆ ಏಕೆ ಬರುತ್ತದೆ.

SRI A. B. JAKANUR.—But strike was there.

ಶ್ರೀ ಮೈಕಲ್ ಬಿ. ಫರ್ನಾಂಡಿಸ್. – ಬೆಂಗಳೂರಿನಲ್ಲಿ ಮಾತ್ರ ಲಾಕೌಟ್ ಆದರೆ ಇಡೀ ರಾಜ್ಯದ ಪ್ರಶ್ನೆ ಏಕೆ ಬರುತ್ತದೆ.

SRI A. B JAKANUR.—There was lock out just because there was strike

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಇವತ್ತಿನ ಪತ್ರಿಕೆಗಳಲ್ಲಿ ಪ್ರೈಂಮಿನಿಸ್ಟರ್‌ದು ಒಂದು ಆದೇಶ ಬಂದಿದೆ. Public Sector should be a model to all employers. This is the kind of model they are placing before the private sector.

SRI A. B. JAKANUR.—Then Sir, I go to another important matter which was raised by hon. friend. There is a company called Mac Millan India Limited. ಅದರಲ್ಲಿ ಒಂದು ಪ್ರಶ್ನೆ ಎತ್ತಿದರು ಮ್ಯಾಕ್ ಮಿಲನ್ ಇಂಡಿಯಾ ಲಿಮಿಟೆಡ್‌ದೊಳಗೆ ಎರಡು ಯೂನಿಯನ್ಸ್ ಇದೆ. ಒಂದು ಯೂನಿಯನ್, ಒಂದು ಅಸೋಸಿಯೇಷನ್ ಇದೆ. ಅಸೋಸಿಯೇಷನ್‌ನವರು ಸೆಪ್ಟೆಂಬರ್ ತಿಂಗಳಲ್ಲಿ ಡಿಮ್ಯಾಂಡ್ಸ್ ಇಟ್ಟರು. ಯೂನಿಯನ್‌ನವರು ಅಕ್ಟೋಬರ್ ತಿಂಗಳಲ್ಲಿ ಡಿಮ್ಯಾಂಡ್ಸ್ ಕೊಟ್ಟರು. ಅವರು ಕೊಟ್ಟ ಒಂದು ತಿಂಗಳ ನಂತರ ಇವರು ಡಿಮ್ಯಾಂಡ್ಸ್ ಕೊಟ್ಟರು. ನಂತರ ಕನ್ಸಿಲಿಯೇಷನ್ ನಡೆಯಿತು. ಆ ಕನ್ಸಿಲಿಯೇಷನ್‌ಗೆ ಮಾಲೀಕರು ಬರಲಿಲ್ಲ

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಅದು ಯಾವಾಗ ರಿಜಿಸ್ಟರ್ ಆಗಿದ್ದು ಹೇಳಿ.

SRI A. B. JAKANUR.—I do not know the date. ಒಂದು ಹಿಂದೆ ಆಗಿರಬಹುದು, ಇನ್ನೊಂದು ಮುಂದೆ ಆಗಿರಬಹುದು, ಹಿಂದಾಗಲಿ, ಮುಂದಾಗಲಿ ಮೆಜಾರಿಟಿ ಯೂನಿಯನ್ ಎಂದು ತಿಳಿದು ಅವರು ಅಸೋಸಿಯೇಷನ್ ಜೊತೆಗೆ ಒಂದು ಸೆಟಲ್‌ಮೆಂಟ್ ಮಾಡಿಕೊಂಡುಬಿಟ್ಟರು. ಆ ಸೆಟಲ್‌ಮೆಂಟ್ ಬೆನಿಫಿಟ್ಟನ್ನು ಮಾನ್ಯ ಮೈಕೇಲ್ ಫರ್ನಾಂಡಿಸ್ ಅವರ ಯೂನಿಯನ್ ಒಳಗೆ ಇದ್ದವರೂ ತೆಗೆದುಕೊಂಡುಬಿಟ್ಟರು.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಅದು ಯಾವಾಗ ರಿಜಿಸ್ಟರ್ ಆಗಿದ್ದು.

SRI A. B. JAKANUR.—I do not know.

SRI MICHAEL B. FERNANDEZ.—What is this ? He always say : I do not know.

CHAIRMAN.—The Hon. Minister will address the Chair. Don't make any reference to member, You are unnecessarily inviting discussion.

SRI A.B. JAKANUR.- Alright. What is that indictment. they say indictment. Whatis the meaning of 'indictment'? "To accuse or charge with a crime in due form of law". Whether there is any finding of the High Court against me accusing of any nepotism, favouritism or corruption? Nothing. All that the High Court says is that "The Minister has not understood. He has not followed. "It has come back. Will it be an indictment ? Is there any charge against me. High Court, on the other hand said to the argument by advocate Mr. Narasimhan that "you cannot blame the Minister. There is no malice"

CHAIRMAN.— Please do not enter into argument.

SRI A. B. JAKANUR.— Therefore, this does not amount to any indictment. I Need not resign on this score. The Single Judge's order has been stayed by the Division Bench; The matter is pending. In the meantime... ಅಪೀಲ್‌ನೊಳಗೆ ಸಿಂಗಲ್ ಜಡ್ಜ್‌ಮೆಂಟ್ set aside ಆಗಬಹುದು. But still the matter is pending in the appeal. The order of the Single Judge might be set aside. Who knows what will be the decision? The Division Bench will take it up later on. When the matter has been stayed by the Division Bench, I cannot take action. I cannot hear and pass orders when the mutter is stayed. There is an order regarding the stay. "In the circumstances workmen are expected to go back to work further proceedings in pursuance of the order of the Learned Single Judge is stayed pending disposal..." Therefore, ಮಾನ್ಯ ದೇವೇಗೌಡರು ಮಾತನಾಡುವಾಗ ತಿಳಿದುಕೊಂಡಿದ್ದರೆ ಮಾತನಾಡುತ್ತಿರಲಿಲ್ಲ. ಅವರ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿತ್ತು. ಇವತ್ತು ಅವರು ಮೈಕೇಲ್ ಫರ್ನಾಂಡೀಸ್‌ರವರು ಅಂದ ಕೂಡಲೇ ಅದಕ್ಕೆ ಮಾನ್ಯ ದೇವೇಗೌಡರು ಧ್ವನಿ ಸೇರಿಸಿದರು. ಮಾನ್ಯ ದೇವೇಗೌಡರು ಜಡ್ಜ್‌ಮೆಂಟನ್ನು ಪೂರಾ ಓದಿರಲಿಕ್ಕಿಲ್ಲ. ಸರಿಯಾಗಿ ಓದಿಲ್ಲದೇ ಇರುವುದರಿಂದ ಬಹುಶಃ ಅವರು ಈ ರೀತಿ ಹೇಳಿದ್ದಾರೆ. ನಾವು ಯಾವುದನ್ನು ಮಾಡಿದರೂ ಕಾಯಿದೆ ಕಾನೂನು ಪ್ರಕಾರ ಮಾಡುತ್ತೇವೆ, ಅದರೊಳಗೆ ಏನೂ ತಪ್ಪು ಮಾಡಿಲ್ಲ. ತಪ್ಪಿದೆ ಎಂದು ಹೇಳುವುದು ಸರಿಯಲ್ಲ ಸುಮ್ಮನೆ ಆಪಾದನೆ ಮಾಡುವುದು ಸರಿಯಲ್ಲ. Unless the court given the finding of some nepotism favouritism or corruption. ನನ್ನನ್ನು ದೂಷಿಸುವುದು ಸರಿಯಲ್ಲ. ನನ್ನ ಬೇಡಿಕೆಗೆ ಮಾನ್ಯ ಸದಸ್ಯರುಗಳು ಒಮ್ಮತದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

CHAIRMAN.— The question is that......

SRI A. LAKSHMI SAGAR. – Sir, under Rule 289 we have given a notice.

SRI MICHAEL FERNANDES.—Sir we have to seek clarifications from the hon Minister.

ಶ್ರೀ ಜಿ. ಕೆ. ತಕ್ಕೇಡ್.— ಬೇಕಾದಷ್ಟು ಗೊಂದಲ ಮಾಡಿದ್ದಾರೆ. ಇನ್ನೇನು ಕ್ಲಾರಿಫಿಕೇಷನ್ ಕೇಳುವುದು ? ವೋಟಿಗೆ ಹಾಕಿ.

SRI H. T. KRISHNAPPA.— We should understand. The hon. Minister is representing Labour Department. He has taken so much of pains.

SRI A. LAKSHMI SAGAR.— When the hon. Minister in his reply...

SRI K. BHASKER NAIDU.— Sir, please tell us definitely how long we are sitting. I am told, law is an ass. I read it somewhere. But now I have to sit here listening to these criminal lawyers. I do not know who of them is a layer criminal. I do n t know. But allow us to go and have our food and then we will sit. I am really feeling hu gry.

CHAIRMAN.— The only understanding is that we will dispose of this voting of these demands and meet far discussion in the after noon. It may take another five minutes now.

SRI K. BHASKER NAIDU.— Sir, the hon. Members are asking clarifications. It will take one hour.

CHAIRMAN.— We will sit for another five or ten minutes.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.— ನಮ್ಮ ಕ್ಲಾರಿಫಿಕೇಷನ್‌ಗೆ ಸರಿಯಾದ ಉತ್ತರ ಹೇಳದಿದ್ದರೆ ಏನು ಮಾಡಬೇಕು?

CHAIRMAN.— In spite of my requesting you, many times you intervened. Every point has been clarified. This debate cannot go on for ever. Every year we meet for budget discussion. It cannot go on like this as if we are going to close our shop today. You have raised many points during your speech. The hon. Minister has meet all most all the points raised by you. If you are not satisfied by the reply, we cannot go on continuing the debate just to satisfy an hon. Member. That is not the scope of the debate. If you are not satisfied, you can ask one or two clarifications. But what is happening here is there is an argument and a counter argument a debate and a counter debate you hare raised almost all points in your debate The hon. Minister has met almost all the points. If he has not met any point, you can rise and get clarifications.

SRI MACHAEL B. FERNANDES.—Should I not bring to the notice of the House.

CHAIRMAN.— If you can go to the rules, the scope is limited. You have raised your points during the debate and the hon. Minister has met all the points.

SRI S. R. BOMMAI. – Sir, we have already given notice.

CHAIRMAN.— I am coming to that point. The hon. Leader of the Opposition was trying to explain what the notiee is.

SRI A. LAKSHMI SAGAR. — We have given a notice under Rule 289 of the Rules of Procedure making certain allegations. These rules preceding and subsequent to Rule 289 refer to a particular matter namely when allegations are made either against a Minister or a Member sufficient notice must be given and the Minister or the Member may have sufficient time to look at the matter referred to in the notice. My submission is, the hon. Minister during his reply was repeatedly telling us, "You kindly hear me. Thereafter if you want to say anything, you are at liberty to say." This is what he said very repeatedly. Therefore I must be given an opportunity and other Members of the Opposition who have sent the notice. So we must have sufficient opportunity to express our views.

SRI A. B. JAKANUR. —I am on a point of order.

CHAIRMAN.—Let me go through the rules.

SRI A. B. JAKANUR.—All right, Sir. What all the Rule 289 says is "if any member wants to make any allegation against a Minister or a member a notice has to be given." Therefore, a notice was given by some of the hon. members, ಬೀಡಿ, ಸಿನಿಮಾ ಮತ್ತು ಹೋಟೇಲ್ ಕೆಲಸಗಾರರ ವೇಜಸ್ ವಿಚಾರದಲ್ಲಿ ಮಾನ್ಯ ಕಕ್ಕಿಲಾಯ ಅವರು ನನ್ನ ಮೇಲೆ ಆಪಾದನೆ ಮಾಡಲು ಹೊರಟಾಗ ನಾನು ನೋಟೀಸ್ ಕೊಟ್ಟು ಮಾಡಿ ಎಂದು ಹೇಳಿದೆ, ಅದರ ಪ್ರಕಾರ They have given a notice on which I have already replied. They can't go on making allegations.

CHAIRMAM.—Rules 289 says.

> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply."

This is the rule. Yesterday when hon. member Sri B. V. Kakkilaya was speaking the Hon'ble Minister pointed out that no previous notice is given regarding allegations made.

SRI A. LAKSHMISAGAR.—Sir, the notice is......

CHAIRMAN.—The notice is before me. What is there that you want to tell me.

SRI A. LAKSHMISAGAR.—Sir, the notice is before you, not before the House.

CHAIRMAN.—All right. I will read the notice.

> "Shri Jakanur, Hon'ble Minister for Labour has been declaring publicly the minimum wages to be fixed to different

industries in the State well in advance by Government Notifications. In his declarations he has indicated higher wages. In some of the notifications higher wages were notified by Government and later on regarding Hotel workers Beedi workers and some other Industries workers have been notified at a lower rate.

The Minister has yielded to the pressure of the industrialists and acted against the interests of the workers. The action of the Minister can be termed as the act of favouritism, for considerations other than legal and justifiable and he has acted so for personal monetary considerations in complete disregard of the interests of workers. We demand the judical enquiry into the matter."

Here, I would like to say, what all that has been alleged had been thoroughly replied by the Hon'ble Minister and he has met all most all the points raised by you. There is no need to give you again fresh opportunity.

SRI A. LAKSHMISAGAR.—Sir, will you bear with me for a minute ?

(*Interruption*)

CHAIRMAN.—After hearing the Leader of the Opposition and after hearing the Hon'ble Minister I am giving......

(*Interruption*)

SRI A. LAKSHMISAGAR.—No Sir, No Sir......

(*Interruption*)

CHAIRMAN.—I gave you an opportunity. You cannot go on saying like that. I am sorry......

(*Interruption*)

CHAIRMAN.—Please sit down. I will tell you the position. I wil explain the position. See, you have given a notice. I had given opportunity to the Leader of the opposition and also the Hon'ble Minister and also to other members. Your contention is that the time given is not sufficient. But it is the discretion of the Chair. You cannot demand any length of time, I am sorry, I cannot allow any discussion on this matter.

(*Interruption*)

CHAIRMAN.—The question is :

(*Interruption*)

CHARIMAN.—Order, order

The question is

DEMAND NO. 6

"That a sum not exceeding Rs. 3,95.96,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1983 in respect of "Mines and Geology"

DEMAND NO. 21

"That a sum not exceeding Rs. 28,26,24,000 on Revenue Acount and Rs. 82,00,000 on Capital Account inclusive of the sum granted "on account" be granted to the Government to defray the charges which will come in course of payment during the financial year ending 31st day of March 1983 in respect of "Forest"

DEMAND NO. 60

"That a sum not exceeding Rs. 17,12,70,000 on Revenue Account inclusive of the sum granted 'on account' be granted to the Government to defray the charges which will come in course of payment during the finacial year ending 31st day of March 1983 in respect of "Labour and Employment."

The Motion was adopted and smms were granted

Now, the House stands adjourned to meet at 3 P.M.

(*The House adjourned at 1-45 p.m. to meet again at 3 p.m.*)

(*The House re-assembled at 3-15 p.m.*)

(MR. SPEAKER.—in the Chair)

SRI A. LAKSHMISAGAR.—I believe you have been good enough to post yourself with what happened just before lunch. I appeal to you to put an end to this reather unprecedented episode by providing us with an opportunity to raise the matter. We have given notice

both under rule 312 and also under 289. I trust and hope thees notices will receive sympathetic consideration.

MR. SPEAKER.—I have received those notices. I am at it. I must look into those things also. A notice is given. I should exercise my mind. I am at it.

SRI A. LAKSHMISAGAR.—I leave it at that stage.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಮಾನ್ಯ ಕಾರ್ಮಿಕ ಮಂತ್ರಿಯವರು ಉತ್ತರ ಕೊಡುವಾಗ ಕಾರ್ಮಿಕರ ಬಗ್ಗೆ ಮತ್ತು ಪಬ್ಲಿಕ್ ಸೆಕ್ಟಾರ್ ಸ್ಟ್ರೈಕ್ ಬಗ್ಗೆ ಕೆಲವು ಸತ್ಯಕ್ಕೆ ದೂರವಾದ ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಕೆಲವು ವಿವರಗಳನ್ನು ಕೇಳುವುದಕ್ಕೆ ನಮಗೆ ಅವಕಾಶವಾಗಲಿಲ್ಲ. ಅವರು ಹೇಳಿದ್ದನ್ನು ನಾವು ಒಪ್ಪಿಕೊಳ್ಳುವ ಹಾಗೇ ಇಲ್ಲ. ಅದನ್ನು ಪ್ರತಿಭಟಿಸಿ ನಾನು ವಾಕ್‌ಔಟ್ ಮಾಡುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ ಬೆಳಿಗ್ಗೆ ಈ ಅಧ್ಯಕ್ಷಸ್ಥಾನದಲ್ಲಿದ್ದ ಮಾನ್ಯ ಉಪಾಧ್ಯಕ್ಷರು 'ಮಾನ್ಯ ಮಂತ್ರಿಯವರು ಮಾತನಾಡುವಾಗ ವಿವರಗಳನ್ನು ಕೇಳಬೇಡಿ, ಅವರು ಹೇಳಿದ ಮೇಲೆ ಕೇಳಿ' ಎಂದು ಹೇಳಿದರು. ಮಾನ್ಯ ಮಂತ್ರಿಯವರು ಎಲ್ಲವನ್ನೂ ಹೇಳಿದಮೇಲೆ ನಾವು ವಿವರಣೆ ಕೇಳುವುದಕ್ಕೆ ಅವಕಾಶ ಸಿಕ್ಕುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು ಆದರೆ ನಮಗೆ ವಿವರಣೆ ಕೇಳುವು ಸಿಕ್ಕುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು ಆದರೆ ನಮಗೆ ವಿವರಣೆ ಕೇಳುವುದಕ್ಕೆ ಅವಕಾಶ ಸಿಕ್ಕಲಿಲ್ಲ. ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ ಬಹಳ ದೋಷಗಳು ಇವೆ.

ಅಧ್ಯಕ್ಷರು.—ಅವರು ಪ್ರಸ್ತಾಪ ಮಾಡಿದ್ದರಲ್ಲಿ ದೋಷಗಳು ಇದ್ದರೆ, ಅದರ ಬಗ್ಗೆ ನೀವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದ್ದರೆ ಆ ಅವಕಾಶವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಿಮಗೆ ಹಕ್ಕು ಇದೆ. ನಿಮ್ಮ ಹಕ್ಕನ್ನು ಯಾರೂ ಮೊಟಕು ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ನಾವು ಈ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೇವೆ ಮತ್ತು ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇವೆ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತಿದ್ದೇನೆ. ಆ ನೋಟೀಸ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಕಾರ್ಮಿಕ ಖಾತೆಗೆ ಸಂಬಂಧ ಪಟ್ಟಂತಹ ಬೇಡಿಕೆಯನ್ನು ಈ ಸಭೆಯಲ್ಲಿ ವೋಟ್‌ಗೆ ಹಾಕಿ ಆದಮೇಲೆ ಮತ್ತೆ ಅದೇ ಡಿಮ್ಯಾಂಡ್ ಬಗ್ಗೆ ನೀವೆಲ್ಲಾ ಪ್ರಸ್ತಾಪ ಮಾಡಿದರೆ ಅದು ಒಳ್ಳೆಯ ಪ್ರಿಸಿಡೆಂಟ್ ಆಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಆದದ್ದು ಒಳ್ಳೆಯ ಪ್ರಿಸಿಡೆಂಟೇ? ಮಾನ್ಯ ಮಂತ್ರಿಯವರು ಈ ಡಿಮ್ಯಾಂಡ್ ಬಗ್ಗೆ ಉತ್ತರ ಕೊಡತಕ್ಕಂಥದ್ದು ಮುಗಿದಮೇಲೆ ನಾವೆಲ್ಲಾ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶವಿದೆ ಆದರೆ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ನಮಗೆ ಅವಕಾಶ ಕೊಡಲಿಲ್ಲ. ಮಾನ್ಯಮಂತ್ರಿಯವರ ಉತ್ತರ ಮುಗಿದಕೂಡಲೇ ಆ ಬೇಡಿಕೆಯನ್ನು ಓಟಿಗೆ ಹಾಕಿದ್ದರಿಂದ ಕ್ಲಾರಿಫಿಕೇಷನ್ಸ್ ಕೇಳತಕ್ಕಂಥ ನಮ್ಮ ಹಕ್ಕಿಗೆ ಚ್ಯುತಿ ಬಂದಹಾಗೆ ಆಗಿದೆ. ಆಗಿದ್ದು ಆಗಿ ಹೋಯಿತು. ತಾವು ಈಗಲಾದರೂ ಈ ವಿಚಾರವನ್ನು ಇದರಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಾನು ನೀವು ಕೊಟ್ಟಿರತಕ್ಕಂಥ ನೋಟಿಸನ್ನು ನೋಡುತ್ತಿದ್ದೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಸ್ವಾಮಿ, ನಾವು ಈ ಬಗ್ಗೆ ನೋಟೀಸ್ ಕೊಟ್ಟಿರತಕ್ಕಂಥ ವಿಚಾರದಲ್ಲಿ ಅಲ್ಲದೇ, ಬಾಕಿ ವಿಚಾರಗಳಲ್ಲಿ ಸಹ ನಾವು ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಅವಕಾಶವಾಗಿಲ್ಲ. ಮತ್ತು ಆ ಸತ್ಯಾಂಶ ಏನಿದೆ ಅದು ರೇಕಾರ್ಡ್‌ಗೆ ಸರಿಯಾಗಿ ಹೋಗುವುದಕ್ಕೂ ಅವಕಾಶವಾಗಿಲ್ಲ. ಆದ್ದರಿಂದ ಸಾರ್ವಜನಿಕರು ನಮ್ಮ ಬಗ್ಗೆ ತಪ್ಪು ತಿಳಿದುಕೊಳ್ಳುತ್ತಾರೆ. ತಾವು ಈಗ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತಾ ಇಲ್ಲ. ನಾನು ಇದನ್ನು ಪ್ರತಿಭಟಿಸಿ ಹೊರಗೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಅದಕ್ಕೆಲ್ಲಾ ಮಾನ್ಯ ಮಂತ್ರಿಯವರು ಉತ್ತರವನು ಕೊಟ್ಟಿದ್ದಾರೆ.

FINANCIAL BUSINESS

Demands for Grants

Discussion Voting on for the year 1982-33

DEMAND NO. 20-FOOD & CIVIL SUPPLIES

SRI MANIK RAO PATIL (Minister for Food and Civil Supplies).—Sir, on the recommendation of the Governor, I beg to move —

> "That a sum not exceeding Rs. 1,59,96,000 on Revenue Account and Rs. 21,73,03,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of Food and Civil Supplies."

The question was proposed

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಸದನದಲ್ಲಿ ಮಂಡಿಸಿರತಕ್ಕಂತಹ ಬೇಡಿಕೆಯನ್ನು ನಾನು ಮೊಟ್ಟ ಮೊದಲನೆಯದಾಗಿ ವಿರೋಧಿಸುವುದು ನನ್ನ ಪವಿತ್ರವಾದಂತಹ ಕರ್ತವ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ಇದಕ್ಕೆ ಕಾರಣವಾದರೂ ಏನೆಂದರೆ ಈ ಇಲಾಖೆ ಬಹಳ ಪ್ರಾಮುಖ್ಯವಾದಂತಹ ಇಲಾಖೆಯಾಗಿದೆ. ಆದರೆ ಈ ಇಲಾಖೆಯ ಕಾರ್ಯ ಚಟುವಟಿಕೆ ಮತ್ತು ಈ ಇಲಾಖೆಯ ಮಾನ್ಯ ಮಂತ್ರಿಗಳ ಕಾರ್ಯಚಟುವಟಿಕೆ ಇವೆರಡನ್ನು ನಾವು ಸಮೀಕ್ಷೆ ಮಾಡಿ ಅದನ್ನು ವಿಮರ್ಶೆ ಮಾಡುವುದು ನಮ್ಮ ಪವಿತ್ರವಾದಂತಹ ಕೆಲಸ. ಆ ಕೆಲಸವನ್ನು ನಾವು ಇವತ್ತು ಮಾಡಬೇಕಾಗಿದೆ. ಈ ಇಲಾಖೆಯ ಬಗ್ಗೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂತಹ ಬೇಡಿಕೆಯನ್ನು ನಾನು ಏತಕ್ಕೆ ವಿರೋಧ ಮಾಡುತ್ತೇನೆಂದರೆ ಈ ಇಲಾಖೆಯಲ್ಲಿರತಕ್ಕಂತಹ ಭ್ರಷ್ಟಾಚಾರ ಅವ್ಯವಹಾರ, ಬಹುಶಃ ನಾವು ಎಂದೂ ಕಂಡಿಲ್ಲ ಮತ್ತು ಕಾಣುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಇಲಾಖೆಯ ಮೇಲೆ ನಮ್ಮ ರಾಜ್ಯದ ಸುಮಾರು ೪ ಕೋಟಿ ಜನರು ಅವಲಂಬಿಸಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಆದರೆ ಇತ್ತೀಚೆಗೆ ನಡೆದಂತಹ ಒಂದು ಘಟನೆಯನ್ನು ನಾನು ಉದಾಹರಣೆಗೆ ಕೊಡುತ್ತೇನೆ ಅದು ಏನೆಂದರೆ ನಮ್ಮ ಯೋಜನಾ ಆಯೋಗದವರು ನಡೆಸಿದಂತಹ ಸಮೀಕ್ಷೆಯನ್ನು ನಮ್ಮ ಮಾನ್ಯ ಮಂತ್ರಿಗಳು ಗಮನಕ್ಕೆ ತಂದುಕೊಂಡಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಯೋಜನಾ ಆಯೋಗದವರು ನಡೆದಂತಹ ಸಮೀಕ್ಷೆಯ ಪ್ರಕಾರ ನಮ್ಮ ದೇಶದಲ್ಲಿ ಶೇಕಡ ೫೦ರಷ್ಟು ಜನರು ಅವರು ಕೊಳ್ಳತಕ್ಕಂತಹ ಕ್ಯಾಪ್ಯಾಸಿಟಿ ಇಲ್ಲವೆಂದು ಈ ಸಮೀಕ್ಷೆಯ ವರದಿಯಿಂದ ಕಂಡು ಬಂದಿದೆ. ಮತ್ತು ಈ ಯೋಜನಾ ಆಯೋಗದವರು ಮಾಡಿರತಕ್ಕಂತಹ ಸಮೀಕ್ಷೆಯ ಪ್ರಕಾರ ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೨ ಕೋಟಿ ಜನರಿಗೆ ಬೇಕಾಗಿರತಕ್ಕಂತಹ ಆಹಾರಪದಾರ್ಥಗಳನ್ನು ಕೊಳ್ಳತಕ್ಕಂತಹ ಶಕ್ತಿ ಮತ್ತು ಸಾಮರ್ಥ್ಯವಿಲ್ಲವೆಂದು ಗೊತ್ತಾಗಿದೆ. ಆದರೆ ಸುಮಾರು ೩೭ ವರ್ಷಗಳಿಂದಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿದ್ದರೂ ಸಹ ಜನ ಸಾಮಾನ್ಯರಿಗೆ ಬೇಕಾದಂತಹ ಆಹಾರಪದಾರ್ಥಗಳನ್ನು ತಾವು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರೆಲ್ಲರೂ ಬರೀ ಹೊಟ್ಟೆ ಮತ್ತು ಅರೆ ಹೊಟ್ಟೆ ಊಟ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ, ನಿಮ್ಮ ಸರ್ಕಾರ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಷ್ಟು ದಕ್ಷ ರೀತಿಯ ಆಡಳಿತವನ್ನು ಶ್ರೀಸಾಮಾನ್ಯನಿಗೆ ಕೊಡುತ್ತಿದೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ಆದರೆ ಇವತ್ತು ನಾನು ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ,

ನಮ್ಮ ರಾಜ್ಯವನ್ನಾಗಲಿ ಅಥವಾ ರಾಷ್ಟ್ರವನ್ನಾಗಲಿ ಬೇರೆ ರಾಷ್ಟ್ರಗಳಿಗೆ ಹೋಲಿಸಿ ನೋಡಿದಾಗ, ಸೋವಿಯತ್ ದೇಶದಲ್ಲಿ ಅವರ ಆಹಾರಧಾನ್ಯಗಳ ಉತ್ಪಾದನೆ ಸುಮಾರು ೨೫೦ ಮಿಲಿಯನ್ ಮೆಟ್ರಿಕ್ ಟನ್ಸ್ ಆದರೆ ಅಲ್ಲಿರುವಂತಹ ಜನಸಂಖ್ಯೆ ಸುಮಾರು ೨೦ ಕೋಟಿ. ಆದರೆ ನಮ್ಮ ದೇಶದಲ್ಲಿ ೧೩೫ ಮೆಟ್ರಿಕ್ ಟನ್ಸ್ ಆದರೆ ನಮ್ಮ ದೇಶದಲ್ಲಿರುವಂತಹ ಜನಸಂಖ್ಯೆ ಸುಮಾರು ೬೦ ಕೋಟಿ. ಅಲ್ಲಿರುವ ಜನಸಂಖ್ಯೆ ನಮ್ಮ ಜನಸಂಖ್ಯೆಗಿಂತ ಮೂರನೇ ಒಂದು ಭಾಗದಷ್ಟು ಆದರೂ ಸಹ ಅವರು ಅವರಿಗೆ ಬೇಕಾದಂತಹ ಆಹಾರ ಪದಾರ್ಥಗಳನ್ನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಆದರೆ ನಮ್ಮಲ್ಲಿ ಕೇವಲ ೧೩೫ ಮಿಲಿಯನ್ ಮೆಟ್ರಿಕ್ ಟನ್ ಉತ್ಪಾದನೆ ಮಾಡಿ ಸುಮಾರು ೬೦ ಕೋಟಿ ಜನಸಂಖ್ಯೆಗೆ ನೀಡುತ್ತಿದ್ದೇವೆ. ಇದನ್ನು ನೋಡಿದಾಗ ನಮ್ಮ ಪರ್ ಕ್ಯಾಪಿಟಲ್ ಎಷ್ಟು ಕಡಿಮೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ಮಾನ್ಯ ಮಂತ್ರಿಗಳು ಹೇಳುತ್ತಾರೆ ನಮ್ಮಲ್ಲಿ ಹೇರಳ ಆಹಾರಧಾನ್ಯಗಳು ಇದೆ ನಾವು ದಾಸ್ತಾನು ಸಾಕಷ್ಟು ಮಾಡಿ ಇಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ತಾವು ರೈತರು ಬೆಳೆದಂತಹ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರುವಾಗ ಇಂತಹ ಸುಳ್ಳು ಏತಕ್ಕೆ ತಾವು ಹೇಳಬೇಕು? ನಮ್ಮ ಮಾನ್ಯ ಮಂತ್ರಿಗಳು ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಸಹ ಕೊಟ್ಟಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ನಮ್ಮ ರಾಜ್ಯದಲ್ಲಿರುವಂತಹ ಜನತೆಗೆ ತಾವು ಫುಡ್ ಸೆಕ್ಯೂರಿಟಿ ಏನಾದರೂ ಕೊಟ್ಟಿದ್ದೀರಾ?. ಮತ್ತು ಕೊಡುವಂತಹ ವ್ಯವಸ್ಥೆ ಏನಾದರೂ ಇದುವರೆವಿಗೂ ಮಾಡಿದ್ದೀರಾ?. ಇದನ್ನು ನಮ್ಮ ಮಾನ್ಯ ಮಂತ್ರಿಗಳು ಏನೂ ಯೋಚನೆ ಮಾಡಿಲ್ಲ. ಅವರು ಹೇಳಬಹುದು ಕೇಂದ್ರ ಸರ್ಕಾರದಿಂದ ನಮಗೆ ಗೋಧಿ ಬರಲಿಲ್ಲ. ಮತ್ತು ಆಹಾರಪದಾರ್ಥಗಳು ಸಿಕ್ಕಿಲ್ಲ ಮತ್ತು ಇರೆಗ್ಯೂಲರ್ ಸಪ್ಲೈಸ್ ಇದೆ. ಆದ್ದರಿಂದ ಸರಬರಾಜಿನಲ್ಲಿ ದೋಷ ಉಂಟಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಸುಮಾರು ೩೫ ವರ್ಷಗಳಿಂದಲೂ ಸಹ ನಿಮ್ಮ ಕಾಂಗ್ರೆಸ್ ಸರ್ಕಾರವೇ ಆಡಳಿತದಲ್ಲಿದ್ದರೂ ಸಹ ಅವರು ಆಹಾರ ಪದಾರ್ಥಗಳನ್ನು ಒದಗಿಸಿಕೊಡುವುದರಲ್ಲಿ ವಿಫಲರಾಗಿದ್ದೀರಿ? ಇವತ್ತು ನಮ್ಮ ರಾಜ್ಯದಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರಿವೆ. ಗಗನಕ್ಕೇರುತ್ತಿರುವ ಬೆಲೆಗಳನ್ನು ಇಳಿಸಲು ನಮ್ಮ ಸರ್ಕಾರದವರು ಏನೇನು ಪ್ರಯತ್ನ ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ಜನರು ಸತ್ತರು ಇದಕ್ಕೆ ಕಾರಣರು ಯಾರು ಎಂದು ಡಾಕ್ಟರ್‌ನ್ನು ಕೇಳಿದಾಗ ಅವರು ಹೇಳಿದರು ಇದಕ್ಕೆ ಕಾರಣ ಯಾರು ಅಲ್ಲ ಅವರಿಗೆ ಹೊಟ್ಟೆಗೆ ಊಟವಿಲ್ಲದೆ ಸತ್ತಿದ್ದಾರೆಂದು ತಿಳಿಸಿದರು. ಈ ರೀತಿಯಾಗಿ ಬೆಂಗಳೂರು ಮಹಾನಗರದಲ್ಲಿ ಈ ರೀತಿಯಾಗಿ ಹೊಟ್ಟೆಗೆ ಊಟವಿಲ್ಲದೆ ಸತ್ತಿದ್ದರೆ ಇನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಜನ ಹಸಿವಿನ ದವಡೆಗೆ ಸಿಕ್ಕಿ ಸತ್ತಿದ್ದಾರೆ. ಈ ಸರ್ಕಾರದವರು ಬೆಲೆಗಳ ಹತೋಟಿ ಮಾಡುವುದರಲ್ಲಿ ವಿಫಲಗೊಂಡಿದ್ದಾರೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವರ ಸರ್ಕಾರದವರೇ ಕೊಟ್ಟಿರುವ ಬೆಲೆಗಳು ಈ ರೀತಿ ಇವೆ. ನಾನು ಇದನ್ನು ಓಪನ್ ಮಾರ್ಕೆಟ್‌ನಲ್ಲಿ ಹೋಗಿ ಪಟ್ಟಿ ಮಾಡಿಕೊಂಡು ಬಂದಿದ್ದೇನೆ ಅವು ಈ ರೀತಿ ಇವೆ. ಈ ಬೆಲೆಗಳು ಸುಮಾರು ೧-೧-೮೨ರಲ್ಲಿ ಇದ್ದಿದ್ದಕ್ಕೂ ಈಗಿನ ಬೆಲೆಗೂ ಸ್ವಲ್ಪ ತಾಳೆ ನೋಡಿದರೆ ಗೊತ್ತಾಗುತ್ತದೆ, ಅಕ್ಕಿ ಒಂದು ಕೆ.ಜಿ. ಉತ್ತಮ ೩-೬೦ ಪೈಸೆ ಇದ್ದಿದ್ದು ಈಗ ೪-೦೦ ರೂಪಾಯಿಗಳಾಗಿದೆ. ಮಧ್ಯಮ ದರ್ಜೆಯ ಅಕ್ಕಿ ೩-೫೦ ಪೈಸೆ ಇದ್ದು ಈಗ ೩-೬೦ ಪೈಸೆಗಳಾಗಿದೆ. ಮತ್ತೆ ೪-೦೦ ರೂಪಾಯಿಗಳಾಗಿದೆ. ದಪ್ಪ ಅಕ್ಕಿ ೩-೫೦ ರಿಂದ ೪-೦೦ ರೂಪಾಯಿಗಳಾಗಿದೆ. ಮತ್ತೆ ಹೆಸರು ೪-೫೦ ರಿಂದ ೬-೦೦ ರೂಪಾಯಿಗಳಾಗಿದೆ. ಮತ್ತೆ ಹುರಳಿ ೨-೦೦ರೂಗಳಿಂದ ೪-೦೦ರೂಪಾಯಿಗಳಾಗಿದೆ. ಬೆಲ್ಲ ಒಂದು ಕೆ.ಜಿ. ೩-೦೦ ರೂಪಾಯಿಗಳಿಂದ ೩-೫೦ ಗಿದೆ. ಮತ್ತೆ ಜೋಳ ೧-೬೫ ಪೈಸೆಗಳಿಂದ ೩-೦೦ ರೂಪಾಯಿಗಳಾಗಿದೆ. ಗೋಧಿ ೨-೮೦ ರಿಂದ ೫-೫೦ ರೂಪಾಯಿಗಳಾಗಿದೆ. ರವೆ ೪-೫೦ ರಿಂದ ೬-೫೦ ಆಗಿದೆ. ಮತ್ತೆ ಎಣ್ಣೆ ೧೪ ರೂಪಾಯಿಗಳಿಂದ ೧೬, ೧೭ ರೂಪಾಯಿಗಳಾಗಿದೆ. ಇನ್ನು ಬೆಣ್ಣೆ ಇದು ಪೋಕೇಸ್‌ನಲ್ಲಿಟ್ಟಿರುವಂತೆ ಇದ್ದರೂ ಸಹ ೨೭-೦೦ ರೂಪಾಯಿಗಳಿಂದ ೩೬ ರೂಪಾಯಿಗಳಾಗಿದೆ. ಇನ್ನು ತುಪ್ಪ ತೆಗೆದುಕೊಂಡರೆ ೪೫-೦೦ರೂಪಾಯಿಗಳಿಂದ ೫೦ರೂಪಾಯಿಗಳಾಗಿದೆ. ಇನ್ನು ಹಣ್ಣುಗಳ ಬಗ್ಗೆ ಹೇಳುವುದು ಬೇಡ. ಚೀಫ್ ಮಾರ್ಕೆಟಿಂಗ್ ಆಫೀಸರ್ ಇನ್ ಕರ್ನಾಟಕ-ಅವರು ಪ್ರತಿ ವಾರವೂ ಕೊಡುವ ದರಗಳ ಪಟ್ಟಿಯಂತೆ ತಾರೀಖು ೨೯-೬-೮೨ ರಲ್ಲಿ ಕೊಟ್ಟಿರತಕ್ಕಂಥಾದ್ದು ಇದು.

ಶ್ರೀ ಶಿವನಂಜಪ್ಪ.—ರೈತರು ಪಾಪರ್ ಆಗುತ್ತಿದ್ದಾರೆ. ಕೊಟ್ಟರೆ ಅದು ತಪ್ಪಿರಬೇಕು. ಮೂರು ವರೆ-ನಾಲ್ಕು ರೂಪಾಯಿ ಬೆಲ್ಲ ಕಿಲೋಗೆ ಹೇಳುತ್ತಿರುವುದು ತಪ್ಪು.

ಅಧ್ಯಕ್ಷರು.—ಬೆಲ್ಲದ ರೇಟು ಕಡಿಮೆ ಎಂದು ಹೇಳುತ್ತಿದ್ದಾರೆ. ಅವರು ಹೇಳುವಾಗ ಪ್ರಸ್ತಾಪಿಸಿದರೆ ಆಯಿತು. ಬೇಡವೆಂದು ಹೇಳುವುದಿಲ್ಲ.

ಶ್ರೀ ಪಿ. ರಾಮದೇವ್.—ಅಂಡರ್ ಸೆಕ್ರೆಟರಿಯವರು ಮಾರುಕಟ್ಟೆ ಇಲಾಖೆಯ ಮುಖ್ಯ ಕಾರ್ಯದರ್ಶಿಯವರ ಪರವಾಗಿ ಸೈನ್ ಮಾಡಿದ್ದಾರೆ. ಆದರೆ ಅಲ್ಲಿ ಸೀಲ್ ಇಲ್ಲ. ಇಷ್ಟು ಚೆನ್ನಾಗಿದೆ ನಿಮ್ಮ ಸರ್ಕಾರ ಸುಳ್ಳು ಅಂಕಿಗಳನ್ನು ತುಂಬಿಸಿದರೆ ಆಯಿತಾ? ಮುಂದಿನ ಟಿಕೆಟ್ ಬಗ್ಗೆ ಯೋಚನೆ ಮಾಡಿ. ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲೂ ವಿಫಲವಾಗಿದೆ. ಮಂತ್ರಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ದಕ್ಷತೆ ತೋರಿಸುತ್ತಿಲ್ಲ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಇನ್ನು ತುಂಬಾ ಕಷ್ಟಪಟ್ಟಿದ್ದೇವೆ ಎಂದು ಅವರು ವರದಿಯಲ್ಲಿ ಹೇಳಿಕೊಂಡಿದ್ದಾರೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿ, ಗೋಧಿ, ಸೀಮೆಎಣ್ಣೆ, ಪಾಮೋಲೀವ್ ಎಣ್ಣೆ, ತರಿಸುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಪೂರೈಕೆಯಾಗಿಲ್ಲವೆಂದು ಹೇಳಿದ್ದಾರೆ ಇನ್ನು ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ. ಒಪ್ಪಿಕೊಳ್ಳಲೇಬೇಕು. ಹೌದು, ಸಕಾಲದಲ್ಲಿ ಈ ಒಂದು ಪಡಿತರ ಸರಕು ನಮ್ಮಲ್ಲಿ ಬರುವುದಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಲೆವಿ ಪ್ಯಾಡಿ ಸಂಗ್ರಹದಲ್ಲಿ ಸರ್ಕಾರ ಮಣ್ಣು ಮುಕ್ಕಿದೆಯೆಂದು ಹೇಳಿದರೆ ತಪ್ಪಲ್ಲ, ರೈತರಿಗೆ ಮೋಸವಾಗಿದೆ ಎಂದು ರೈತಪ್ರತಿನಿಧಿಗಳು ಹೇಳುತ್ತಿದ್ದಾರೆ. ಅದೇ ರೀತಿಯಲ್ಲಿ ಬಳಕೆದಾರರರಿಗೂ ವಂಚನೆಯಾಗಿದೆಯೆಂದು ಹೇಳಬೇಕಾಗುತ್ತದೆ. ಬಳಕೆದಾರರಿಗೆ ಆಹಾರಧಾನ್ಯ ಮತ್ತಿತರ ವಿತರಣೆ ಅಸಮರ್ಪಕವಾಗಿದೆ. ಕೇವಲ ಗ್ರಾಹಕರನ್ನು ಮೋಸಗೊಳಿಸುವಂತದ್ದಾಗಿದೆ. ಇಂದು ಹದಿನೇಳು ನಿಯಂತ್ರಣ ಆದೇಶಗಳನ್ನು ಕೇಂದ್ರ ಸರ್ಕಾರದವರು ಜಾರಿಗೆ ತಂದಿದ್ದರೂ ಕೂಡ ಇದನ್ನು ಸಮರ್ಪಕವಾಗಿ ಜಾರಿಗೆ ತರಲು ಸಾಧ್ಯವಿಲ್ಲವಾಗಿದೆ. ಬ್ಲಾಕ್‌ಮಾರ್ಕೆಟಿಂಗ್ ಹೋರ್ಡಿಂಗ್ ಜಾಸ್ತಿಯಾಗಿದ್ದು ಸಾಮಾಜಿಕ ಅನಾಹುತಕ್ಕೆ ಕಾರಣವಾಗಿದೆ. ಅಂಥವರನ್ನು ಹಿಡಿಯತಕ್ಕಂಥ ಸಾಮರ್ಥ್ಯ ಸರ್ಕಾರಕ್ಕಿಲ್ಲವಾಗಿದೆ.

ಇನ್ನು, ಸಬ್ಸಿಡಿ ವಿಷಯವಾಗಿ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಸಬ್ಸಿಡಿ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥಾದ್ದು. ಬಹುಶ; ಇಡೀ ದೇಶದಲ್ಲಿ ನಮ್ಮ ರಾಜ್ಯ ಕೇಂದ್ರ ಸರ್ಕಾರದಿಂದ ಸಬ್ಸಿಡಿ ತೆಗೆದುಕೊಂಡಿದ್ದು ಬಹಳ ಕಡಿಮೆ. ಐದು ಕೋಟಿ ರೂಪಾಯಿಗಳನ್ನು ಕೇಂದ್ರದವರು ತಮಿಳುನಾಡು, ಆಂಧ್ರಪ್ರದೇಶಕ್ಕೆ ಕೊಟ್ಟಿದ್ದಾರೆ ಆದರೆ ನನಗೆ ತಿಳಿದಹಾಗೆ ಕರ್ನಾಟಕಕ್ಕೆ ಕೊಟ್ಟಿರುವುದು ಒಂದು ಕೋಟಿಗಿಂತಲೂ ಕಡಿಮೆ. ಇದು ನಮ್ಮ ಶಕ್ತಿಸಾಮರ್ಥ್ಯವನ್ನು ತೋರಿಸುತ್ತದೆ. ಇದು ನಮ್ಮ ಫೈಲ್ಯೂರ್ ಅಲ್ಲವೆ? ಇವತ್ತು ಮಿಲ್ಲರ್‌ಗಳಲ್ಲಿ ಸಂಗ್ರಹವಾದ ಲೆವಿ ಪ್ಯಾಡಿಯನ್ನು ಅವರು ಕೊಟ್ಟೇ ಇಲ್ಲ. ಅದನ್ನು ತೆಗೆದುಕೊಳ್ಳತಕ್ಕಂಥ ಸಾಮರ್ಥ್ಯ, ಶಕ್ತಿ ಸರ್ಕಾರಕ್ಕೆ ಬಂದಿಲ್ಲದಿರುವುದು ಹಾಸ್ಯಾಸ್ಪದ. ಕೋಆಪರೇಟಿವ್ ಕ್ಲೀಯರಿಂಗ್ ಏಜೆಂಟ್ಸ್ ಹತ್ತಿರ ಕೋಟ್ಯಾಂತರ ರೂಪಾಯಿ ಎಂಟು-ಹತ್ತು ವರ್ಷಗಳಿಂದ ಬಾಕಿ ಉಳಿದಿವೆ. ವಸೂಲು ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಹದಿಮೂರು ಕೋಟಿ ರೂಪಾಯಿ ಸ್ಟಾಕ್ ವೆರಿಫಿಕೇಷನ್ ಆಗಿಲ್ಲ. ಸರ್ಕಾರ ಏನು ಮಾಡುತ್ತಿದೆ? ಡಿಪಾರ್ಟ್‌ಮೆಂಟ್ ಏನುಮಾಡುತ್ತಿದೆ ಮಂತ್ರಿಗಳು ಏನು ಮಾಡುತ್ತಿದ್ದಾರೆಂದು ಕೇಳಬೇಕಾಗಿದೆ. ಅವರ ಕಾರ್ಯ ವಿಮರ್ಶೆ ಮಾಡತಕ್ಕಂಥ ಹಕ್ಕು ಈ ಸದನಕ್ಕೆ ಇರುತ್ತದೆ. ಇದರ ಜೊತೆಯಲ್ಲಿ ಗೋಡೌನ್‌ನಲ್ಲಿ ಡಿಸ್ಟ್ರಿಬ್ಯೂಷನ್‌ಗಾಗಿ ಇಡಲಾಗಿದ್ದ ೭ ಕೋಟಿ ಮೌಲ್ಯದ ಪದಾರ್ಥಗಳು ಎಲ್ಲಿ ಹೋಯಿತು ಈ ದುಡ್ಡು ಏನಾಯಿತು? ಸರ್ಕಾರದ ವೈಫಲ್ಯಗಳು ಈ ಕೆಲವಾರು ದುಷ್ಟಾಂತಗಳಿಂದ ವಿಶದವಾಗುತ್ತದೆ. ಹೀಗಾದರೆ ಸರ್ಕಾರ ಏನೂ ಮಾಡಿಲ್ಲ ಜನರಿಗೆ ಏನು ಅನುಕೂಲ ಮಾಡಿಕೊಡಬೇಕಾಗಿತ್ತೊ ಅದನ್ನು ಮಾಡಿಲ್ಲ. ಸರ್ಕಾರದ ನೀತಿ ಏನಾಗಿದೆ ಎಂದರೆ ಸ್ಮಗ್ಲರ್ಸ್, ಕಾಳಸಂತೆ ದಾಸ್ತಾನುಗಾರರನ್ನು ಸರ್ಕಾರ ಪೋಷಿಸುತ್ತಿದೆ. ಅವರಿಗೆ ಪ್ರೋತ್ಸಾಹವನ್ನು ಕೊಡುತ್ತಿದೆ. ಜನರಿಗೆ ಉಪಯೋಗ ಇಲ್ಲ. ಆದರೆ ಸರ್ಕಾರಕ್ಕೆ ಇದರಿಂದ ಲಾಭ ಇದೆ. ಸಂಪೂರ್ಣವಾಗಿ ಜನತೆಯ ಹಿತದೃಷ್ಟಿಯನ್ನು ಬಲಿಕೊಟ್ಟು ಈ ಸರ್ಕಾರ ಸಮಾಜಕ್ಕೆ ಹೊರೆಯಾಗಿದೆ ಎನ್ನುವ ಮಾತನ್ನು ಹೇಳಿದರೆ ಬಹುಶಃ ತಪ್ಪಾಗಲಾರದು. ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳನ್ನು ನೇರವಾಗಿ ಕೇಳಬೇಕಾಗುತ್ತದೆ, ಇಲ್ಲಿ ವರದಿಯೊಳಗೆ ಹೇಳಿದ್ದಾರೆ. ನಮಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಗೋಧಿ ಕೋಟಾ ಎಷ್ಟು ಎಂದು ಕೊಟ್ಟಿದ್ದಾರೆ. ಸಾರ್ವಜನಿಕರ ವಿತರಣೆಗಾಗಿ ಬರತಕ್ಕಂಥಾದ್ದು ಎರಡು ಸಾವಿರ ಟನ್ ಗೋಧಿ, ಮಿಲ್ಲರ್ಸ್‌ಗಳಿಗೆ ೨೦ ಸಾವಿರ ಟನ್ ಎಂದು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇದೂ ಅಲ್ಲದೆ ತಾವು

೨೦೦೦ ಟನ್ ಅನ್ನು ಡಿಸ್ಕ್ರಿಷನರಿ ಪವರ್ಸ್‌ನಲ್ಲಿ ಇಟ್ಟುಕೊಂಡಿದ್ದೀರಿ. ೨೦೦೦ ಟನ್ ಅನ್ನು ಡಿಸ್ಕ್ರಿಷನರಿ ಪವರ್ಸ್‌ನಲ್ಲಿ ಇಟ್ಟುಕೊಳ್ಳುವುದಕ್ಕೆ ಯಾರು ಕೊಟ್ಟರು, ತಾವು ಏಕೆ ಇಟ್ಟುಕೊಳ್ಳುತ್ತೀರಿ. ಇದರ ಲೆಕ್ಕ ಈ ವರದಿಯಲ್ಲಿ ಬಂದಿಲ್ಲ, ಇದನ್ನು ತಾವು ಎಕ್ಸ್‌ಪ್ಲೈನ್ ಮಾಡಬೇಕು. ಈ ರೀತಿ ಖೋಟಾ ಇಟ್ಟುಕೊಳ್ಳತಕ್ಕಂಥಾದ್ದು ಕಾರಣವೇನು. ಈಗಾಗಲೇ ಸಿಮೆಂಟ್ ಹಗರಣ ಆಗಿದೆ. ಈ ಒಂದು ಡಿಸ್ಕ್ರಿಷನರಿ ಪವರ್ಸನ್ನು ಏನು ಇಟ್ಟುಕೊಂಡಿದ್ದೀರಿ ಇದನ್ನು ದುರುಪಯೋಗ ಮಾಡುವ ದೃಷ್ಟಿಯಿಂದ ಇಟ್ಟುಕೊಂಡಿದ್ದೀರಿ ಎಂದು ನಾನು ಹೇಳಬೇಕಾಗಿದೆ. ಮಿಲ್ಲರ್ಸ್‌ಗೆ ಅನುಕೂಲ ಮಾಡತಕ್ಕ ದೃಷ್ಟಿಯಿಂದ ೨೦೦೦ ಟನ್ ಗೋಧಿಯನ್ನು ತಮ್ಮ ಮನಸ್ಸಿಗೆ ಬಂದವರಿಗೆ ಕೊಡುವುದಕ್ಕೆ ಇಟ್ಟುಕೊಂಡಿದ್ದೀರಿ. ಇದು ಏನಾಗುತ್ತಿದೆ ಎನ್ನುವುದನ್ನು ಹೇಳಬೇಕು, ಇದರ ಲೆಕ್ಕವನ್ನು ಈ ಪುಸ್ತಕದಲ್ಲಿ ತೋರಿಸಿಲ್ಲ. ಇಷ್ಟೇ ಅಲ್ಲದೆ ಸೂಜಿ ಮತ್ತು ಮೈದಾ ಬಗ್ಗೆ ತಾವು ಹತೋಟಿಯನ್ನು ಇಟ್ಟುಕೊಂಡಿದ್ದೀರಿ. ರೋಲರ್ ಫ್ಲೋರ್ ಮಿಲ್ಸ್‌ಗೆ ೨೨ ಸಾವಿರ ಟನ್ ಗೋಧಿಯನ್ನು ಪ್ರತಿ ತಿಂಗಳೂ ಕೊಡುತ್ತೀರಿ. ಅವರು ಸೂಜಿ, ಮೈದಾ ಮಾಡಿ ನಿಮಗೆ ಕೊಡಬೇಕು. ನೀವು ತಿಂಗಳ ಕೊನೆಯಲ್ಲಿ ರಿಲೀಸ್ ಮಾಡುತ್ತೀರಿ, ಅದನ್ನು ಅವರು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅಲ್ಲೇ ಉಳಿದುಹೋಗುತ್ತದೆ. ಅದನ್ನು ಅವರು ಓಪನ್ ಮಾರ್ಕೆಟ್‌ನಲ್ಲಿ ಮಾರಿ ಆ ಹಣದ ಅಂತರವನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ ಯಾವ ದುರುದ್ದೇಶದಿಂದ ಈ ಕೆಲಸವನ್ನು ಅವರ ಕೈಯಲ್ಲಿ ಮಾಡಿಸುತ್ತಿದ್ದೀರಿ. ಕೋಟ್ಯಾಂತರ ರೂಪಾಯಿಗಳನ್ನು ಮಿಲ್ಲರ್ಸ್ ಹೊಡೆಯುತ್ತಾ ಇದ್ದಾರೆ. ತಾವು ಅದಕ್ಕೆ ಪ್ರೋತ್ಸಾಹ ಕೊಡುತ್ತಿದ್ದೀರಿ ಈ ಪುಸ್ತಕದ ಪೇಜ್ ೧೮ರಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ದುರುದ್ದೇಶಪೂರ್ವಕವಾಗಿ ಹಣದ ಆಸೆಗೋಸ್ಕರ ತಿಂಗಳ ಕೊನೆಯಲ್ಲಿ ರಿಲೀಸ್ ಮಾಡಿ ಅಪ್‌ಟೇಕ್ ಇಲ್ಲದೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಅವರು ಓಪನ್ ಮಾರ್ಕೆಟ್‌ನಲ್ಲಿ ಮಾರಿ ಅಥವಾ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ಆ ಹಣದ ಅಂತರ ಏನಿದೆ ಅದನ್ನು ಸರ್ಕಾರದಿಂದ ಹಿಡಿದು ಅಲ್ಲಿಯವರೆಗೆ ಎಲ್ಲರೂ ಹಂಚಿಕೊಳ್ಳತಕ್ಕಂಥದು ಕ್ರಮಬದ್ಧವಾಗಿ ನಡೆಯುತ್ತಿದೆ. ಈ ಎಲ್ಲಾ ದೃಷ್ಟಿಯಿಂದ ಸಂಪೂರ್ಣವಾಗಿ ತಮ್ಮ ಖಾತೆ ವಿಫಲಗೊಂಡಿದೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ವಿತರಣೆ ಹೇಗಿದೆಯೆಂದರೆ, ತಾವು ಒಂದು ತತ್ವವನ್ನು. ಒಂದು ನಿರ್ದೇಶನವನ್ನು ಮಾಡಿದ್ದೀರಿ. ಏನೆಂದರೆ ಲಾಭ ನಷ್ಟ ಇಲ್ಲದೆ ಸಂಗ್ರಹಣೆ ಮತ್ತು ವಿತರಣೆ ಮಾಡಬೇಕು ಎಂಬ ತತ್ವವನ್ನು ನಿರೂಪಿಸಿದಿರಿ. ಸಾಮಾನ್ಯವಾಗಿ ಆಹಾರದಲ್ಲಿ ಯಾರೂ ಲಾಭ ಮಾಡಿಕೊಳ್ಳಬಾರದು, ಸರ್ಕಾರ ನಷ್ಟವನ್ನೂ ಮಾಡಿಕೊಳ್ಳಬಾರದು ಎಂದು ಮಾಡಿದಿರಿ, ಆದರೆ ಲಾಭ ನಷ್ಟವಿಲ್ಲದೆ ವ್ಯಾಪಾರ ಮಾಡಬೇಕಾದರೆ ತಮಗೆ ಲೆಕ್ಕಬೇಕು, ಲೆಕ್ಕವಿಲ್ಲದೆ ವ್ಯಾಪಾರ ಮಾಡುವುದಕ್ಕಾಗುವುದಿಲ್ಲ. ನಾಲ್ಕೈದು ವರ್ಷಗಳಿಂದ ಲೆಕ್ಕಗಳೇ ಇಲ್ಲ. ನಮ್ಮ ನಾಗರೀಕ ಸರಬರಾಜು ಇಲಾಖೆಯಲ್ಲಿ ಮತ್ತು ಫುಡ್ ಕಾರ್ಪೊರೇಷನ್‌ನಲ್ಲಿ ಲೆಕ್ಕಗಳನ್ನು ಇಟ್ಟಿಲ್ಲ. ಈ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳಿದ್ದಾರೆ. ಲೆಕ್ಕ ಇಲ್ಲದೇ ಇರುವಾಗ ತಾವು ಬೆಲೆ ಹೇಗೆ ಕಟ್ಟುತ್ತೀರಿ. ಹಾಗೆ ಲೆಕ್ಕ ಇಡದೇ ಬೆಲೆ ಕಟ್ಟಿ ಮಾಡಿದರೂ ಸಹ ಸಾಕಷ್ಟು ನಷ್ಟವನ್ನು ಅನುಭವಿಸಿದಿರಿ ತಮಗೆ ಹೇಳಬೇಕಾದರೆ, ೧೯೭೮–೭೯ ರಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿದಿರಿ. ಲೆಕ್ಕ ಇಲ್ಲದೆ, ಸಂಗ್ರಹಣೆ ಮಾಡಿ ವಿತರಣೆಮಾಡಿ ೩ ಕೋಟಿ ರೂಪಾಯಿ ನಷ್ಟ ಅನುಭವಿಸಿದಿರಿ, ಯಾವರೀತಿ ರೇಟನ್ನು ಫಿಕ್ಸ್ ಮಾಡುತ್ತೀರಿ ಪ್ರೊಕ್ಯೂರ್‌ಮೆಂಟ್‌ಗೆ ಏನು ಬೆಲೆ ಬರುತ್ತದೆ, ಸ್ಟೋರೇಜಿಗೆ ಎಷ್ಟು ಖರ್ಚಾಗುತ್ತದೆ, ಡಿಸ್ಟ್ರಿಬ್ಯೂಷನ್‌ಗೆ ಎಷ್ಟು ಖರ್ಚಾಗುತ್ತದೆ, ಓವರ್ ಹೆಡ್ ಎಕ್ಸ್‌ಪೆನ್ಸಸ್ ಎಷ್ಟಾಗುತ್ತದೆ ಇದನ್ನೆಲ್ಲಾ ಸೇರಿಸಿ ತಾವು ರೇಟನ್ನು ಫಿಕ್ಸ್ ಮಾಡಬೇಕು. ಇವತ್ತಿನ ದಿವಸ ಲೆಕ್ಕ ಇಲ್ಲದೆ ಅರ್ಬಿಟ್ರರಿಯಾಗಿ ರೇಟ್ ಫಿಕ್ಸ್‌ಮಾಡಿ, ಕನ್‌ಸ್ಯೂಮರ್ಸ್‌ಗೆ ಮೋಸ ಮಾಡುವುದನ್ನು ನಾವು ನೋಡುತ್ತಾ ಇದ್ದೇವೆ ಒಂದು ಕಾಸ್ಟ್ ಶೀಟ್ ಮಾಡಿದ್ದಾರೆ. ಡಿಪಾರ್ಟ್‌ಮೆಂಟ್ ಆಫ್ ಫುಡ್‌ನವರು ಮತ್ತು ಕರ್ನಾಟಕ ಫುಡ್ ಕಾರ್ಪೊರೇಷನ್‌ನವರು ಸೇರಿ ಕಾಸ್ಟ್‌ಶೀಟ್ ತಯಾರು ಮಾಡಿದ್ದಾರೆ ಈ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರೂ ಕೂಡ ಹೇಳಿದ್ದಾರೆ. ಯಾವ ರೀತಿ ರೇಟನ್ನು ಫಿಕ್ಸ್‌ಮಾಡಿ ಜನತೆಯನ್ನು ಮೋಸ ಮಾಡುತ್ತಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ೧೯೮೦–೮೧ ರಲ್ಲಿ ಪ್ರೊಕ್ಯೂರ್‌ಮೆಂಟ್ ಆಫ್ ಪ್ಯಾಡಿಗೆ ಕಾಸ್ಟ್‌ಶೀಟನ್ನು ತಯಾರು ಮಾಡಿದಿರಿ. ಇದರಲ್ಲಿ purchase point stage one.

Purchase price Fine Rice Rs. 114
Medium Rice Rs. 112
Coarse Rice Rs, 109
Transportation charges Rs.6

Total price paid to the grower Fine Rise Rs.120
Medium rice Rs. 108
Coarse rice Rs. 115

In the Second Stage, at the Central storage point, they levy the following charges.

1 Service charges by mill owner Rs.10

2 Gunnybag Rs. 4.50

3 Administrative charges to the K.S.C. S.C. Rs.3

4 2 % towards establishment charges

5 Interest charge 12.35

In the third stage i.e., milling point' the following charges will be levid.

1 Milling charges Rs. 150

2 Sales tax 4%

Administrative and transportation charges Rs. 26-00

೫೦೧ ಕಿಲೋಮೀಟರ್ ಎಂದು ಲೆಕ್ಕ ಹಾಕುತ್ತಾರೆ. ಒಂದ ಲಾರಿ ೫೦೦ಕಿಲೋಮೀಟರ್ ಹೋಗುತ್ತದೆ, ಅಷ್ಟು ಡಿಸ್ಟೆನ್ಸ್ ಕವರ್ ಮಾಡುವುದಕ್ಕೆ ಎಷ್ಟು ಕಷ್ಟವಾಗುತ್ತದೆ. ಮಂಡ್ಯಾದಲ್ಲಿ ಪ್ರೊಕ್ಯೂರ್ ಮಾಡುತ್ತೀರಿ ಅದನ್ನು ಬೆಂಗಳೂರಿಗೆ ತಂದು ಇಲ್ಲಿ ಪ್ಯಾಡಿಯನ್ನು ಹಲ್ಲಿಂಗ್ ಮಾಡಿಸುವುದಿಲ್ಲ, ಅಲ್ಲೇ ಕೊಟ್ಟಿದ್ದರೆ ಕಡಿಮೆಯಾಗುತ್ತಾ ಇರಲಿಲ್ಲವೇ. ಎಕ್ಸ್ ಗೋಡೌನ್ ವ್ಯಾಲ್ಯು ಹೋಲ್‌ಸೇಲ್ ಪಾಯಿಂಟ್‌ನಲ್ಲಿ ಕೊಡಬೇಕಾದರೆ ಒಂದು ಕ್ವಿಂಟಾಲ್‌ಗೆ ಉತ್ತಮ ೨೪೭, ಮಧ್ಯಮ ೨೪೨ ಕೋರ್ಸ್ ೨೩೨ ರೂಪಾಯಿ ಆಗುತ್ತದೆ. ಮಾರ್ಜಿನ್ ಮೂರು ರೂಪಾಯಿ ಕೊಡಬೇಕಾಗುತ್ತದೆ ೫ನೇ ಸ್ಟೇಜ್‌ನಲ್ಲಿ ೨೫೦, ೨೪೫, ೨೩೫ ರೂಪಾಯಿ ಆಗುತ್ತದೆ. ಆರನೇ ಸ್ಟೇಜ್‌ನಲ್ಲಿ ಕನ್‌ಸ್ಯೂಮರ್ಸ್‌ಗೆ ಬರಬೇಕಾದರೆ ೫ ರೂಪಾಯಿ ಹೆಚ್ಚಿಗೆ ಕೊಡಬೇಕಾಗುತ್ತದೆ. ಅಂದರೆ ೫೫,೨೫೦,೨೪೦ ರೂಪಾಯಿ ಆಗುತ್ತದೆ. ಅಂದರೆ ೧೧೪ ಇರುವುದು ೨೫೫ ಆಗುತ್ತದೆ, ೧೧೨ ಇರುವುದು ೨೫೦ ಆಗುತ್ತದೆ. ೧೦೯ ಇರುವುದು ೨೪೦ ರೂಪಾಯಿ ಆಗುತ್ತದೆ ೧೧೪ ರಿಂದ ಪ್ರಾರಂಭವಾಗಿದ್ದು ಕನ್‌ಸ್ಯೂಮರ್‌ಗೆ ೨೫೫ ರೂಪಾಯಿ ಆಗುತ್ತದೆ, ಮಧ್ಯಮ ೧೧೨ ರಿಂದ ಪ್ರಾರಂಭವಾಗಿ ೨೫೦ ರೂಪಾಯಿ ಆಗುತ್ತದೆ, ಕೋರ್ಸ್ ೧೦೯ ರಿಂದ ಪ್ರಾರಂಭವಾಗಿ ೨೪೦ ರೂಪಾಯಿ ಆಗುತ್ತದೆ. ಇದು ಕನ್‌ಸೂಮರ್ಸ್‌ಗೆ ಬರ್ಡನ್ ಅಲ್ಲವೇ. ಈ ರೀತಿ ಏಕೆ ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದೀರಿ. ಟ್ರಾನ್ಸ್‌ಪೋಷನ್ ಸಿಕ್ಕಾಪಟ್ಟೆ ಕೊಡುತ್ತೀರಿ, ಇವರಿಗೆ ಕಮಿಷನ್ ಸಿಕ್ಕಾಪಟ್ಟೆ ಕೊಡುತ್ತೀರಿ, ರೇಟ್ ಆಫ್ ಇಂಟರೆಸ್ಟ್ ಸಿಕ್ಕಾಪಟ್ಟೆ ಹಾಕುತ್ತಿದ್ದೀರಿ. ಗವರ್ನ್‌ಮೆಂಟ್ ಇಂಡಿಯಾದಿಂದ ಸಬ್ಸಿಡಿ ತೆಗೆದುಕೊಳ್ಳುತ್ತೀರಿ. ಇಷ್ಟಾದರೂ ರೇಟು ಕಡಿಮೆಯಾಗಿಲ್ಲ.

ಇದರ ಜೊತೆಯಲ್ಲಿ ನಮ್ಮ ದುರಾದೃಷ್ಟವೇನೆಂದರೆ ಕರ್ನಾಟಕ ಸ್ಟೇಟ್ ಫುಡ್ ಕಾರ್ಪೊರೇಷನ್ನಿನ ಎಕ್ಸ್‌ಪೆಂಡಿಚರ್‌ನ್ನೆಲ್ಲಾ ನಮ್ಮ ತಲೆಯ ಮೇಲೆ ಹಾಕುತ್ತಿದ್ದೀರಿ. ಆಮೇಲೆ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ಏನು ಖರ್ಚಾಗುತ್ತದೆ ಅದನ್ನು ನಮ್ಮ ತಲೆಯ ಮೇಲೆ ಹಾಕುತ್ತಿದ್ದೀರಿ. ನಿಮಗೆ ಹಾಕ

ಬೇಕೆಂದಿದ್ದರೆ ಅಕ್ಕಿ ಒಂದರ ಮೇಲೆ ಏತಕ್ಕೆ ಹಾಕುತ್ತಿದ್ದೀರಿ? ಒಂದು ವೇಳೆ ಹಾಕಲೇಬೇಕು ಎಂದಿದ್ದರೆ ಬೇರೆ ವಸ್ತುಗಳ ವ್ಯಾಪಾರ ಮಾಡುತ್ತಿದ್ದೀರಲ್ಲಾ ಆ ವಸ್ತುಗಳ ಮೇಲೆ ಹಾಕಬಹುದಾಗಿತ್ತಲ್ಲಾ. ಇವತ್ತು ಅಕ್ಕಿ ಒಂದರ ಮೇಲೆ ಶೇಕಡಾ ೬೦,೭೦ರಷ್ಟು ಜಾಸ್ತಿಯಾಗಿರತಕ್ಕದ್ದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಆದುದರಿಂದ ಸರ್ಕಾರದವರು ಕಡಿಮೆ ಬೆಲೆಯನ್ನು ಒದಗಿಸತಕ್ಕಂಥ ನೀತಿ ಇದೆನೇ ಎಂದು ಕೇಳುತ್ತೇನೆ. ಇದರ ಜೊತೆಯಲ್ಲಿ ಕಾಸ್ಟ್ ಶೀಟ್ ಪ್ಯಾಡಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ರಾಗಿಗೆ ೯೫ರಿಂದ ೧೪೫ ರೂಪಾಯಿಗೆ ಮಾರುತ್ತಿದ್ದೀರಿ. ಅದೇ ರೀತಿ ಜವಾರ್ ೯೫ಕ್ಕೆ ತೆಗೆದುಕೊಂಡು ೧೪೦ ರೂಪಾಯಿಗಳಿಗೆ ಮಾರುತ್ತಿದ್ದೀರಿ. ಇವೆಲ್ಲಾ ಭಾರವನ್ನು ಬಳಕೆದಾರರ ಮೇಲೆ ಹಾಕುತ್ತಿದ್ದೀರಿ. ಕೋ-ಆಪರೇಟಿವ್ ಸೊಸೈಟಿಗಳು ಲಕ್ಷಾಂತರ ರೂಪಾಯಿಗಳನ್ನು ಕೊಡಬೇಕಾಗಿದೆ, ಶಾರ್ಟೇಜ್ ಹಾಗೆಯೇ ಇದೆ ಅದು ಎಲ್ಲಾ ಸೇರಿದರೆ ೬-೭ ಕೋಟಿ ಆಗುತ್ತದೆ ಅದಕ್ಕೆ ತಗಲತಕ್ಕ ಬ್ಯಾಂಕ್‌ನ ಇಂಟ್ರೆಸ್ಟನ್ನು ನಮ್ಮ ತಲೆಯ ಮೇಲೆ ಹಾಕುತ್ತಿದ್ದೀರಿ ಇದು ಯಾವ ನ್ಯಾಯ? ಇದು ಯಾವ ಸಾಮಾಜಿಕ ನ್ಯಾಯ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಇಷ್ಟೆ ಅಲ್ಲಾ ಸೆಲ್ಲಿಂಗ್ ಪ್ರೈಜನ್ನು ಇನ್‌ಕ್ಲೂಡ್ ಮಾಡುತ್ತಿದ್ದೀರಿ. ಸೆಲ್ಲಿಂಗ್ ಪ್ರೈಜ್‌ನಲ್ಲಿ ಈಗಾಗಲೇ ಹೇಳಿದ ಹಾಗೆ ಅಡ್ಮಿನಿಸ್ಟ್ರೇಟಿವ್ ಚಾರ್ಜಸ್ ಹಾಕಿದ್ದೀರಿ ಮತ್ತೆ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಹಾಕುತ್ತಿದ್ದೀರಿ. ಈ ಟ್ರಾನ್ಸ್‌ಪೋರ್ಟ್ ಚಾರ್ಜಸನ್ನು ಯಾವ ರೀತಿಯಲ್ಲಿ ಹಾಕುತ್ತಿದ್ದೀರಿ ಎಂದರೆ ನಮಗೆ ಒಂದು ಉದಾಹರಣೆ ಕೊಡುತ್ತೇನೆ ಯಾವ ರೀತಿಯಲ್ಲಿ ಮೋಸ ಮಾಡುತ್ತಿದ್ದೀರಿ ಎನ್ನುವುದಕ್ಕೆ. ಟ್ರಾನ್ಪೋರ್ಟ್ ಚಾರ್ಜಸ್ ಯೂಜ್ ಪರ್ ಕಾಲ್‌ಶೀಟ್, ಸೆಲ್ಲಿಂಗ್ ಪ್ರೈಜ್‌ನಲ್ಲಿ ಫಿಕ್ಸ್ ಮಾಡಿದ್ದಾರೆಂದರೆ ೧೯೭೬-೭೭ರಲ್ಲಿ ೧೧೨ ಲಕ್ಷ ರೂಪಾಯಿಗಳು ೧೯೭೭-೭೮ರಲ್ಲಿ ೮೬ ಲಕ್ಷ ರೂಪಾಯಿಗಳನ್ನು ಫಿಕ್ಸ್ ಮಾಡಿದ್ದಾರೆ. ಆಕ್ಚುಯಲ್ ಆಗಿ ಖರ್ಚು ಮಾಡಿರತಕ್ಕದ್ದು ೯೩ ಲಕ್ಷ ಮತ್ತು ೫೨ ಲಕ್ಷ ರೂಪಾಯಿಗಳು ಮಾತ್ರ. ಅಂದರೆ ಹೈಯೆಸ್ಟ್ ಪ್ರಾವಿಜನ್ ಮಾಡಿ ಏತಕ್ಕೆ ನಮ್ಮ ಬಳಕೆದಾರರ ತಲೆಯ ಮೇಲೆ ಭಾರವನ್ನು ಹಾಕಿದಿರಿ? ಆಕ್ಚುಯಲ್ ಖರ್ಚು ಆಗಿರುವಷ್ಟನ್ನು ಚಾರ್ಜ್ ಮಾಡದೇ ಜಾಸ್ತಿ ಚಾರ್ಜ್ ಮಾಡಿರುವುದು ಬಳಕೆದಾರರಿಗೆ ಮೋಸ ಮಾಡಿದ ಹಾಗಾಗುವುದಿಲ್ಲವೆ ಆದುದರಿಂದ ಈ ಗ್ಯಾಪನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದುದರಿಂದ ಕಾಸ್ಟ್‌ಶೀಟ್ ಏನಿದೆ ಬೆಲೆ ಫಿಕ್ಸ್ ಮಾಡುವಾಗ ಕಂಪ್ಲೀಟ್ ಆಗಿ ರಿವ್ಯೂ ಮಾಡಬೇಕು ಎಂದು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಇನ್ನೊಂದು ಚಾರ್ಜನ್ನು ಕಾಸ್ಟ್ ಶೀಟ್‌ನಲ್ಲಿ ಹಾಕುತ್ತಿದ್ದೀರಿ ಅದು ಮಿಸಲೇನಿಯಸ್ ಚಾರ್ಜನ್ನು ಸೇರಿಸುತ್ತಿದ್ದೀರಿ. ಅದು ಏನೆಂದರೆ ಇಂಟ್ರೆಸ್ಟ್ ಲಯಬಿಲಿಟಿ ೧೯೭೬-೭೭ರಲ್ಲಿ ನಿಮ್ಮ ಪ್ರಾವಿಜನ್ ೧೧೩ ಲಕ್ಷ ಪ್ರೊವೈಡ್ ಮಾಡಿದ್ದೀರಿ ಆಕ್ಚುಯಲ್ ಆಗಿರತಕ್ಕದ್ದು ೫೧ ಲಕ್ಷ, ೧೯೭೭-೭೮ರಲ್ಲಿ ೮೬ ಲಕ್ಷ ರೂಪಾಯಿಗಳಲ್ಲಿ ಪ್ರೊವೈಡ್ ಮಾಡಿದ್ದೀರಿ, ಅದರ ಖರ್ಚು ಆಗಿರತಕ್ಕದ್ದು ೬೮ ಲಕ್ಷ ರೂಪಾಯಿಗಳು. ಪ್ರಾವಿಜನ್ ಮಾಡಿರುವುದು ಅಷ್ಟು. ಖರ್ಚು ಮಾಡಿರುವುದು ಇಷ್ಟು. ಆದುದರಿಂದ ಎಷ್ಟು ನಿಜವಾಗಿ ಖರ್ಚು ಬೀಳುತ್ತದೆ ಎನ್ನುವುದನ್ನು ಕಾಸ್ಟ್ ಶೀಟ್‌ನಲ್ಲಿ ಲೆಕ್ಕ ತೆಗೆದುಕೊಂಡು ಸೆಲ್ಲಿಂಗ್ ಪ್ರೈಜಿನಲ್ಲಿ ಫಿಕ್ಸ್ ಮಾಡಬೇಕು ಇಲ್ಲದಿದ್ದರೆ ಅನ್ಯಾಯವಾಗಿ ಬಳಕೆದಾರರು ಮಿಸಲೇನಿಯಸ್ ಚಾರ್ಜಸ್, ಅಡ್ಮಿನಿಸ್ಟ್ರೇಟಿವ್ ಚಾರ್ಜಸ್ ಇನ್ನು ಮುಂತಾದ ಚಾರ್ಜಸ್‌ಗಳ ತಡೆಯಲಾರದ ಹೊರೆಯನ್ನು ಅವರ ತಲೆಯಮೇಲೆ ಹೊರಬೇಕಾಗುತ್ತದೆ. ಆದುದರಿಂದ ಆ ರೀತಿ ಹೆಚ್ಚಿನ ಹೊರೆಯನ್ನು ಬಳಕೆದಾರರ ಮೇಲೆ ಹಾಕಬಾರದೆಂದು ನಿಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನನ್ನು ಆದಷ್ಟು ಜಾಗ್ರತೆ ವೈಂಡ್ ಅಪ್ ಮಾಡುವುದು ಒಳ್ಳೆಯದು. ಇದು ಇಲ್ಲಿಯವರೆಗೆ ೧೩ ಕೋಟಿ ನಷ್ಟವನ್ನು ಹೊಂದಿದೆ. ಸರ್ಕಾರದ ಪರವಾಗಿ ನೇಮಕವಾದ ಡೈರೆಕ್ಟರ್‌ರವರಿಂದ ಇಷ್ಟೊಂದು ಲಾಸ್ ಆಗಿದೆ ಖಾಸಗಿ ಚೇರ್ಮನ್‌ರವರಿಂದ ಇಷ್ಟೊಂದು ಲಾಸ್ ಆಗಿಲ್ಲ. ಐ.ಎ.ಎಸ್. ಆಫೀಸರ್‌ರವರೊಬ್ಬರು ಅಲ್ಲಿದ್ದು ಸಾರ್ವಜನಿಕರ ಹಣ ಇಷ್ಟೊಂದು ಲಾಸ್ ಆಗಿದೆ ಅಪವ್ಯಯವಾಗುವುದಕ್ಕೆ ಬಿಟ್ಟಿದ್ದಾರೆಂದರೆ ಇದು ಅವರ ಒಂದು ಇನ್‌ಎಫಿಸಿಯೆನ್ಸಿ, ಕೇರ್‌ಲೆಸ್‌ನೆಸ್ ಮತ್ತು ನೆಗ್ಲಿಜೆನ್ಸಿಯನ್ನು ತೋರಿಸುತ್ತದೆ. ಇನ್ನು ಕೆ.ಎಸ್.ಎಫ್.ಸಿ.ಯ ಬಗ್ಗೆ ತಮಗೆ ಹೇಳುವುದಾದರೆ ೧೯೭೫-೭೬ರಲ್ಲಿ ಒಂದಿಷ್ಟು ಭತ್ತವನ್ನು ಕೊಂಡುಕೊಂಡರು, ಆ ಭತ್ತವನ್ನು ಕೊಂಡುಕೊಂಡವರು ಇಲ್ಲಿಯವರೆಗೂ ಮಾರಾಟ ಮಾಡಿಲ್ಲ. ಇದರಿಂದ ಸರ್ಕಾರದವರು ಆ ಕಾರ್ಪೊರೇಷನ್ನಿಗೆ ೪ ಕೋಟಿ ರೂಪಾಯಿಗಳನ್ನು ಅಡಿಷನಲ್ ಇಂಟ್ರೆಸ್ಟ್ ಚಾರ್ಜ್ ಎಂದು ಕೊಡಬೇಕಾಗಿ ಬಂದಿದೆ. ಕೊಂಡಿರುವ ಭತ್ತ ಅಲ್ಲಿಯೇ ಬಿದ್ದಿದೆ ಮಾರಾಟವಾಗಿಲ್ಲ. ಈ ರೀತಿಯಾಗಿ ಈ ಸಂಸ್ಥೆಯವರು ಕೆಲಸ

ಮಾಡುತ್ತಿದ್ದಾರೆ. ಇನ್ನು ಅಡ್ವಾನ್ಸ್ ಕೊಡುತ್ತಿದ್ದಾರೆ ಯಾರಿಗೆ ಈ ಪ್ರಕ್ಯೂರ್‌ಮೆಂಟ್ ಅಡ್ವಾನ್ಸನ್ನು ಕೊಟ್ಟಿದ್ದಾರೆಂದರೆ ಇದರಲ್ಲಿ ಸುಮಾರು ೨೫೦ರಷ್ಟು ರೈಸ್ ಮಿಲ್ಲರ್ಸ್‌ಗೆ ಕೊಟ್ಟಿದ್ದಾರೆ. ಅವರಿಂದ ಎರಡೂವರೆ ಲಕ್ಷ ರೂಪಾಯಿಗಳು ೧೯೫೯ನೇ ಇಸವಿಯಿಂದ ಸರ್ಕಾರಕ್ಕೆ ಬರಬೇಕಾಗಿದೆ. ಅವರಿಗೆ ಕೊಟ್ಟಿರುವಂಥ ಅಡ್ವಾನ್ಸ್ ಹಣ ಇನ್ನೂ ಬಂದಿಲ್ಲ. ಇದನ್ನು ರಿಕವರಿ ಮಾಡುವುದಕ್ಕೆ ಏನು ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಆದುದರಿಂದ ಈ ಕೇಸ್ ೨೦ ವರ್ಷದಿಂದ ಹಾಗೆಯೇ ಬಿದ್ದಿರುವುದರಿಂದ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಇನ್ನು ಸ್ಟಾಕ್ ಸರ್ಟಿಫಿಕೇಟ್ ಬಗ್ಗೆ ಹೇಳುವುದಾದರೆ ೩೯ ಲಕ್ಷ ರೂಪಾಯಿಗಳು ಕಳೆದ ೮–೯ ವರ್ಷಗಳಿಂದ ಬಂದಿಲ್ಲ. ಅದು ಪೆಂಡಿಂಗ್‌ನಲ್ಲಿದೆ. ಇನ್ನು ೬೨ ಲಕ್ಷ ರೂಪಾಯಿಗಳು ಅಡ್ಜಸ್ಟ್‌ಮೆಂಟ್ ಎಫ್.ಎಸ್.ಐ. ಯಿಂದ ಆಗಿಲ್ಲ ಇದನ್ನು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ನಿಂದ ಅಡ್ಜಸ್ಟ್‌ಮೆಂಟ್ ಆಗಬೇಕಾಗಿತ್ತು ಅದು ಹಾಗೆಯೇ ನಿಂತು ಹೋಗಿದೆ. ಸುಮಾರು ೯ ವರ್ಷಗಳಿಂದ ಸ್ಟಾಕ್ ವೆರಿಫಿಕೇಷನ್ ಎನ್ನತಕ್ಕದ್ದನ್ನು ಮಾಡಿಲ್ಲ. ಅದರಿಂದ ೧ ಕೋಟಿ ರೂಪಾಯಿಗಳು ಹಾಗೆಯೇ ಬಿದ್ದಿದೆ. ರೀಕನ್‌ಸಿಲಿಯೇಷನ್ ಆಗಿಲ್ಲ. ಇದರ ಬಗ್ಗೆ ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆ? ೨೪ ಲಕ್ಷ ಪ್ರೈವೇಟ್ ಪಾರ್ಟೀಸ್‌ನಿಂದ ಬರಬೇಕಾಗಿದೆ ಮತ್ತೆ ಹೀಗೆ ಇನ್ನು ಅನೇಕ ಕೇಸ್‌ಗಳಲ್ಲಿ ರೀಕನ್‌ಸಿಲಿಯೇಷನ್ ಆಗದೇ ಹಾಗೆಯೇ ಬಿದ್ದಿದೆ. ಇದೆಲ್ಲಾ ಯಾವಾಗ ಆಗುವುದು ಇದರ ಬಗ್ಗೆ ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ ಇದರಲ್ಲಿ ಆಗಿರತಕ್ಕ ಲಾಸನ್ನು ನೀವು ಬಳಕೆದಾರರ ತಲೆಯ ಮೇಲೆ ಹಾಕುತ್ತಿರುವುದು ಸರಿಯಲ್ಲ. ಇದರಲ್ಲಿ ಶಾರ್ಟೇಜ್ ಮತ್ತು ಅನ್‌ಯುಟಿಲೈಜ್ಡ್ ಮತ್ತು ಗೋಡೌನ್ ಶಾರ್ಟೇಜಸ್ ಮತ್ತು ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಎಲ್ಲಾ ಸೇರಿ ೨೭ ಲಕ್ಷ ರೂಪಾಯಿಗಳು ೧೯೭೦–೭೧ರಲ್ಲಿ ಆಗಿರತಕ್ಕದ್ದು. ಅದಾದ ನಂತರ ಅದರ ಲೆಕ್ಕಾಚಾರದ ಬಗ್ಗೆ ಅಂಕಿಅಂಶಗಳು ಇಲ್ಲ. ಅದನ್ನು ಹಾಗೆಯೇ ಪೆಂಡಿಂಗ್‌ನಲ್ಲಿಟ್ಟಿದ್ದಾರೆ. ಈ ಶಾರ್ಟೇಜಸ್ಸನ್ನು ರಿಕವರಿ ಮಾಡತಕ್ಕ ಸ್ಟ್ರಿಂಜೆಂಟ್ ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ.

ಉದಾಹರಣೆಗೆ ಹೇಳುವುದಾದರೆ, ೧೯೭೫–೭೬ರಲ್ಲಿ ನಿಮ್ಮ ಏಜೆಂಟರು (ಟಿಎಪಿಸಿಎಂಎಸ್. ನವರು) ೨೯.೬ ಲಕ್ಷ ಕ್ವಿಂಟಾಲ್ ಅಕ್ಕಿಯನ್ನು ಪ್ರೊಕ್ಯೂರ್ ಮಾಡಿದ್ದಾರೆ ಮತ್ತು ೧೬೬೧೯೭ ಕ್ವಿಂಟಾಲ್ ಅಕ್ಕಿ ಷಾರ್ಟೇಜ್ ಬಂದಿದೆ ಎಂದು ಲೆಕ್ಕ ಕೊಟ್ಟಿದ್ದಾರೆ ಅದರ ಬಗ್ಗೆ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಶಿವಮೊಗ್ಗ ಒಂದರಲ್ಲೇ ೩೦.೬ ಲಕ್ಷ ರೂಪಾಯಿನ ಅಕ್ಕಿ ಕಡಿಮೆ ಬಂದಿವೆ. ಒಟ್ಟು ನಮ್ಮ ರಾಜ್ಯದಲ್ಲಿ ಸುಮಾರು ೬ ಕೋಟಿ ರೂಪಾಯಿನ ಅಕ್ಕಿ ಕಡಿಮೆ ಬಂದಿದೆ. ಆ ೬ ಕೋಟಿ ರೂಪಾಯಿನ ಮೇಲೆ ಬಡ್ಡಿ ಹಾಕಿ ನಮ್ಮನ್ನು ನೆಲಸಮ ಮಾಡುವ ಕೆಲಸ ಮಾಡಿದ್ದೀರಿ. ಮಿಲ್ಲರ್ಸ್ ಏನಿದ್ದಾರೆ ಅವರು ಲೆವಿ ಪ್ಯಾಡಿಯನ್ನು ಸೆಲೆಕ್ಟ್ ಮಾಡಿ ಅಲ್ಲೇ ಇಟ್ಟುಕೊಳ್ಳುತ್ತಿದ್ದಾರೆ. ಅಗ್ರಿಮೆಂಟ್ ಪ್ರಕಾರ ನೀವು ಆರ್ಡರ್ ಕೊಟ್ಟಮೇಲೆ ರಿಲೀಸ್ ಮಾಡಬೇಕು. ಹಲವಾರು ಕೇಸುಗಳನ್ನು ರಿಲೀಸ್ ಮಾಡದೆ ಇರುವುದು ನಮ್ಮ ಗಮನಕ್ಕೆ ಬಂದಿದೆ. ಆ ರೀತಿ ರಿಲೀಸ್ ಮಾಡದೆ ಇಟ್ಟುಕೊಂಡಿರುವವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ. ಇದು ಒಂದು ರೀತಿಯ ನಷ್ಟ. ಇದು ನಮ್ಮ ತಲೆ ಮೇಲೆ ಬರುತ್ತದೆ. ಅವರು ಅಪ್ರೋಪ್ರಿಯೇಟ್ ಅಕೌಂಟಿನಲ್ಲಿ ತಂದು ಕೊಟ್ಟಿದ್ದಾರೆ. ಅವರು ಯಾವ ರೀತಿ ರಾಂಗ್ ಬಜೆಟಿಂಗ್ ಮಾಡುತ್ತಿದ್ದಾರೆಂಬುದನ್ನು ಗಮನಕ್ಕೆ ತರುತ್ತಿದ್ದೇನೆ. ೧೯೭೫–೭೬ರಲ್ಲಿ ೭೪ ಲಕ್ಷ ರೂಪಾಯಿಗಳಿಗೆ ಪ್ರಾವಿಷನ್ ಮಾಡಿದ್ದರೆ ಖರ್ಚಾಗಿರುವುದು ೩೮ ಲಕ್ಷ ರೂಪಾಯಿಗಳು ಮಾತ್ರ. ೧೯೭೭–೭೮ರಲ್ಲಿ ೭೮ ಲಕ್ಷ ರೂಪಾಯಿಗಳಿಗೆ ಪ್ರಾವಿಷನ್ ಮಾಡಿದ್ದರೆ ೧೯ ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ, ೧೯೭೮–೭೯ರಲ್ಲಿ ೫೨ ಲಕ್ಷ ರೂಪಾಯಿಗಳಿಗೆ ಪ್ರಾವಿಷನ್ ಮಾಡಿದ್ದರೆ ೨೪ ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. ಎಷ್ಟೊಂದು ಸೇವಿಂಗ್ಸ್ ಆಯಿತು, ನೋಡಿ. ಇದಕ್ಕೆಲ್ಲ ಪ್ರಾವಿಷನ್ ಮಾಡಿರುವ ಹಣಕ್ಕೆ ತಗಲುವ ಬಡ್ಡಿಯನ್ನು ನಮ್ಮ ತಲೆಮೇಲೆ ಹಾಕುತ್ತಿದ್ದೀರಿ. ಇದು ಏತಕ್ಕೆ ಹೀಗಾಗುತ್ತಿದೆ. ಹಣವನ್ನು ಉಪಯೋಗಿಸುವಲ್ಲಿ, ಇಟ್ಟ ಹಣವನ್ನು ಪೂರ್ತಿ ಉಪಯೋಗಿಸದೆ ಸೇವಿಂಗ್ಸ್ ಮಾಡುತ್ತಿದ್ದಾರೆ. ಇದಕ್ಕೆಲ್ಲ ಕಾರಣ ತಾವು ಲೆವಿ ಆರ್ಡರನ್ನು ಏನು ಕೊಡುತ್ತೀರಿ ಅದನ್ನು ಬಹಳ ತಡವಾಗಿ ಕೊಡುವುದೇ ಆಗಿದೆ. ಕಳೆದ ವರ್ಷ ಆರ್ಡರ್ ಕೊಟ್ಟದ್ದು ೧೯೮೧ರ ನವೆಂಬರ್ ತಿಂಗಳಿನಲ್ಲಿ. ಅಷ್ಟು ವೇಳೆಗೆ ಎಲ್ಲರೂ ಭತ್ತವನ್ನು ಮಾರಿರುತ್ತಾರೆ. ಸರ್ಕಾರೀ ಮೆಷಿನರಿ ಚಾಲೂವಾಗಿ ಲೆವಿ ತೆಗೆದುಕೊಳ್ಳಬೇಕು. ಬೆಂಬಲ ಬೆಲೆ ಕೊಡಬೇಕೆಂದಾಗ ಅಲ್ಲಿ ಭತ್ತ ಇದ್ದರೆ ತಾನೆ ಕೊಡುವುದು ? ಈ ರೀತಿಯಾಗಿ ತೊಂದರೆಯಾಗುತ್ತಿದೆ. ಇದು ಸರ್ಕಾರ ನಡೆದು ಬಂದಿರತಕ್ಕ ಹಾದಿ ಎಂದು ಹೇಳುತ್ತೇನೆ. ಲೆವಿ ಬಗ್ಗೆ ಹೇಳು

ವುದಾದರೆ, ಕರ್ನಾಟಕ ಭತ್ತ ಸಂಗ್ರಹಣಾ ಆದೇಶ ೧೯೮೧ ಎಂದು ಒಂದು ಆಜ್ಞೆಯನ್ನು ೧೯೮೧ನೇ ನವೆಂಬರ್‌ನಲ್ಲಿ ಹೊರಡಿಸಿದ್ದೀರಿ. ಅದರ ಪ್ರಕಾರ ಶೇಕಡ ೫೦ರಷ್ಟು ಅಕ್ಕಿ-ಭತ್ತ ಗಿರವಿದಾರರಿಂದ ವ್ಯಾಪಾರಸ್ಥರಿಗೆ ಸೇರಬೇಕೆಂದು ಮಾಡಿದ್ದೀರಿ. ಆದರೆ ಅದು ಯಾವ ರೀತಿ ಕಾರ್ಯರೂಪಕ್ಕೆ ಬಂದಿದೆ ಎಂಬುದು ತಾವು ಕೊಟ್ಟಿರತಕ್ಕ ಪುಸ್ತಕದಲ್ಲಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಅದರಲ್ಲಿ ೧೯೮೧-೮೨ನೇ ಸಾಲಿನ ಲೆವಿ ಸಂಗ್ರಹದ ಪ್ರಗತಿಯನ್ನು ತೋರಿಸುವ ವಿವರಣ ಪಟ್ಟಿ ಇದೆ. ತಾವು ಪ್ರತಿಯೊಂದು ಜಿಲ್ಲೆಯಲ್ಲಿ ಇಷ್ಟಿಷ್ಟು ಲೆವಿ ಭತ್ತವನ್ನು ಸಂಗ್ರಹ ಮಾಡಬೇಕೆಂದು ಆದೇಶ ಕೊಟ್ಟಿದ್ದೀರಿ. ಆ ಪ್ರಕಾರ ಬೆಂಗಳೂರು ಜಿಲ್ಲೆಯಲ್ಲಿ ೫ ಸಾವಿರ ಕ್ವಿಂಟಾಲ್, ಕೋಲಾರ ಜಿಲ್ಲೆಯಲ್ಲಿ ೫ ಸಾವಿರ ಕ್ವಿಂಟಾಲ್, ತುಮಕೂರು ಜಿಲ್ಲೆಯಲ್ಲಿ ೫ ಸಾವಿರ ಕ್ವಿಂಟಾಲ್ ಭತ್ತವನ್ನು ಸಂಗ್ರಹ ಮಾಡಬೇಕೆಂದು ಹೇಳಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿ ೬೧ ಸಾವಿರ ಕ್ವಿಂಟಾಲ್ ಭತ್ತವನ್ನು ಸಂಗ್ರಹಿಸಬೇಕೆಂದಿದ್ದರೆ ಅಲ್ಲಿ ಸಂಗ್ರಹವಾಗಿರುವುದು ೫೫೪೦ ಕ್ವಿಂಟಾಲ್ ಮಾತ್ರ. ಚಿತ್ರದುರ್ಗದಲ್ಲಿ ೧೨ ಸಾವಿರ ಕ್ವಿಂಟಾಲ್‌ಗೆ ೬ ಸಾವಿರ ಕ್ವಿಂಟಾಲ್ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦ ಸಾವಿರ ಕ್ವಿಂಟಾಲನ್ನು, ಉತ್ತರ ಕನ್ನಡ ಜಿಲ್ಲೆಯಲ್ಲಿ ೮ ಸಾವಿರ ಕ್ವಿಂಟಾಲ್ ಭತ್ತವನ್ನು ಸಂಗ್ರಹ ಮಾಡಬೇಕೆಂದು ಹೇಳಿದ್ದೀರಿ. ಒಟ್ಟು ೧೯೮೧-೮೨ನೇ ಸಾಲಿಗೆ ೨ ಲಕ್ಷದ ೮ ಸಾವಿರ ಟನ್ ಭತ್ತವನ್ನು ಸಂಗ್ರಹಿಸಬೇಕೆಂದು ಒಂದು ಗುರಿಯನ್ನು ಗೊತ್ತುಮಾಡಿದ್ದೀರಿ. ಅದರಲ್ಲಿ ಕೇವಲ ೯೫.೪೨೫ ಟನ್ ಮಾತ್ರ ಸಂಗ್ರಹವಾಗಿದೆ. ಸರ್ಕಾರಿ ಆಜ್ಞೆಗೆ ಎಷ್ಟು ಬೆಲೆ ಬರುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ; ಏತಕ್ಕೆ ಈ ರೀತಿ ಮೋಸವಾಗುತ್ತಿದೆ ? ನಮ್ಮ ರಾಜ್ಯದಲ್ಲಿ ೧-೧೧-೧೯೮೧ಕ್ಕೆ ೧೦ ಸಾವಿರ ರೈಸ್ ಮಿಲ್ಲುಗಳಿವೆ. ಇವುಗಳಲ್ಲಿ ೫೦ ಪರ್ಸೆಂಟ್ ಲೆವಿ ಕಲೆಕ್ಷನ್ ಮಾಡಬೇಕೆಂದು ಮಾಡಿದ್ದೀರಿ. ಮಿಲ್ಲಿಂಗ್ ಕೆಪಾಸಿಟಿ ೨೦ ಲಕ್ಷ ಟನ್ ಇದೆ. ಮಿಲ್ಲಿಗೆ ಭತ್ತ ಬಂದಾಗ ಅಂದರೆ ಮಿಲ್ ಮಾಡಿದಾಗ ಮಿಲ್ ಶೇಕಡ ೫೦ರಷ್ಟು ಲೆವಿ ಕೊಡಬೇಕು. ಮಿಲ್ಲಿಗೆ ಕ್ಯಪಾಸಿಟಿ ೨೦ ಲಕ್ಷ ಟನ್ ಭತ್ತ ಎಂದರೆ ೧೨ಲಕ್ಷ ಟನ್ ಅಕ್ಕಿ ಆಗುತ್ತದೆ. ಅದರಲ್ಲಿ ಶೇಕಡ ೫೦ರಷ್ಟು ಎಂದರೆ ೬ ಲಕ್ಷ ಟನ್ ಅಕ್ಕಿಯನ್ನು ಅಲ್ಲಿ ಇಡಬೇಕಾಗುತ್ತದೆ. ಇನ್ನೂ ಕಡಿಮೆ ಎಂದರೂ ೪ ಲಕ್ಷ ಟನ್ ಆನ್ನಾದರೂ ಇಡಬೇಕಾಗುತ್ತದೆ ಆ ೪ ಲಕ್ಷ ಟನ್ ಅಕ್ಕಿ ಎಲ್ಲಿಗೆ ಹೋಯಿತು ? ಲೆವಿ ಆರ್ಡರನ್ನು ವೈಯಲೇಟ್ ಮಾಡಿದರೆ ಕ್ರಮ ತೆಗೆದುಕೊಳ್ಳಬಹುದು. ಈಗ ಕೇವಲ ಒಂದು ಲಕ್ಷ ಟನ್ ಅಕ್ಕಿ ಸಂಗ್ರಹವಾಗಿದೆ ಎಂದರೆ ಉಳಿದ ೩ ಲಕ್ಷ ಟನ್ ಅಕ್ಕಿ ಎಲ್ಲ ಎಲ್ಲಿಗೆ ಹೋಯಿತು ? ಮಿಲ್ಲಿನಲ್ಲಿ ಅಕ್ಕಿ ಇಲ್ಲ ಅಂದರೆ ಅದು ಇವತ್ತು ಬ್ಲಾಕ್ ಮಾರ್ಕೆಟ್ ಆಗುತ್ತಿದೆ. ಇದಕ್ಕೆ ನೀವು ಅವಕಾಶ ಕೊಟ್ಟಿದ್ದೀರಿ. ಇದನ್ನು ನೋಡಿದರೆ, ಜಿಲ್ಲಾವಾರು ಕೋಟವನ್ನು ಗೊತ್ತು ಮಾಡಿದ್ದು ತಪ್ಪು ಅನ್ನಿಸುತ್ತದೆ, ಶಿವಮೊಗ್ಗದಲ್ಲಿ ೬೦ಲಕ್ಷ ಟನ್ನಿಗೆ ೫೫೪೦ ಟನ್ ಮಾತ್ರ ಸಂಗ್ರಹವಾಗಿದೆ, ಮಂಡ್ಯದಲ್ಲಿ ಹಳೇ ಮೈಸೂರು ಭಾಗದಲ್ಲಿ ೧೫ ಸಾವಿರ ಟನ್ನಿಗೆ ೬೦೦ ಟನ್ ಮಾತ್ರ ಬಂದಿದೆ ಈ ರೀತಿಯಾಗಿ ಜಿಲ್ಲಾವಾರು ಲೆವಿ ಸಂಗ್ರಹದ ಗುರಿಯನ್ನು ಗೊತ್ತುಮಾಡಿದ್ದರೂ ಸಹ ಸರಿಯಾಗಿ ಸಂಗ್ರಹ ಮಾಡಿಲ್ಲ. ಭತ್ತವೆಲ್ಲ ಮಿಲ್ಲಗೆ ಹೋಗಿ ಹಲ್ಲಿಂಗ್ ಆಗಿದೆ. ಆದರೆ ಅದು ಎಲ್ಲಿಗೆ ಹೋಯಿತು ಎಂಬುದು ಯಕ್ಷ ಪ್ರಶ್ನೆಯಾಗಿದೆ, ಅದು ಎಲ್ಲಿಗೆ ಹೋಗಿದೆ ಎಂದರೆ ನನಗೆ ತಿಳಿದ ಪ್ರಕಾರ ಸರ್ಕಾರ ಮಿಲ್ಲರ್ಸ್ ವ್ಯಾಪಾರಸ್ಥರು ಎಲ್ಲರೂ ಸೇರಿ ಬ್ಲಾಕ್ ಮಾರ್ಕೆಟ್ ಮಾಡಿ ಹಣ ಹಂಚಿಕೆ ಮಾಡಿಕೊಂಡಿದ್ದಾರೆ ಎಂಬುದು ತಿಳಿದುಬಂದಿದೆ. ಈಗಾಗಲೇ ಇದು ಚರ್ಚೆಯಾಗಿದೆ. ಇದರಿಂದ ಕೋಟ್ಯಾಂತರ ರೂಪಾಯಿ ಹಣ ಹೋಗಿದೆ. ಅದು ಸರ್ಕಾರಕ್ಕೂ ಬಂದಿದೆ. ನೀವು ಅದನ್ನು ತಂದು ಪಾರ್ಟಿ ಫಂಡಿನಲ್ಲಿ ಹಾಕಿದ್ದೀರೋ ಏನೋ ಗೊತ್ತಿಲ್ಲ. ಟ್ರೇಡರ್ಸ್-ಮಿಲ್ಲರ್ಸ್‌ಗೆ ಹೋಗಿದೆ. ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಅವರನ್ನೆಲ್ಲ ಒಳಗಡೆ ಹಾಕಬೇಕಾಗಿತ್ತು. ಆದರೆ ಅವರೆಲ್ಲ ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಇಲ್ಲಿ ಕಲೆಕ್ಟ್ ಮಾಡಿರುವುದು ಕೇವಲ ಒಂದು ಲಕ್ಷ ಟನ್. ಇಂಥ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅಂದರೆ ಹಗಲು ದರೋಡೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರೆಂದು ನಾನಾದರೂ ಹೇಳುತ್ತೇನೆ. ಮಿಲ್ಲರ್ಸ್ ಮತ್ತು ಟ್ರೇಡರ್ಸ್ ಎಲ್ಲ ಸೇರಿ ಹಗಲು ದರೋಡೆ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಭತ್ತದ ದೊಡ್ಡ ಲೂಟಿ ಆಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಆಗಿಲ್ಲ. ಇದರಲ್ಲಿ ತಮ್ಮ ಇಂಟರೆಸ್ಟ್ ಏನಿದೆಯೋ ಗೊತ್ತಿಲ್ಲ. ಸರ್ಕಾರ ಮನಸ್ಸು ಮಾಡಿದರೆ ತಡೆಗಟ್ಟಬಹುದು, ಆದರೆ ತಾವು ಮನಸ್ಸು ಮಾಡುತ್ತಿಲ್ಲ. ಇದಕ್ಕೆ ಕಾರಣವೇನು ? ಏನಾದರೂ ಸೂಚನೆಗಳು ಇರಬೇಕಲ್ಲವೆ ? ಇಲ್ಲದಿದ್ದರೆ ತಡೆಗಟ್ಟುತ್ತಿದ್ದಿರಿ. ಮಿಲ್ಲಿಂಗ್ ಪಾಯಿಂಟ್‌ನಲ್ಲಿ ೩ ಲಕ್ಷ ಟನ್ ಅಕ್ಕಿ ಏನು ಬಂದಿದೆ ಅದನ್ನು ಕಳ್ಳಸಂತೆಯಲ್ಲಿ ಮಾರುವುದಕ್ಕೆ ಅವಕಾಶ ಮಾಡಿಕೊಟ್ಟು ಎಲ್ಲ ಹಣವನ್ನು ಸಮಪಾಲು ಮಾಡಿಕೊಂಡಿರುವ ಆಪಾದನೆ ಮಾಡುತ್ತಿದ್ದೇನೆ.

ಅದೇ ರೀತಿ ೧೯೭೮-೭೯ರಲ್ಲೂ ಕೂಡ ಮಾಡಿದ್ದೀರಿ. ಭತ್ತದ ಟಾರ್ಜೆಟ್ ಎರಡೂವರೆ ಲಕ್ಷ ಟನ್ ಇಟ್ಟುಕೊಂಡಿದ್ದರೆ ವಸೂಲು ಮಾಡಿರುವುದು ಒಂದೂ ಕಾಲು ಲಕ್ಷ ಟನ್‌ಗಳು. ೧೯೮೦-೮೧ರಲ್ಲಿ ಮೂರು ಲಕ್ಷ ಟನ್ ಟಾರ್ಜೆಟ್ ಇದ್ದರೆ ವಸೂಲು ಮಾಡಿರುವುದು ಒಂದು ಲಕ್ಷ ಟನ್‌ಗಳು. ಅಂದರೆ ವ್ಯವಸ್ಥಾಬದ್ಧವಾಗಿ ಪ್ರತಿವರ್ಷವೂ ಅಲ್ಲಿ ಹಣ ಮಾಡತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರೆಂದರೆ ತಪ್ಪಾಗಲಾರದು. ತಮ್ಮ ಹತ್ತಿರ ಇರುವ ಅಕ್ಕಿ ಸಬ್-ಸ್ಟ್ಯಾಂಡರ್ಡ್ ಕ್ವಾಲಿಟಿಯಿಂದ ಕೂಡಿರತಕ್ಕದ್ದು. ಒಳ್ಳೆ ಅಕ್ಕಿ ಇಲ್ಲ. ಒಳ್ಳೆ ಗೋಧಿ ಇಲ್ಲ. ಅದೂ ೫೮ ಪರ್ಸೆಂಟ್ ಜಾಸ್ತಿ ಮಾಡಿ ಅದನ್ನು ಕೊಟ್ಟಿದ್ದೀರಿ. ಈ ಸಂಗ್ರಹಣೆಯಲ್ಲಿ ನಾನು ಆಗಲೇ ಹೇಳಿದಹಾಗೆ ಬಳಕೆದಾರರ ದೊಡ್ಡ ಶೋಷಣೆ ಆಗಿದೆ. ರೈತರ ಶೋಷಣೆಯಂತೂ ಮೊದಲೇ ಆಗಿದೆ. ವಿತರಣೆ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದ ಮಂತ್ರಿಗಳು ತಮಗೊಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ೩೦ನೇ ನವೆಂಬರ್ ೧೯೮೨ರಲ್ಲಿ ಅವರು "Supply of essential commodities in Bangalore was irregular" ಎಂಬ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಈ ವಿತರಣೆ ಒಂದು ದೊಡ್ಡ ಮೋಸದ ಜಾಲ ಆಗಿದೆ ಎಂದರೆ ತಪ್ಪಾಗುವುದಿಲ್ಲ. ನ್ಯಾಯ ಬೆಲೆ ಅಂಗಡಿಗಳ ಮೂಲಕ ಅವಶ್ಯಕ ವಸ್ತುಗಳನ್ನು ಹಂಚಿದ್ದೇವೆಂದು ಹೇಳಿದ್ದೀರಿ. ಅನೇಕ ಸಲ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ನ್ಯಾಯವೂ ಸಿಗುವುದಿಲ್ಲ, ಸರಿಯಾದ ಬೆಲೆಗೆ ಪದಾರ್ಥವೂ ಸಿಗುವುದಿಲ್ಲ ಎಂದು. ಅಲ್ಲಿ ಬ್ಲಾಕ್ ಮಾರ್ಕೆಟಿಂಗ್ ಸತತವಾಗಿ ನಡೆಯುತ್ತಿದೆ. ನ್ಯಾಯ ಬೆಲೆ ಅಂಗಡಿಗಳಿಗೆ ಕೋಟಾ ರಿಲೀಸ್ ಮಾಡಿದರೆ ಅದನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆ. ಅದರ ಜೊತೆಗೆ ತಾವು ಕೊಡತಕ್ಕ ಕೋಟಾ ಕೂಡ ಕಡಿಮೆಯಾಗಿದೆ. ಬೆಂಗಳೂರು ಜನ ಏನು ಪಾಪ ಮಾಡಿದ್ದಾರೋ ಗೊತ್ತಿಲ್ಲ. ೧೯೮೦-೮೧ರಲ್ಲಿ ಒಬ್ಬ ವ್ಯಕ್ತಿಗೆ ೬ ಕಿಲೋಗ್ರಾಂ ಅಕ್ಕಿ ಕೊಡುತ್ತಿದ್ದರೆ ಇವತ್ತು ೪ ಕೆ.ಜಿ. ಕೊಡುತ್ತಿದ್ದಾರೆ. ಮಂಗಳೂರಿನಲ್ಲಿ ೮ ಕಿಲೋ ಕೊಡುತ್ತಿದ್ದಾರೆ. ಸಕ್ಕರೆ ೫ ಕೆ.ಜಿ. ಇದ್ದುದನ್ನು ೪ ಕೆ. ಜಿ.ಗೆ ಇಳಿಸಿದ್ದಾರೆ. ಈ ರೀತಿ ಕಡಿಮೆ ಮಾಡಿರುವುದಕ್ಕೆ ಕಾರಣ ಏನು? ಬೆಂಗಳೂರು ಜನ ಏನು ಪಾಪ ಮಾಡಿದ್ದಾರೆ? ಬೇರೆ ಕಡೆಗಳಲ್ಲೂ ಇದೇರೀತಿ ಕಡಿಮೆ ಮಾಡಿದ್ದಾರೆ. ಗೋಧಿ ಪದಾರ್ಥಗಳು ಕೊಡುವುದನ್ನು ಕಡಿಮೆ ಮಾಡಿದ್ದಾರೆ. ಹೊರಗಡೆ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳತಕ್ಕ ಶಕ್ತಿ ನಮಗಿಲ್ಲದೇ ಇರುವುದರಿಂದ ಕನಿಷ್ಟ ನಾಲ್ಕು ಕಿಲೋ ಇರುವುದನ್ನು ೮ ಕಿಲೋ ಅಥವಾ ೧೦ ಕಿಲೋ ಮಾಡಬೇಕೆಂಬ ವಾದವನ್ನು ಇಟ್ಟಿದ್ದೇವೆ. ರೇಷನಿಂಗ್ ಪೂರ್ತಿ ಸರ್ಕಾರದವರೇ ವಹಿಸಿಕೊಂಡು ಎಲ್ಲಾ ಪದಾರ್ಥಗಳನ್ನೂ ಕಂಟ್ರೋಲ್ ರೇಟಿನಲ್ಲಿ ಕೊಡುವ ವ್ಯವಸ್ಥೆ ಮಾಡಿ. ಬೇರೆ ರಾಜ್ಯಗಳಲ್ಲಿ ಆ ರೀತಿ ಮಾಡಿದ್ದಾರೆ. ಕೇಂದ್ರ ಸರ್ಕಾರದೊಡನೆ ಹೋರಾಟ ಮಾಡಿ ತರತಕ್ಕ ಸಾಮರ್ಥ್ಯ ನಿಮಗೆ ಇದೆ. ಅದನ್ನು ನೀವು ಮಾಡಬೇಕು. ರೇಷನ್ ಕಾರ್ಡ್‌ಗಳನ್ನು ಎಲ್ಲಾ ಕಡೆ ಹಂಚಿದ್ದೀರಿ. ೫೭ ಲಕ್ಷ ರೇಷನ್ ಕಾರ್ಡ್‌ಗಳನ್ನು ಉಪಾಧ್ಯಾಯರ ಮುಖಾಂತರ ವಿತರಣೆ ಮಾಡಿದ್ದೀರಿ. ಆದರೆ ಇವತ್ತಿನವರೆಗೂ ಉಪಾಧ್ಯಾಯರಿಗೆ ಕೊಡತಕ್ಕ ಸಂಬಳ ಸಾರಿಗೆ ಕೊಟ್ಟಿಲ್ಲ. ರೇಷನ್ ಕಾರ್ಡ್ ವಿತರಣೆ ಮಾಡಿದಾಗ ಬೇಕಾದಷ್ಟು ಅವ್ಯವಹಾರಗಳು ನಡೆಯಿತು. ಆದರೆ ಆ ಅವ್ಯವಹಾರಗಳನ್ನು ಸರಿಪಡಿಸತಕ್ಕ ಪ್ರಯತ್ನವನ್ನು ಮಾಡಲಿಲ್ಲ. ಮೊದಲು ನಾಲ್ಕು ಲಕ್ಷ ಇದ್ದ ರೇಷನ್ ಕಾರ್ಡ್‌ಗಳ ಸಂಖ್ಯೆ ಈಗ ಆರೂವರೆ ಲಕ್ಷ ಆಗಿದೆ. ಆ ರೀತಿ ಏತಕ್ಕಾಯಿತೋ ಗೊತ್ತಿಲ್ಲ. ಆ ಬಗ್ಗೆ ವಿಚಾರಣೆ ಮಾಡಿಸಬೇಕು. ಒಂದು ವೇಳೆ ತಪ್ಪಾಗಿದ್ದರೆ ಹಿಂದೆ ಯಾವ ರೀತಿ ಕಾರ್ಡ್‌ಗಳನ್ನು ಸರೆಂಡರ್ ಮಾಡಿಸಿದಿರೋ ಅದೇ ರೀತಿ ಮಾಡಿಸಬೇಕು. ನ್ಯಾಯಬೆಲೆ ಅಂಗಡಿಗಳಿಗೆ ಆಗಾಗ ಹೋಗಿ ಅಲ್ಲಿನ ವ್ಯವಹಾರಗಳನ್ನು ಚೆಕ್ ಮಾಡುವ ಪದ್ಧತಿ ಇಟ್ಟುಕೊಳ್ಳಬೇಕು. ತಾವು ವಿತರಣೆಗೆ ಕೊಡುವ ವಸ್ತುಗಳು ಕಲಬೆರಕೆಯಾಗುತ್ತಿವೆ. ಪಾಮೋಲಿನ್ ಎಣ್ಣೆ ಬಗ್ಗೆ ಹೇಳಿದ್ದೀರಿ. ನಮಗೆ ೧,೩೫,೦೦೦ ಟನ್ ಎಣ್ಣೆ ಬೇಕಾಗಿದ್ದರೆ ನಮ್ಮಲ್ಲಿ ತಯಾರಾಗುತ್ತಿರತಕ್ಕದ್ದು ೧,೨೦,೦೦೦ ಟನ್‌ಗಳು. ತಿಂಗಳಿಗೆ ೫೦೦-೬೦೦ ಟನ್ ಎಣ್ಣೆ ಬರುತ್ತಿದೆ. ಹೆಚ್ಚಿಗೆ ಎಣ್ಣೆ ತರತಕ್ಕ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೋಲರ್ ಫ್ಲೋರ್ ಮಿಲ್ ಬಗ್ಗೆ ಹೇಳುವುದಾದರೆ ಕಳೆದ ವರ್ಷ ಒಂದು ದೊಡ್ಡ ಸ್ಕ್ಯಾಂಡಲ್ ಆಯಿತು. ನಾನು ಇಬ್ರಾಹಿಂ ಅವರ ಮೇಲೆ ಅಪಾದನೆ ಬಂತು. ಆ ಬಗ್ಗೆ ತನಿಖೆ ಮಾಡಿದ ಸಿ.ಒ.ಡಿ. ವರದಿ ಏನಾಯಿತು? ಈ ರೋಲರ್ ಫ್ಲೋರ್ ಮಿಲ್ ಅವರು ಬಿದೀಮರು. ಇವರೇ ಹೆಚ್ಚಾಗಿ ಬ್ಲಾಕ್‌ಮಾರ್ಕೆಟಿಂಗ್ ಮತ್ತು ಹೋರ್ಡಿಂಗ್ ಮಾಡುವವರು. ಇವರ ಮೇಲೆ ಸಾಕಷ್ಟು ಹತೋಟಿ ಇಟ್ಟುಕೊಳ್ಳಬೇಕು. ಕ್ಯಾಟಲ್ ಫೀಡ್ ಬೆಲೆ ಜಾಸ್ತಿಯಾದಾಗ ಬೆಲೆ ಏರಿಕೆ ತಡೆಗಟ್ಟುವುದಕ್ಕೆ ಒಂದು ಆರ್ಡರ್ ಮಾಡಿದಿರಿ. ಆದರೆ ನಂತರ ಸ್ವಲ್ಪ ದಿವಸದಲ್ಲೇ ಅದನ್ನು ವಾಪಸ್ ತೆಗೆದುಕೊಂಡಿರಿ. ಕಂಟ್ರೋಲ್ ಆರ್ಡರನ್ನು ವಾಪಸ್ ತೆಗೆದುಕೊಂಡಿಲ್ಲ. ಆದರೆ ಇದನ್ನು

ಮಾತ್ರ ಏತಕ್ಕೆ ತೆಗೆದುಕೊಂಡಿದ್ದೀರಿ? ಪಶು ಆಹಾರವನ್ನು ಯಾರು ಉತ್ಪಾದನೆ ಮಾಡುತ್ತಾರೋ ಅವರೆಲ್ಲಾ ಬಂದು ತಮ್ಮನ್ನು ನೋಡಿ ತಮಗೆ ಆಸೆ ಆಮಿಷಗಳನ್ನು ತೋರಿಸಿದ್ದರಿಂದ ಆ ಆರ್ಡರನ್ನು ವಾಪಸ್ ತೆಗೆದುಕೊಂಡಿದ್ದೀರಿ ಎಂಬ ಪ್ರತೀತಿ ಇದೆ. ಇವತ್ತು ತಮಗೆ ಗಟ್ಸ್ ಇದ್ದರೆ ಅದನ್ನು ಮತ್ತೆ ಜಾರಿಗೆ ತೆಗೆದುಕೊಂಡು ಬನ್ನಿ. ಜನಗಳಿಗಂತೂ ಇಲ್ಲ, ದನಗಳಿಗಾದರೂ ಆಹಾರ ಕೊಡಿ. ತಾವು (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು) ತಮ್ಮ ಅಧಿಕಾರಾವಧಿಯಲ್ಲಿ ಸಾಕಷ್ಟು ವೈಫಲ್ಯತೆಯನ್ನು ಕಂಡಿದ್ದೀರಿ. ಈ ಖಾತೆಯಲ್ಲಿ ತಾವಿದ್ದುಕೊಂಡು ಇಷ್ಟೆಲ್ಲಾ ವೈಫಲ್ಯವಾಗಿರುವಾಗ ತಾವು ಈ ಖಾತೆಯಲ್ಲಿ ಇರುವುದು ಸರಿಯಲ್ಲ, ಆದ್ದರಿಂದ ಈ ಖಾತೆಯನ್ನು ಬೇರೆಯವರಿಗೆ ಬಿಟ್ಟು ಕೊಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜಶೇಖರ್ (ಭದ್ರಾವತಿ).— ಮಾನ್ಯ ಅಧ್ಯಕ್ಷರೆ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಇಲಾಖೆ ಮುಖ್ಯವಾಗಿ ಆಹಾರ ಸಂಗ್ರಹಣೆ ವಿತರಣೆ ಮತ್ತು ಸರಬರಾಜು ಕಾರ್ಯವನ್ನು ನಿರ್ವಹಿಸುತ್ತಿದೆ. ಆಹಾರ ಸಂಗ್ರಹಣೆ ಕಾರ್ಯದಲ್ಲಿ ಸರ್ಕಾರ ಎಷ್ಟು ಆಸಕ್ತಿ ವಹಿಸಿದೆಯೋ ಅಷ್ಟೇ ಆಸಕ್ತಿಯನ್ನು ಬೆಳೆಯುವ ರೈತನ ಬಗ್ಗೆಯೂ ವಹಿಸಬೇಕೆಂದು ಹೇಳುತ್ತೇನೆ. ಬೆಳೆಯತಕ್ಕ ರೈತ ಹೊಲ ಗದ್ದೆಯಲ್ಲಿ ಯಾವ ರೀತಿ ಕಷ್ಟಪಟ್ಟು ಖರ್ಚು ಮಾಡಿ ಆಹಾರ ಧಾನ್ಯ ಬೆಳೆಯುತ್ತಾನೋ ಅದಕ್ಕೆ ಸರಿದೂಗುವಂತೆ ವೈಜ್ಞಾನಿಕವಾಗಿ ಧಾರಣೆಯನ್ನು ನಿಗದಿ ಮಾಡಿ ಸರ್ಕಾರ ಖರೀದಿ ಮಾಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಆ ರೀತಿ ನಡೆಯುತ್ತಿಲ್ಲ. ಮಧ್ಯವರ್ತಿಗಳಿಗೇ ಹೆಚ್ಚು ಲಾಭ ಹೋಗುತ್ತಿದೆ. ಇವತ್ತು ಸರ್ಕಾರ ವ್ಯಾಪಾರಸ್ಥ ಮತ್ತು ಗಿರಣಿ ಮಾಲೀಕನ ಮುಖೇನ ಸಂಗ್ರಹಣೆ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ ಅನೇಕ ಬಹಳ ಲೋಪದೋಷಗಳಾಗುತ್ತಿವೆ. ರೈತನಿಂದ ಬಹಳ ಕಡಿಮೆ ಬೆಲೆಗೆ ವ್ಯಾಪಾರಸ್ಥ ಅಥವಾ ಗಿರಣಿ ಮಾಲೀಕ ಖರೀದಿ ಮಾಡಿ ಕೆಲವು ಭಾಗವನ್ನು ಲೆವಿ ರೂಪದಲ್ಲಿ ಸರ್ಕಾರಕ್ಕೆ ಒದಗಿಸಿ ಉಳಿದ ಧಾನ್ಯವನ್ನು ಹೊರ ದೇಶಕ್ಕೆ ಪರವಾನಗಿ ಪಡೆದು ರವಾನೆ ಮಾಡಿ ಹೆಚ್ಚಿನ ಲಾಭ ಪಡೆಯುತ್ತಿದ್ದಾನೆ. ಇದರಿಂದ ರೈತರಿಗೂ ಲಾಭ ಇಲ್ಲ, ಸರ್ಕಾರಕ್ಕೂ ಪ್ರಯೋಜನವಾಗುತ್ತಿಲ್ಲ. ಹೆಚ್ಚಿನ ಲಾಭ ಮಧ್ಯವರ್ತಿಗಳ ಪಾಲಿಗೆ ಹೋಗುತ್ತಿದೆ. ಈಗಿನ ವ್ಯವಸ್ಥೆ ಈ ರೀತಿ ಇದೆ. ಉದಾಹರಣೆಗೆ ನನ್ನ ಜಿಲ್ಲೆಯಲ್ಲಿ ಕಳೆದ ಕಾರೀಫ್ ಬೆಳೆಯಲ್ಲಿ ಒಂದು ಘಟನೆ ನಡೆಯಿತು. ಈಗಾಗಲೇ ಇದು ಸರ್ಕಾರದ ಗಮನಕ್ಕೂ ಬಂದಿರಬಹುದು. ಬರದೇ ಇದ್ದರೆ, ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಶಿವಮೊಗ್ಗ ತಾಲ್ಲೂಕಿನಲ್ಲಿ ಹಾರ್ನಳ್ಳಿ ಅಂತ ಹೋಬಳಿ ಕೇಂದ್ರವೊಂದಿದೆ. ಅಲ್ಲಿನ ಸಹಕಾರ ಸಂಘದವರು ಸುಮಾರು ೩೦೦ ಕ್ವಿಂಟಾಲ್ ಭತ್ತ ಸಂಗ್ರಹಣೆ ಮಾಡಿದ್ದನ್ನು ಹೊರಗಡೆ ಕಳುಹಿಸಿದರು. ನಮಗೆ ಬಂದಿರುವ ವರದಿ ಪ್ರಕಾರ ಸುಮಾರು ಸಾವಿರಾರು ಕ್ವಿಂಟಾಲ್ ಭತ್ತವನ್ನು ಹೊರಗಡೆ ಕಳುಹಿಸಿದ್ದಾರೆ. ಗ್ರೈನ್ ವೋಚರ್ ಕೊಟ್ಟು, ನಿರ್ದೇಶಕರಿಗೆ ಮೋಸ ಮಾಡಿ, ಲಕ್ಷಾಂತರ ರೂಪಾಯಿಗಳ ಲಾಭ ಪಡೆದಿದ್ದಾರೆ. ಇದರಿಂದ ಸರ್ಕಾರಕ್ಕೂ ಅನುಕೂಲ ಇಲ್ಲ, ಆ ಕಡೆ ರೈತನಿಗೂ ಅನುಕೂಲವಾಗಿಲ್ಲ. ಹಲವಾರು ಸಹಕಾರ ಸಂಘಗಳಲ್ಲಿ ಇಂಥ ಘಟನೆ ನಡೆದಿವೆ. ಕೆಲವು ಸಹಕಾರ ಸಂಘಗಳು ನೇರವಾಗಿ ಖರೀದಿ ಮಾಡಿದಂತಹ ವ್ಯಾಪಾರಸ್ಥರ ಮತ್ತು ಮಿಲ್ ಮಾಲೀಕರ ಜೊತೆಯಲ್ಲಿ ಸಂದಾನ ಮಾಡಿಕೊಂಡು, ಬೋಗಸ್ ಗ್ರೈನ್ ವೋಚರ್ಸ್ ಪ್ರಿಂಟ್ ಮಾಡಿ, ಇಂಥ ಸೊಸೈಟಿಯವರು ಇಷ್ಟು ಕ್ವಿಂಟಾಲ್ ಭತ್ತವನ್ನು ಲೆವಿ ರೂಪದಲ್ಲಿ ಕೊಟ್ಟಿದ್ದಾರೆಂದು ಬರೆದು, ಫೋರ್ಜರಿ ಸೈನ್ ಹಾಕಿ, ಕಾರ್ಯದರ್ಶಿಗಳು ಇಲ್ಲದೆ, ಮೋಸದಿಂದ, ವಂಚನೆಯಿಂದ ರಹದಾರಿ ಪಡೆದು, ಸಾವಿರಾರು ಕ್ವಿಂಟಾಲ್ ಅಕ್ಕಿಯನ್ನು ಹೊರ ದೇಶಕ್ಕೆ ಕಳುಹಿಸಿದ್ದಾರೆ, ಇದರ ಬಗ್ಗೆ ಆಹಾರ ಇಲಾಖೆ ನಿರ್ದೇಶಕರ ಗಮನಕ್ಕೆ ತಂದಿದ್ದೇನೆ. ಸಿ. ಬಿ. ಐ.ನವರ ಗಮನಕ್ಕೂ ತಂದಿದ್ದೇನೆ, ಅದಕ್ಕೆ ಬೇಕಾದಂಥ ದಾಖಲೆಗಳು ನನ್ನ ಹತ್ತಿರ ಇವೆ. ಆಹಾರ ಸಂಗ್ರಹಣೆಯ ಪದ್ಧತಿಯಲ್ಲಿ ಸಾಕಷ್ಟು ದೋಷಗಳು ಇವೆ. ವ್ಯಾಪಾರಸ್ಥರಿಂದ ಮತ್ತು ಮಿಲ್ ಮಾಲೀಕರಿಂದ ಕೊಳ್ಳುವುದನ್ನು ಬಿಟ್ಟು ಸಹಕಾರ ಸಂಘಗಳು ನೇರವಾಗಿ ರೈತರಿಂದ ಕೊಂಡರೆ ಇದರಿಂದ ರೈತರಿಗೂ ಅನುಕೂಲ

† Inidcates that remarks or speechs have not been revised by the member concerned.

ವಾಗುತ್ತದೆ. ಸರ್ಕಾರಕ್ಕೂ ಅನುಕೂಲವಾಗುತ್ತದೆ. ರೈತನು ತಾನು ಬೆಳೆದಂಥ ಆಹಾರ ಪದಾರ್ಥಗಳಿಗೆ ನಿರ್ದಿಷ್ಟವಾದಂಥ ಬೆಲೆ ಸಿಗುವಂತಾದರೆ, ನೇರವಾಗಿ ತಾನೇ ತಂದು ಕೊಡುತ್ತೇನೆ. ಅವನು ನಷ್ಟವನ್ನು ಅನುಭವಿಸುವಂತ ಪದ್ಧತಿಯನ್ನು ಮೊದಲು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ವಿತರಣೆ ಪದ್ಧತಿಯಲ್ಲೂ ಕೂಡ ಸರಿಯಾದಂಥ ವ್ಯವಸ್ಥೆ ಇಲ್ಲ. ಆಯಾಯಾ ಸ್ಥಳದಲ್ಲಿಯೇ ಬೆಳೆದಂಥ ಪದಾರ್ಥಗಳನ್ನು ಆಯಾಯಾ ಸ್ಥಳದಲ್ಲಿಯೇ ವಿತರಣೆ ಮಾಡುವಂತ ವ್ಯವಸ್ಥೆಯನ್ನು ಮಾಡಿದರೆ, ಸಾಗಾಣಿಕೆ ವೆಚ್ಚವನ್ನು ಕಡಿಮೆ ಮಾಡುವುದಲ್ಲದೆ. ಜನಗಳಿಗೆ ಅನುಕೂಲ ಒದಗಿಸಿದಂತಾಗುತ್ತದೆ. ತುಂಗಭದ್ರ ಸಕ್ಕರೆ ಕಾರ್ಖಾನೆಯಲ್ಲಿ ತಯಾರಾದಂತ ಸಕ್ಕರೆಯನ್ನು ಶಿವಮೊಗ್ಗ ಜಿಲ್ಲೆಗೆ ಕೊಟ್ಟರೆ, ಆ ಭಾಗದ ಜನರಿಗೆ ಅನುಕೂಲವಾಗುವುದಲ್ಲದೆ, ಬೆಲೆಯು ಕೂಡ ಕಡಿಮೆಯಾಗುತ್ತದೆ. ಸಾಗಾಣಿಕೆ ದರವೂ ಕೂಡ ಕಡಿಮೆಯಾಗುತ್ತದೆ. ಶಿವಮೊಗ್ಗದಲ್ಲಿ ಉತ್ಪತ್ತಿಯಾದಂಥ ಸಕ್ಕರೆಯನ್ನು ಅಲ್ಲಿಂದ ೪೦೦ ಮೈಲಿಗಳ ದೂರ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದರಿಂದ, ಸಾಗಾಣಿಕೆ ದರ ಹೆಚ್ಚಾಗಿ ಗ್ರಾಹಕರು ಕೊಂಡುಕೊಳ್ಳುವ ಬೆಲೆಯೂ ಜಾಸ್ತಿಯಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅಕ್ಕಿಯನ್ನು ಕೂಡ ಲೆವಿ ರೂಪದಲ್ಲಿ ಸಂಗ್ರಹಣೆ ಮಾಡಿದ್ದಾರೆ. ಈ ವಿಷಯವನ್ನು ಕೂಡ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಗುಣಮಟ್ಟ ಇಲ್ಲದೇ ಇರತಕ್ಕ, ತೇವಾಂಶದಿಂದ ಕೂಡಿರತಕ್ಕ ಅಕ್ಕಿಯನ್ನು ಶೇಖರಣೆ ಮಾಡಿದ್ದಾರೆ. ಈಗ ಗೋಡೌನ್ ಬಾಗಿಲುಗಳನ್ನು ತೆಗೆಸಿನೋಡಿ, ತಿನ್ನಲಿಕ್ಕೂ ಬರದಂತ ಕೈಯಲ್ಲಿ ಒಡಿಯುವುದಕ್ಕೂ ಬಾರದಂಥ, ದುರ್ವಾಸನೆ ಬರತಕ್ಕಂಥ ಅಕ್ಕಿಯನ್ನು ಇಟ್ಟುಕೊಂಡಿದ್ದಾರೆ. ಇದಕ್ಕೆ ಯಾರು ಹೊಣೆ ? ಸರ್ಕಾರದ ಅಧಿಕಾರಿಗಳೇ ಹೊಣೆಗಾರರು ಎಂದು ನಾನು ಹೇಳುತ್ತೇನೆ. ನಿರ್ದಿಷ್ಟವಾದ ನಿಯಮ ಇದ್ದರೂ ಕೂಡ ಗುಣಮಟ್ಟವನ್ನು ಪರಿಗಣಿಸದೇ, ಉಪಯೋಗಿಸುವುದಕ್ಕೆ ಯೋಗ್ಯವಾಗಿಲ್ಲದೇ ಇರತಕ್ಕ ಅಕ್ಕಿಯನ್ನು ಶೇಖರಣೆ ಮಾಡಿದ್ದಾರೆ. ಸುಮಾರು ೧೨ ಸಾವಿರ ಟನ್‌ನಷ್ಟು ಆಹಾರವನ್ನು ಸಂಗ್ರಹಣೆ ಮಾಡಿದ್ದಾರೆ. ಇದರಲ್ಲಿ ೬ ಸಾವಿರ ಟನ್ ಕೂಡ ಯೋಗ್ಯವಾಗಿರತಕ್ಕ ಆಹಾರ ಸಿಗುತ್ತೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದರಿಂದ ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ನುಕ್ಸಾನು ಆಗಿದೆ. ಇದೇ ರೀತಿ ೬೦,೦೦೦ ಟನ್ ಅಕ್ಕಿಯನ್ನು ಸಂಗ್ರಹಿಸಿದ್ದು, ಇದೆಲ್ಲಾ ವ್ಯವಹಾರವೂ ಕೂಡ ಬೋಗಸ್ ವೋಚರ್‌ಗಳನ್ನು ಪ್ರಿಂಟ್ ಮಾಡಿಸಿಕೊಂಡು ಮಾಡಲಾಗಿದೆ. ಬೋಗಸ್ ವೋಚರ್‌ಗಳನ್ನು ಆಹಾರ ಇಲಾಖೆಯ ನಿರ್ದೇಶಕರಿಗೆ ಕೊಟ್ಟು, ರಹದಾರಿಯನ್ನು ಪಡೆದು ಮಾಡಿದ್ದಾರೆ. ಇವತ್ತು ಗೋಡೌನ್‌ನಲ್ಲಿ ಆಹಾರ ಇಲ್ಲ, ೧೨,೦೦೦ ಟನ್ ಭತ್ತ ಮಾತ್ರ ಲೆಕ್ಕಕ್ಕೆ ಸಿಕ್ಕಿದೆ. ಉಳಿದ ಆಹಾರ ಧಾನ್ಯ ಎಲ್ಲಿಗೆ ಹೋಯಿತು. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಆಹಾರ ಇಲಾಖೆಯ ಮಂತ್ರಿಯವರು ಸಮರ್ಥರಿದ್ದಾರೆ. ಅನುಭವ ಶಾಲಿಗಳಿದ್ದಾರೆ. ಇದು ಬಹಳ ಗಂಭೀರವಾದಂಥ ಪ್ರಶ್ನೆಯಾಗಿದೆ. ಸುಮಾರು ೧೫,೦೦೦ ಕ್ವಿಂಟಾಲ್ ಭತ್ತ ಬೋಗಸ್ ವೋಚರ್‌ಗಳಿಂದ ವಸೂಲಿ ಮಾಡಿದ್ದಾರೆ. ಇದರ ಬಗ್ಗೆ ಹೆಚ್ಚಿನ ಪ್ರಚಾರವಾಗಿದೆ- ಕೂಡಲೇ ಇದರ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರು ಮಿಲ್ ಮಾಲೀಕರಾಗಿರಲಿ ವ್ಯಾಪಾರಸ್ಥರಾಗಿರಲಿ, ಅವರು ಎಂಥ ಉನ್ನತ ಅಧಿಕಾರದಲ್ಲಿಯೇ ಇರಲಿ, ತಪ್ಪಿತಸ್ಥರನ್ನು ಕಂಡು ಹಿಡಿದು, ಉಗ್ರವಾದ ಶಿಕ್ಷೆ ವಿಧಿಸುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

4–30 P.M.

† ಶ್ರೀ ಹೆಚ್. ಗಂಗಾಧರನ್ (ಚಾಮರಾಜ).—ಸನ್ಮಾನ್ಯ ಸಭಾಧ್ಯಕ್ಷರೆ, ಜೀವನಾವಶ್ಯಕ ವಸ್ತುಗಳ ಸಂಗ್ರಹಣೆ ಮತ್ತು ವಿತರಣೆಯ ಪವಿತ್ರ ಕಾರ್ಯವನ್ನು ಹೊತ್ತಿರತಕ್ಕ ಈ ಇಲಾಖೆಯ ಮೇಲೆ ಮಾತನಾಡುತ್ತಾ ಈ ಕಾರ್ಯ ಪವಿತ್ರವಾದರೂ ನಡೆದಿರತಕ್ಕ ಕಾರ್ಯ ಮಾತ್ರ ಅಪವಿತ್ರ ಎಂಬುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಏಕೆಂದರೆ ನಾವು ನಿರೀಕ್ಷಿಸಿದಷ್ಟು ಕೆಲಸ ಸಾಧನೆ ಆಗಿಲ್ಲ. ಆದ್ದರಿಂದ ಜನತೆಗೆ ಏನು ಉಪಕಾರ ಆಗಬೇಕಾಗಿತ್ತೋ ಅದರಲ್ಲಿ ಕೊರತೆ ಆಗಿದೆ ಎಂಬುದನ್ನು ಕೆಲವು ನಿದರ್ಶನಗಳ ಮುಖಾಂತರ ಸಭೆಯ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮೂಲತಃ ಸಂಗ್ರಹಣೆ ಕಾರ್ಯದ ಬಗ್ಗೆ ಅನೇಕಸಾರಿ ಚರ್ಚೆ ಮಾಡಿದ್ದೇವೆ. ಲೆವಿ ಪದ್ಧತಿಯನ್ನು ತಾವು ಏನು ಜಾರಿಗೊಳಿಸಿದ್ದೀರಿ ಇದರಿಂದ ಗ್ರಾಹಕರಿಗೂ

ಅನುಕೂಲವಾಗಿಲ್ಲ, ಬೆಳೆಯುತಕ್ಕ ರೈತರಿಗೂ ತೊಂದರೆ ತಪ್ಪಿಲ್ಲ ಸಾಮಾನ್ಯವಾಗಿರತಕ್ಕ ವ್ಯಕ್ತಿ ತಾನು ತೆಗೆದುಕೊಂಡು ಹೋಗತಕ್ಕ ಭತ್ತದಿಂದಾಗಿ ಗಿರಣಿಗಳಲ್ಲಿ ಕೂಡ ಹಿಂಸೆಗೆ ಒಳಗಾಗತಕ್ಕ ಪರಿಸ್ಥಿತಿ ಬಂದಿದೆ. ಇದಕ್ಕೆ ತಾವು ಉತ್ತರ ಕೊಡುತ್ತಾ ಒಂದು ಮಾತನ್ನು ಹೇಳಿದಿರಿ. ಕೇಂದ್ರ ಸರ್ಕಾರದ ಆಜ್ಞೆಗನುಗುಣವಾಗಿ ನಾವು ನಡೆದುಕೊಳ್ಳಬೇಕಾಗುತ್ತದೆ ಎಂದು. ಕೇಂದ್ರ ಸರ್ಕಾರದ ಆಜ್ಞೆ ಇರತಕ್ಕದ್ದು ನಮ್ಮ ದೇಶಕ್ಕೆ ಸಾಗುವಷ್ಟು ಆಹಾರವನ್ನು ಸಂಗ್ರಹಿಸಬೇಕು, ರೈತನಿಗೆ ಪೋಷಕವಾಗುವಂಥ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಬೇಕೆಂದು ಇದೆಯೇ ಹೊರತು ನೀವು ಕೊಂಡುಕೊಳ್ಳತಕ್ಕ ರೀತಿನೀತಿಗಳನ್ನು ಕೇಂದ್ರ ಸರ್ಕಾರದವರು ಸೂಚಿಸುವುದಿಲ್ಲ. ಈ ದೃಷ್ಟಿಯಿಂದ ರೈತರಿಗೆ ಮತ್ತು ಗ್ರಾಹಕರಿಗೆ ಆಗಿರತಕ್ಕ ತೊಂದರೆಯನ್ನು ತಾವು ತಪ್ಪಿಸುವುದಕ್ಕೆ ಸಮಗ್ರ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ತಾವು ನಮಗೆ ಜೀವನಾವಶ್ಯಕ ವಸ್ತುಗಳ ಕಾನೂನಿನನ್ವಯ ಯಾವ ಯಾವ ವಸ್ತುಗಳ ಅವಶ್ಯಕತೆ ಇದೆ ಅವೆಲ್ಲವನ್ನೂ ಸರಬರಾಜು ಮಾಡತಕ್ಕ ಅಧಿಕಾರ ಈ ಇಲಾಖೆಗೆ ಇದೆಯೆಂದು ನಾನು ತಿಳಿದುಕೊಂಡಿದ್ದೆ. ಇತ್ತೀಚೆಗೆ ನಡೆದಿರುವುದನ್ನು ನೋಡಿದರೆ ಇದು ಒಂದು ದುಃಖದ ಸಂಗತಿಯಾಗಿದೆ. ಎಸೆನ್ಷಿಯಲ್ ಕಮಾಡಿಟೀಸ್ ಆ್ಯಕ್ಟ್ ಪ್ರಕಾರ ನಿಮ್ಮ ಇಲಾಖೆಯಲ್ಲಿ ವಿತರಣೆಗೆ ಮತ್ತು ಸಂಗ್ರಹಣೆಗೆ ಒಳಗಾಗಬೇಕಾದಂಥ ಅಂಶಗಳು ಯಾವುದು ಎಂದರೆ Food staffs, cattle fodder, cotton, wollen textiles, rot cotton, cotton seed, Petroleum and petroleum products, spnre parts of mechanical propeller vehicles· coal, irou and steel, mica... etc. ಇಲ್ಲಿರತಕ್ಕದ್ದು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಅಂತ ಇದೆ. ನೀವು ಇಲ್ಲಿ ಕಾರ್ಯಕ್ರಮ ನಡೆಸುವುದನ್ನು ನೋಡಿದರೆ ಕೆಲವೇ ಕೆಲವು ವಿಚಾರಗಳನ್ನು ಮಾತ್ರ ಮಾಡುತ್ತಿದ್ದೀರಿ. ಇದರಲ್ಲಿ ಸಿಮೆಂಟ್, ಸ್ಟೀಲ್, ಕಾಟನ್, ಇವೆಲ್ಲಾ ಇವೆಲ್ಲಾ ಇವೆ. ಜೀವನಾಶ್ಯಕ ವಸ್ತುಗಳಾದರೂ ಕೂಡ ಏತಕ್ಕೆ ಇದರಲ್ಲಿ ಸೇರಿಲ್ಲ ? ತಾವು ಉತ್ತರ ಕೊಡುತ್ತೀರಿ, ಲಾಭ ಬಂದರೆ ನಮಗಿರಲಿ ನಷ್ಟವಾದರೆ ನಿಮಗಿರಲಿ ಎಂದುಕೊಂಡು ಇದನ್ನು ಬೇರೆ ಯಾವುದಾದರೂ ಇಲಾಖೆಗೆ ಸೇರಿಸಿದ್ದೀರಾ ? ಅಥವಾ ಸಿಮೆಂಟ್, ಸ್ಟೀಲ್, ಕಾಟನ್, ಇವೆಲ್ಲಾ ಕ್ರಿಮಿನಲ್ ಸಪ್ಲೈ ಅಂತ ಏನಾದರೂ ಮಾಡಿದ್ದೀರಾ? ಎಂದು ನಾನು ತಮ್ಮನ್ನು ಕೇಳಬೇಕಾಗಿದೆ. ಇಂಥ ಜೀವನಾವಶ್ಯಕ ವಸ್ತುಗಳಮೇಲೆ ತಮಗೆ ಅಧಿಕಾರ ಇಲ್ಲದಿರುವುದು ಒಂದು ವಿಷಾದಕರವಾದ ಸಂಗತಿ. ಇದರಲ್ಲಿ ಏನೋ ನಡೆದಿರಬಹುದು ಎಂಬ ಅನುಮಾನಕ್ಕೆ ಕಾರಣವಾಗಿದೆ. ಇದನ್ನು ನಾನು ಹೆಚ್ಚು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ತಮಗಿರತಕ್ಕ ಅಧಿಕಾರದ ವ್ಯಾಪ್ತಿಯಲ್ಲಿ ದನಗಳ ಮೇವಿನ ಬಗ್ಗೆ ಒಂದು ವಿಪರೀತ ನಡೆಯುತ್ತಿದೆ. ದನಗಳಿಗೆ ಹಾಕುವ ನೆಲ್ಲುಹುಲ್ಲು ಈ ರಾಜ್ಯದಲ್ಲಿ ೧೨ ತಿಂಗಳ ಕಾಲವೂ ಮೇವು ಆಗಬೇಕಾಗಿತ್ತು. ಆದರೆ ನಮ್ಮಲ್ಲಿರತಕ್ಕ ಕಾಗದದ ಕಾರ್ಖಾನೆಗಳು ಈ ಹುಲ್ಲನ್ನು ಒಂದಕ್ಕೆರಡರಷ್ಟು ದುಡ್ಡು ಕೊಟ್ಟು ಕೊಂಡುಕೊಳ್ಳುತ್ತಿರುವುದರಿಂದಾಗಿ ದನಗಳಿಗೆ ಹುಲ್ಲು ಸಿಕ್ಕುವುದು ಕಷ್ಟವಾಗಿದೆ. ಇದರ ಒಂದು ಕರಾರನ್ನು ಮಾಡಿಕೊಂಡು ಈ ಕಾರ್ಖಾನೆಗಳಿಗೆ ಎಷ್ಟು ಬೇಕೋ ಅಷ್ಟನ್ನು ಕೊಟ್ಟು ಉಳಿದುದನ್ನು ರೈತರಿಗೆ ಸಿಕ್ಕುವಂತೆ ಮಾಡಬೇಕು. ವಿತರಣೆಯ ಬಗ್ಗೆ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳುವ ಸಲುವಾಗಿ ಕೆಲವು ಸಂಸ್ಥೆಗಳನ್ನು ಮಾಡಿದೆ. ಅವುಗಳ ಪೈಕಿ ಸಿವಿಲ್ ಸಪ್ಲೈಸ್ ವಿಂಗ್ ಎಂದು ಒಂದು ವಿಭಾಗ ಇದೆ. ಇದನ್ನು ತಾವು ಏತಕ್ಕೆ ಮಾಡಿದ್ದೀರೋ ಗೊತ್ತಿಲ್ಲ. ಇದಕ್ಕೆ ಸುಮಾರು ಒಂದೂವರೆ ಕೋಟಿ ರೂ. ಖರ್ಚು ಮಾಡುತ್ತಿದ್ದೀರಿ. ಡೆಪ್ಯುಟಿ ಕಮಿಷನರ್‌ರವರಿಂದ ಹಿಡಿದು ರೆವಿನ್ಯೂ ಇನ್‌ಸ್ಪೆಕ್ಟರ್‌ರವರೆಗೆ ಎಲ್ಲರೂ ಅಧೀನದಲ್ಲೇ ಇದ್ದಾರೆ. ಇವರುಗಳ ಮುಖಾಂತರ ಅಲ್ಲಿ ನಡೆಯುತಕ್ಕ ಅನ್ಯಾಯ, ಭ್ರಷ್ಟಾಚಾರ, ಮುಂತಾದುವನ್ನು ನಿಲ್ಲಿಸಬಹುದು. ಆದರೆ ಇವತ್ತು ಅಲ್ಲಿ ಆಗುತ್ತಿರತಕ್ಕ ಕಲಬೆರಕೆ ನಿಂತಿಲ್ಲ. ಗ್ರಾಹಕರಿಗೆ ಅಳತೆಯಲ್ಲಿ ಅನ್ಯಾಯ ಆಗುವುದು ನಿಂತಿಲ್ಲ. ಗ್ರಾಹಕರಿಗೆ ಅನುಪಯುಕ್ತ ವಸ್ತುಗಳು ಸಿಕ್ಕುವುದು ತಪ್ಪಿಲ್ಲ. ಜನತಾ ಬಜಾರ್‌ಗಳಲ್ಲಿ ಉಪಯೋಗಿಸಲು ಅಯೋಗ್ಯವಾದ ಅಕ್ಕಿಯನ್ನು ಸರಬರಾಜು ಮಾಡುತ್ತಿದ್ದಾರೆ. ಇದನ್ನೆಲ್ಲಾ ತಪ್ಪಿಸಲು ನೀವು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಹಾಗಾದರೆ ನೀವು ಒಂದೂವರೆ ಕೋಟಿ ರೂ. ಖರ್ಚು ಮಾಡುತ್ತಿರುವ ಈ ಸಿವಿಲ್ ಸಪ್ಲೈಸ್ ವಿಂಗ್‌ನ್ನು ಏತಕ್ಕೆ ಇಟ್ಟುಕೊಂಡಿದ್ದೀರೆಂದು ನಾವು ಕೇಳಬೇಕಾಗುತ್ತದೆ. ಇಂಥ ನಿರುಪಯುಕ್ತ ಇಲಾಖೆಯನ್ನು ತಾವು ಸೃಷ್ಟಿ ಮಾಡಿಕೊಂಡಿದ್ದೀರಿ. ಇದು ಸರಿಯಾಗಿ ಕೆಲಸ ಮಾಡದೇ ಇರುವುದು ನಿಜವಾಗಿಯೂ ನಾಚಿಕೆಗೇಡು. ೧೯೮೧ನೇ ಇಸವಿಯಲ್ಲಿ ನಿಮ್ಮ ಆಡಿಟರ್ ವರದಿಯ ಪ್ರಕಾರ ಔಟ್ ಸ್ಟ್ಯಾಂಡಿಂಗ್ ೪೧೮೧.೫೩ ಲಕ್ಷ ರೂ. ಇದೆ. ೧೯೭೫-೭೬ನೇ ಇಸವಿಯಲ್ಲಿ ನಡೆದ ಘಟನೆಗೆ ಸಂಬಂಧ

ಪಟ್ಟಂತೆ ೩೮೮೭.೪೩ ಲಕ್ಷ ರೂ. ಗಳಿಗೆ ಸಂಬಂಧಪಟ್ಟಂತೆ ವೌಚರ್‌ಗಳು ನಿಮ್ಮ ಇಲಾಖೆಯಲ್ಲಿ ಸಿಕ್ಕಿಲ್ಲ. ಇದರ ಜೊತೆಗೆ ನಿಮ್ಮ ಸಿವಿಲ್ ಸಪ್ಲೈಸ್ ವಿಂಗ್ ಇದ್ದರೂ ಕೂಡ ೧೯೬೯ನೇ ಸಾಲಿನಿಂದ ೧೯೭೬ರವರೆಗಿನ ಇನ್‌ಸ್ಪೆಕ್ಷನ್ ರಿಪೋರ್ಟ್‌ನಲ್ಲಿ ೨೩೦೬೮ ಪ್ಯಾರಾಗ್ರಾಫ್‌ಗಳ ಆಡಿಟ್ ವರದಿ ಇದೆ. ಇವಕ್ಕೆ ಓಚರ್ಸ್ ಇಲ್ಲ. ಲೆಕ್ಕ ಇಲ್ಲ. ಇದು ಸಿಕ್ಕಂಥ ಪರಿಸ್ಥಿತಿ ಕೂಡ ಕಂಡುಬರುತ್ತಿಲ್ಲ. ಇದರಿಂದಾಗಿ ನಿಮ್ಮ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಬಹಳ ಸುಲಭವಾಗಿ ತಿಳಿದುಕೊಳ್ಳಬಹುದು.

ಇನ್ನು ತಮ್ಮಲ್ಲಿ ಸಂಗ್ರಹ ಮಾಡುವ ಉದ್ದೇಶದ ಪ್ರಕಾರ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರದ ನಿಯಮಗಳ ಪ್ರಕಾರ ಕರ್ನಾಟಕ ಫುಡ್ ಕಾರ್ಪೊರೇಷನ್ ಎಂದು ಮಾಡಿದ್ದೀರಿ. ಇದಕ್ಕೆ ಸುಮಾರು ೩ ಕೋಟಿ ರೂ. ಬಂಡವಾಳ ಹಾಕಿ ೧೯೭೩ ರಲ್ಲಿ ಪ್ರಾರಂಭ ಮಾಡಿದ್ದೀರಿ. ಆದರೆ ಇವತ್ತಿನ ವರೆಗೂ ಈ ಕಾರ್ಪೊರೇಷನ್‌ನ ಜನರಲ್ ಬಾಡಿ ಮೀಟಿಂಗ್ ಆಗಿಲ್ಲ. ೧೯೭೮-೭೯ ರಿಂದ ೧೯೮೧-೮೨ರ ವರೆಗೆ ಅಕೌಂಟೆಂಟ್ ಜನರಲ್‌ರವರಿಗೆ ಅಕೌಂಟ್ಸ್‌ನ್ನು ಕೊಟ್ಟಿಲ್ಲ. ಇವರ ಡಿಜೆಂಟ್ಸ್ ಎಷ್ಟು ? ಸಬ್ ಏಜೆಂಟ್ಸ್ ಎಷ್ಟು ? ಇವರು ಎಷ್ಟು ಹಣವನ್ನು ಕೊಟ್ಟಿದ್ದಾರೆ ? ಎಷ್ಟು ಹಣ ವಸೂಲಾಗಿದೆ ಎಂಬ ಬಗ್ಗೆ ಯಾವುದೇ ಲೆಕ್ಕ ಇಲ್ಲ. ಇದನ್ನೆಲ್ಲಾ ನೋಡಿದರೆ ಈ ಫುಡ್ ಕಾರ್ಪೊರೇಷನ್ ಏನಿದೆ ಇದು ನಿಮ್ಮ ಸರ್ಕಾರಕ್ಕಿಂತ ಹೆಚ್ಚು ಎತ್ತರದಲ್ಲಿದೆ ಎಂದು ಅನಿಸುತ್ತದೆ. ಆಡಿಟರ್ ಜನರಲ್‌ರವರಿಂದ ನೋಟೀಸ್ ಹೋದರೆ ಅದಕ್ಕೆ ಯಾವ ಬೆಲೆಯನ್ನೂ ಅವರು ಕೊಡುತ್ತಿಲ್ಲ. ನಿಮ್ಮಿಂದ ಏನಾದರೂ ಕಾಗದಪತ್ರಗಳು ಹೋದರೆ ಅದಕ್ಕೆ ಜವಾಬು ಬರುವುದಿಲ್ಲ. ಇದೆಲ್ಲವನ್ನೂ ನೋಡಿದರೆ ಈ ಕಾರ್ಪೊರೇಷನ್ ಏತಕ್ಕೆ ಇದೆಯೆಂದು ನಮಗೆ ಅರ್ಥವಾಗುತ್ತಿಲ್ಲ. ಸಾರ್ವಜನಿಕರಿಗೆ ಉಪಕಾರ ಮಾಡುವುದಕ್ಕೋಸ್ಕರ ಇಷ್ಟೊಂದು ಹಣವನ್ನು ನೀವು ಹಾಕಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಮಲೆನಾಡು ಟ್ರೇಡರ್ಸ್, ಸಿದ್ಧೇಶ್ವರ ರೈಸ್ ಮಿಲ್ಸ್, ರುದ್ರಾನಿರೈಸ್‌ಮಿಲ್, ಶಂಕರ್ ರೈಸ್‌ಮಿಲ್ ಇದಕ್ಕೆ ನೀವು ಕೊಟ್ಟಿರತಕ್ಕ ಭತ್ತದಲ್ಲಿ ಸುಮಾರು ೫೫೦೦ ಟನ್ ಷಾರ್ಟೇಜ್ ಬಂದಿದೆ. ಇದು ಏನಾಗಿದೆ. ಎನ್ನುವ ಬಗ್ಗೆ ಅವರು ನಿಮಗೆ ಲೆಕ್ಕವನ್ನೇ ಕೊಟ್ಟಿಲ್ಲ. ಈ ದೇಶದಲ್ಲಿ ನೂರಕ್ಕೆ ೬೦ ರಷ್ಟು ಜನರಿಗೆ ಅಕ್ಕಿ ಕೊಳ್ಳುವ ಚೈತನ್ಯ ಇಲ್ಲ. ಕೊಳ್ಳುವ ಚೈತನ್ಯ ಇದ್ದರೂ ಕಡಿಮೆ ಬೆಲೆಗೆ ಸಿಕ್ಕುತ್ತಿಲ್ಲ. ಈ ೪ ಮಿಲ್‌ಗಳಿಂದ ೫೫೦೦ ಟನ್ ಭತ್ತ ಕಾಣೆಯಾಗಿದೆ ಎಂದು ತಿಳಿದುಬಂದಮೇಲೆ ನಾವು ಏನು ಕ್ರಮವನ್ನು ಇವರಮೇಲೆ ತೆಗೆದುಕೊಂಡಿದ್ದೀರಿ ? ನಿಮ್ಮ ಸಿವಿಲ್ ಸಪ್ಲೈಸ್ ವಿಂಗ್ ಇರುವುದಾದರೂ ಏತಕ್ಕೆ ? ಇನ್ನೊಂದು ಬಹಳ ಪ್ರಮುಖವಾದ ವಿಚಾರ ಎಂದರೆ ೧೯೭೩-೭೪ ರಿಂದ ೭೭-೭೮ ರವರೆಗೆ ೧,೭೭,೫೯೭ ಕ್ವಿಂಟಾಲ್ ಧಾನ್ಯ ಫುಡ್ ಕಾರ್ಪೊರೇಷನ್‌ನಲ್ಲಿ ಷಾರ್ಟೇಜ್ ಇದೆಯೆಂದು ಕಂಡುಬರುತ್ತಿದೆ. ಇದು ಹೇಗೆ ಆಯಿತು ? ೨೯೯.೩೯ ಲಕ್ಷ ರೂ. ಬೆಲೆಬಾಳುವ ದವಸಧಾನ್ಯ ಇವತ್ತು ಫುಡ್ ಕಾರ್ಪೊರೇಷನ್ ನಿಮ್ಮ ಅಧಿಕಾರಿಗಳ ಅಧೀನದಲ್ಲಿದೆಯೋ, ಇಲ್ಲವೋ ? ಎಂಬ ಅನುಮಾನ ಬರುತ್ತದೆ. ಸಾರ್ವಜನಿಕರಿಗೋಸ್ಕರ ಆಹಾರಧಾನ್ಯಗಳನ್ನು ಸರಬರಾಜು ಮಾಡುವುದಕ್ಕೋಸ್ಕರ ಇರತಕ್ಕ ಈ ಫುಡ್ ಕಾರ್ಪೊರೇಷನ್‌ನವರೇ ಲಕ್ಷಾಂತರ, ಕೋಟ್ಯಾಂತರ ರೂ. ಗಳನ್ನು ತಿಂದು ತೇಗುತ್ತಿದ್ದಾರೆ ಎಂದರೆ ನಿಮ್ಮ ಇಲಾಖೆ ಯಾವರೀತಿ ಕೆಲಸ ಮಾಡುತ್ತಿದೆ, ಜನರ ಯೋಗಕ್ಷೇಮವನ್ನು ಯಾವರೀತಿ ನೋಡಿಕೊಳ್ಳುತ್ತಿದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಇಂಥ ಅವ್ಯವಹಾರಗಳನ್ನು ಮಾಡತಕ್ಕ ಕಾರ್ಪೊರೇಷನ್‌ಗಳನ್ನು ತನಿಖೆಗೆ ಒಳಪಡಿಸುವ ಕಾನೂನು ಇದೆಯೊ ಇಲ್ಲವೋ ? ಗೊತ್ತಿಲ್ಲ. ನಿಮ್ಮ ಕಾರ್ಪೊರೇಷನ್‌ನವರು ಲೆಕ್ಕ ಕೊಟ್ಟು ೩ ವರ್ಷವಾಗಿದೆ. ಅಂದರೆ ೭೫-೭೬ ರಿಂದ ಈಚೆಗೆ ಲೆಕ್ಕವನ್ನೇ ಕೊಟ್ಟಿಲ್ಲ. ಇದರಲ್ಲಿ ಎಷ್ಟು ಲಾಭ ಬಂದಿದೆ ? ಎಷ್ಟು ನಷ್ಟವಾಗಿದೆ ? ಎಂಬುದೇ ಗೊತ್ತಾಗುತ್ತಿಲ್ಲ. ಇದಕ್ಕೆ ಹಿಂದೆ ೧೯೬೯-೭೦ ರಿಂದ ೭೮-೭೯ ರವರೆಗೆ ೬.೩೭ ಕೋಟಿ ರೂ. ನಷ್ಟವಾಗಿತ್ತು. ಇದನ್ನೆಲ್ಲಾ ನಮ್ಮ ಜನತೆ ಬಹಳ ತಾಳ್ಮೆಯಿಂದ ಸಹಿಸಿಕೊಂಡು ಬಂದಿದ್ದಾರೆ.

ಮಾನ್ಯ ಅಧ್ಯಕ್ಷರೆ, ಸರ್ಕಾರದ ಈ ವ್ಯವಹಾರವನ್ನೆಲ್ಲಾ ನೋಡಿದರೆ, ಈ ಸರ್ಕಾರ ಏತಕ್ಕೆ ಇರಬೇಕು ? ಈ ಇಲಾಖೆಯನ್ನು ನಿರ್ಮಾಣ ಮಾಡಿದ ಉದ್ದೇಶವಾದರೂ ಏನು ? ಮೊದಲು ರೈತರು ಬೆಳೆಯುತ್ತಿದ್ದುದನ್ನು ಬಳಕೆದಾರರು ಕೊಂಡುಕೊಳ್ಳುತ್ತಿದ್ದರು. ಆದರೆ ಈ ಮಧ್ಯೆ ದಲ್ಲಾಳಿಗಳು ಕಮಿಷನ್‌ನ್ನು ತೆಗೆದುಕೊಂಡು ತಿಂದುತೇಗುತ್ತಿದ್ದಾರೆ ಅದರಿಂದ ಇದನ್ನು ತಡೆಗಟ್ಟಬೇಕು ಇಲ್ಲದಿದ್ದರೆ ಗ್ರಾಹಕರ ಶೋಷಣೆ ಆಗುತ್ತದೆ ಎಂಬ ಉದ್ದೇಶದಿಂದ ಸರ್ಕಾರದವರು ಈ ಇಲಾಖೆಯನ್ನು ಸ್ಥಾಪನೆ ಮಾಡಿದರು. ಇದಕ್ಕೆ ಒಬ್ಬ ಮಂತ್ರಿಯನ್ನೂ ಮಾಡಿದರು. ಆದರೆ ಇದರಿಂದ ಆದದ್ದಾದರೂ ಏನು ?

ಇವತ್ತು ಬೆಳೆಯನ್ನು ಬೆಳೆದ ರೈತನಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಆಹಾರ ವಸ್ತುಗಳು ಸಿಕ್ಕುತ್ತಿಲ್ಲ. ಈ ಇಲಾಖೆಯವರು ತಾವು ಕೊಂಡುಕೊಂಡ ಕೋರ್ಸ್ ರೈಸ್‌ನ್ನು ಜನಸಾಮಾನ್ಯರಿಗೆ ಹಂಚುವಾಗ ಎಷ್ಟು ಲಾಭವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ನೀತಿ ನಿಯಮ ಇಲ್ಲ. ಇವತ್ತು ಸುಮಾರು ೪೦ ಪರ್ಸೆಂಟ್‌ನಷ್ಟು ಲಾಭವನ್ನು ಇವರು ತೆಗೆದುಕೊಳ್ಳುತ್ತಿದ್ದಾರೆ.

ಮೀಡಿಯಂರೈಸ್ ೫೦ ಪರ್ಸೆಂಟ್ ಲಾಭ, ಫೈನ್ ರೈಸ್‌ಗೆ ೫೦ ಪರ್ಸೆಂಟ್ ಲಾಭವನ್ನು ಇಟ್ಟಿರುತ್ತೀರಿ. ಜೋಳ ಅತ್ಯಂತ ಕಡುಬಡವರ ಜೀವನ ವಸ್ತು ಅದರ ಮೇಲೆ ೪೦ ಪರ್ಸೆಂಟ್ ಲಾಭವನ್ನು ಪಡೆಯುತ್ತಿದ್ದೀರಿ, ರಾಗಿ ಸಾಮಾನ್ಯ ಜನರು ಉಪಯೋಗಿಸತಕ್ಕಂಥ. ವಸ್ತು ಇದರ ಮೇಲೆ ೫೩ ಪರ್ಸೆಂಟ್ ಲಾಭವನ್ನು ಪಡೆಯುತ್ತಿದ್ದೀರಿ. ಅದೆಲ್ಲವನ್ನು ನೋಡಿದರೆ ಈ ದೇಶದಲ್ಲಿ ಜನರನ್ನು ಉಳಿಸತಕ್ಕಂಥ ಯೋಚನೆಯನ್ನು ಮಾಡುತ್ತಿದ್ದೀರಾ ಎಂದು ಕೇಳಬೇಕಾಗುತ್ತದೆ. ಏತಕ್ಕೆ ಇಷ್ಟೊಂದು ಲಾಭವನ್ನು ಪಡೆಯುತ್ತಿದ್ದೀರಿ. ಸುಲಭ ಬೆಲೆಯಲ್ಲಿ ಏತಕ್ಕೆ ಆಹಾರಧಾನ್ಯಗಳನ್ನು ಒದಗಿಸಬಾರದು ? ರೈತರಿಗೆ, ಸಾಮಾನ್ಯ ಜನರಿಗೆ ಆಹಾರ ಪದಾರ್ಥಗಳು ಸುಲಭವಾದ ಬೆಲೆಗೆ ಸಿಗುವಂತೆ ಮಾಡಬೇಕು. ಇಷ್ಟು ಲಾಭವನ್ನು ಪಡೆದರೂ ಕೂಡ ಕೊಟ್ಯಾಂತರ ರೂಪಾಯಿಗಳು ಏತಕ್ಕೆ ಈ ಇಲಾಖೆಯಲ್ಲಿ ನಷ್ಟವಾಗುತ್ತಿದೆ ನಾವು ಇದನ್ನು ನೋಡಿದರೆ ನಿಮ್ಮ ಆಯವ್ಯಯ ಪಟ್ಟಿಯಲ್ಲಿ ಹೆಗ್ಗಣಗಳನ್ನು ಸಾಕುವುದಕ್ಕೆ ವ್ಯವಸ್ಥೆ ಮಾಡಿ ಇಟ್ಟಿದ್ದೀರೆಂದು ತೋರುತ್ತದೆ. ಇಷ್ಟೊಂದು ಕೋಟಿ ರೂಪಾಯಿಗಳು ನಷ್ಟವಾಗಬೇಕಾದರೆ ಏನಾದರೂ ಹೆಗ್ಗಣಗಳು ಇರಲೇಬೇಕು. ಅದನ್ನು ಸಾಕುವುದಕ್ಕಾಗಿ ಈ ಬಜೆಟ್‌ನ್ನು ತಾವು ಇಟ್ಟಿರುವುದು ಎಂದು ತೋರುತ್ತದೆ ಈವತ್ತು ಭತ್ತವನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಆಹಾರಧಾನ್ಯಗಳನ್ನು ದಾಸ್ತಾನು ಮಾಡಿದ್ದಾರೆ. ನೆನ್ನೆ ಮಾನ್ಯ ಸಹಕಾರಿ ಸಚಿವರು ಉತ್ತರವನ್ನು ಕೊಡುತ್ತಾ ಹೇಳಿದರು ೪೩ ಲಕ್ಷ ರೂಪಾಯಿಗಳು ಒಂದೇ ವರ್ಷದಲ್ಲಿ ಕೋ ಆಪರೇಟೀವ್ ಸೊಸೈಟಿಗಳಲ್ಲಿ ನಷ್ಟವಾಗಿದೆ ೪೩ ಲಕ್ಷ ರೂಪಾಯಿಗಳು ಮಿಸ್ ಅಪ್ರಾಪ್ರಿಯೇಷನ್ ಆಗಿದೆ ಎಂದು ಹೇಳಿದರು. ಸೊಸೈಟಿಗಳಲ್ಲ ಭತ್ತವನ್ನು ಸಂಗ್ರಹಣೆ ಮಾಡುವುದರಲ್ಲಿ ಇಷ್ಟೊಂದು ನಷ್ಟವಾಗಿದೆ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ ಟಿ.ಎ.ಪಿ.ಸಿ.ಎಂ.ಸಿ.ಯಲ್ಲಿ ಹತ್ತು ಸಾವಿರ ಟನ್ ಭತ್ತ ಸಂಗ್ರಹಣೆ ಮಾಡಿತ್ತು. ಇವತ್ತು ಆಭತ್ತ ಎಲ್ಲಿ ಹೋಯಿತು ಎನ್ನುವುದು ಗೊತ್ತಿಲ್ಲ. ಯಾರು ಕಾರಣರು ಎನ್ನುವುದು ಗೊತ್ತಿಲ್ಲ. ಯಾರೋ ಒಬ್ಬ ಸಾಮಾನ್ಯ ನೌಕರರನ್ನು ಸಸ್‌ಪೆನ್‌ಷನ್ ಇಟ್ಟಿದ್ದೀರಿ. ಹತ್ತುಸಾವಿರ ಟನ್ ಭತ್ತ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಗೈರು ವಿಲೆಯಾಗಬೇಕಾದರೆ ಯಾರು ಕಾರಣರು ಎನ್ನುವುದನ್ನು ಕಂಡುಹಿಡಿಯಬೇಕು. ಇದರ ಬಗ್ಗೆ ತೀವ್ರವಾಗಿ ಹೋಗಿ ಅವರು ಯಾವ ಯಾವ ಭಾಗದಲ್ಲಿ ಆಹಾರ ಧಾನ್ಯಗಳನ್ನು ಕರೀದಿಸುತ್ತಾರೆ ಎನ್ನುವುದನ್ನು ಕಂಡುಹಿಡಿಯಬೇಕು. ಈವತ್ತು ತಮ್ಮನ್ನು ಪ್ರಶ್ನೆ ಮಾಡುತ್ತೇನೆ, ರೈತರು ಬೆಳೆದಂಥ ಭತ್ತವನ್ನು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ತರಬೇಕಾದರೆ ಒಂದು ಕ್ವಿಂಟಾಲ್ ಭತ್ತಕ್ಕೆ ಎರಡು ರೂಪಾಯಿನಿಂದ ಹಿಡಿದು ಮೂರು ರೂಪಾಯಿಗಳವರೆಗೆ ವಸೂಲು ಮಾಡುತ್ತಿರುತ್ತಾರೆ, ಟ್ರಾನ್ಸ್‌ಪೋರ್ಟ್ ಚಾರ್ಜಸ್ ೧೧ ರೂಪಾಯಿನಿಂದ ೧೫ ರೂಪಾಯಿಗಳವರೆಗೆ ಒಂದು ಕ್ವಿಂಟಾಲ್‌ಗೆ ಹೋಗುತ್ತಿದೆ. ಇದು ಸಾಲದು ಎಂದು ಓವರ್ ಹೆಡ್ ಚಾರ್ಜಸ್ ಎಂದು ರೈತರಿಂದ ವಸೂಲು ಮಾಡುತ್ತಿರುತ್ತಾರೆ. ಇದನ್ನು ನೋಡಿದರೆ ರೈತನ ಸ್ಥಿತಿ ಏನಾಗಬೇಕು ಇದರಿಂದ ಇಲಾಖೆಯ ಸಿಬ್ಬಂದಿ ಇದಿಯೋ ಇಲ್ಲವೋ ಎನ್ನುವ ಮಾತನ್ನು ಕೇಳಬೇಕಾಗಿದೆ. ಇದರ ಜೊತೆಗೆ ಶೀಘ್ರವಾಗಿ ತನಿಖೆಯಾಗಬೇಕು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸ್ಥಾಪನೆಯಾದಗಾಲಾಯ್ತು ಇಲ್ಲಿಯವರೆಗೆ ಎಷ್ಟು ಕ್ವಿಂಟಾಲ್ ಭತ್ತ ಎಷ್ಟು ಕ್ವಿಂಟಾಲ್ ಇತರ ಆಹಾರಧಾನ್ಯಗಳು ಗೈರುವಿಲೆಯಾಗಿದೆ, ಇದಕ್ಕೆ ಯಾವ ಅಧಿಕಾರಿಗಳು ಹೊಣೆಗಾರರು ಎನ್ನುವ ಬಗ್ಗೆ ತನಿಖೆ ಮಾಡಿ ಏನಾದರೂ ಸ್ಟೇಟ್‌ಮೆಂಟ್ ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ. ಅದನ್ನು ಮಾಡಿ ಸಾರ್ವಜನಿಕವಾಗಿ ಆಗಿರತಕ್ಕಂಥ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ಅಷ್ಟಾದರೂ ಮಾಡಿ ಗೌರವವನ್ನು ಉಳಿಸಿಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮೂರು ಕೋಟಿ ೭೦ ಲಕ್ಷ ಜನ ಸಂಖ್ಯೆ ಇರತಕ್ಕಂಥ ಈ ರಾಜ್ಯದಲ್ಲಿ ೧೪,೨೩೦ ಫೇರ್ ಪ್ರೈಸ್ ಡಿಪೋಗಳನ್ನು ತೆರೆದಿದ್ದೀರಿ. ಒಂದೊಂದು ಫೇರ್ ಪ್ರೈಸ್ ಷಾಪಿಗೂ ೨೫೦೦ ಜನರನ್ನು ಕೊಳ್ಳುವುದಕ್ಕೆ ಹಾಕಿರುತ್ತೀರಿ. ಒಂದು ಕಡೆ ಮಾನ್ಯ ಆರೋಗ್ಯ ಸಚಿವರು ಹೇಳುತ್ತಾರೆ ಒಂದು ಕುಟುಂಬಕ್ಕೆ ಎರಡು ಮಕ್ಕಳು ಸಾಕೆಂದು. ನಿಮ್ಮನ್ನು ನಾನು ಈವತ್ತು ಕೇಳಬೇಕಾಗಿದೆ, ನೀವು ಕೊಡ

ತಕ್ಕಂಥ ಸಾಮುಗ್ರಿಗಳು ಸಕ್ಕರೆ ಸೀಮೆ ಎಣ್ಣೆ, ಅಕ್ಕಿ, ಗೋಧಿ, ರವೆ ಒಂದೊಂದಕ್ಕೂ ಒಂದೊಂದು ಕಡೆ ಕ್ಯೂ ನಿಂತು ತೆಗೆದುಕೊಳ್ಳಬೇಕಾದರೆ ಎಷ್ಟು ಜನ ಮಕ್ಕಳು ಬೇಕಾಗುತ್ತದೆ. ಸ್ವಾಮಿ ಕೊನೇ ಪಕ್ಷ ೫ ಜನ ಮಕ್ಕಳಾದರೂ ಬೇಕಾಗುತ್ತದೆ ನಿಮಗಾಗತಕ್ಕಂಥ ನಷ್ಟ ವಾದರೂ ಏನು ಈವತ್ತು ತಾವು ಹೇಳುತ್ತಿದ್ದೀರಿ ಅನ್ ಎಂಪ್ಲಾಯ್ಡ್ ಗ್ರಾಜ್ಯುಯೇಟ್ಸ್‌ಗೆ, ಮನೆಗೆ ಒಬ್ಬರಿಗೆ ಕೆಲಸವನ್ನು ಕೊಡುತ್ತೇವೆಂದು ಏತಕ್ಕೆ ಐದುನೂರು ಕಾರ್ಡುಗಳಿಗೆ ಒಬ್ಬರಿಗೆ ವಿತರಣೆ ಮಾಡ ತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ದೇಶಕ್ಕೆ ಏನೂ ನಷ್ಟವಾಗುವುದಿಲ್ಲ. ಈ ಕೆಲಸವನ್ನು ಅತ್ಯಗತ್ಯ ವಾಗಿ ತಾವು ಮಾಡಬೇಕು. ಡಿಪ್ಪೋಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕೆಂದು ತಮ್ಮಲ್ಲಿ ಕಳಕಳಿ ಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ ನಮಗೆ ಕಣ್ಣಿಗೆ ಕಾಣತಕ್ಕಂಥದ್ದು ಹಿಟ್ಟು ಮಾಡತಕ್ಕಂಥ ರೋಲರ್ ಮಿಲ್ಸ್. ಇದರ ಬಗ್ಗೆ ಈ ಸದನದಲ್ಲಿ ಎಷ್ಟರಮಟ್ಟಿಗೆ ಚರ್ಚೆ ನಡೆದಿರುತ್ತದೆ. ಈ ಸದನದಲ್ಲಿ ಒಂದು ದಿವಸ ಅಂದರೆ ೨೧ನೇ ತಾರೀಖು ಜುಲೈ ೧೯೮೦ ರಲ್ಲಿ ೧೪೬ರ ಅಡಿಯಲ್ಲಿ ಒಂದು ಚರ್ಚೆ ಬಂದಿತ್ತು. ಆವಾಗ ಮಾನ್ಯ ಸಿ.ಎಂ. ಆರ್ಮುಗಮ್‌ರವರು ಈ ಸದನದಲ್ಲಿ ಒಂದು ಸವಾಲನ್ನು ಎಸೆದರು. ಹದಿಮೂರು ಮಿಲ್‌ಗಳಿಗೆ ರಾತ್ರೋರಾತ್ರಿ ಲೈಸೆನ್ಸನ್ನು ಕೊಟ್ಟಿದ್ದಾರೆ. ಈ ಹದಿಮೂರು ಮಿಲ್‌ಗಳಿಗೆ ಏಕಕಾಲದಲ್ಲಿ ಲೈಸೆನ್ಸ್‌ಗಳನ್ನು ಕೊಡತಕ್ಕಂಥ ವೇಳೆಯಲ್ಲಿ ೫೦ ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂಬುದಾಗಿ ಪ್ರಸ್ತಾಪ ಮಾಡಿದರು. ಮತ್ತೆ ಅವರು ಹೇಳಿದರು ಈ ಒಂದು ವಿಷಯವನ್ನು ಸದನದಲ್ಲಿ ಸಾಬೀತು ಪಡಿಸದೆ ಹೋದರೆ ಸದಸ್ಯತ್ವತನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ ಎನ್ನುವ ಪ್ರಶ್ನೆಯನ್ನು ಶ್ರೀಮಾನ್ ಆರ್ಮುಗಂರವರು ಮಂಡಿಸಿದರು. ಆಪಾದಮೇಲೆ ಅದರ ಆಧಾರದಮೇಲೆ ಶ್ರೀಮಾನ್ ಕೆ.ಎಚ್. ಶ್ರೀನಿವಾಸ್‌ರವರು ೧೪೬ರ ಅಡಿಯಲ್ಲಿ ಈ ನಿರ್ಣಯವನ್ನು ಚರ್ಚೆಗೆ ತಂದಾಗ ಸುದೀರ್ಘವಾಗಿ ಚರ್ಚೆ ನಡೆದು ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಒಂದು ಆಶ್ವಾಸನೆಯನ್ನು ಕೊಟ್ಟರು. ಚರ್ಚೆ ನಡೆದನಂತರ ಇದು ನಡೆದಿರುವ ಬಗ್ಗೆ ಯಾರೂ ಕೂಡ ಅನುಮಾನ ಪಡತಕ್ಕಂಥ ಪ್ರಸಂಗ ಬೇಡ. ನಮ್ಮ ಸರ್ಕಾರ ಯಾವುದೇ ಮಂತ್ರಿಯಮೇಲೆ ಆಪಾದನೆ ಬಂದರೆ ಇಡಿ ಸರ್ಕಾರಕ್ಕೆ ಆಪಾದನೆ ಮಾಡಿದಂತಾಗುತ್ತದೆ. ಇದರಲ್ಲಿ ಜಾತಿಯನ್ನು ತೋರಿಸತಕ್ಕಂಥ, ಜಾತಿಯನ್ನು ಗುರುತಿಸ ತಕ್ಕಂಥ ಪ್ರಯತ್ನ ಮಾಡಬೇಡಿ ಎಂದೂ ಕೂಡ ಪ್ರಸ್ತಾಪ ಮಾಡುತ್ತಾ ಮಾನ್ಯ ಮಂತ್ರಿಗಳು ಯಾರೂ ಇದರಲ್ಲಿ ಭಯ ಪಡಬೇಕಾಗಿಲ್ಲ. Sri Armugham being a responsible Member, he made certain charges and Sri J.H. Patel took them very serieously. I will order for a C.B.I. enquiry. Let the reality come out and whatever comes out of the enquiry they will be placed before the House. ಎಂದು ಹೇಳಿದ್ದು ೨೧ನೇ ತಾರೀಖು ಜುಲೈ ೮೦ರಲ್ಲಿ ಈಗಾಗಲೇ ಜೂನ್ ೧೯೮೨ರ ಅಂತ್ಯದಲ್ಲಿ ಇದ್ದೇವೆ. ರಾತ್ರೋರಾತ್ರಿ ಲೈಸೆನ್ಸ್ ಕೊಟ್ಟಂಥ ೧೩ ಮಿಲ್‌ಗಳ ಬಗ್ಗೆ ಸಿ.ಬಿ.ಐ. ತನಿಖೆ ಎರಡು ವರ್ಷಗಳಾದರೂ ಕೂಡ ಕೊಟ್ಟಿಲ್ಲ. ಎರಡು ವರ್ಷಗಳಾದರೂ ಕೂಡ ವರದಿಯನ್ನು ಸಭೆಯ ಮುಂದೆ ಇಟ್ಟಿಲ್ಲ. ಈಗ ಲಾದರೂ ಸರ್ಕಾರಕ್ಕೆ ಇದನ್ನು ಜಾಗ್ರತೆಯಾಗಿ ಪ್ರಕಟಣೆ ಮಾಡುವುದರಲ್ಲಿ ಏನಾದರೂ ಉದಾರ ಮನಸ್ಸು ಇದೆಯೋ ಎಂದು ಕೇಳುತ್ತೇನೆ. ಅಥವಾ ಏನಾದರೂ ತಪ್ಪು ಇದ್ದರೆ, ಯಾವುದೇ ವ್ಯಕ್ತಿ ತಪ್ಪಿತಸ್ಥ ನಿದ್ದರೆ ಅದನ್ನು ತಡೆಯುವಂಥ ಪ್ರಯತ್ನ ಮಾಡುತ್ತಿದ್ದೀರಿಯೋ ಎನ್ನುವುದಕ್ಕೆ ತಾವು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು. ನಾವು ಈ ಸಭೆಯಲ್ಲಿ ಕುಳಿತುಕೊಂಡು ಕೇಳುತ್ತಿದ್ದರೂ ಎರಡು ವರ್ಷ ಗಳಾದರೂ ಸಿ.ಬಿ.ಐ. ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರಿಗೆ ಸರಿಯಾದ ದಾಖಲಾತಿಗಳನ್ನು ಒದಗಿಸುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ನನ್ನ ದೃಷ್ಟಿಯಲ್ಲಿ ಹೇಳಬೇಕಾಗಿದೆ. ಸರ್ಕಾರಿ ಇಲಾಖೆಗಳಲ್ಲಿ, ಅದರಲ್ಲೂ ಕೂಡ ತಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಇಂಥ ದೋಷಕ್ಕೆ ಸಿಕ್ಕಿದಾಗ ಅದನ್ನು ತಪ್ಪಿಸಿಕೊಳ್ಳುವಂಥ ಪ್ರಯತ್ನ ಮಾಡಿದ್ದಾರೆ. ಅದರ ವರದಿ ಸಿಕ್ಕಿದ ರೀತಿಯಲ್ಲಿ ಪ್ರಭಾವ ಬೀರುತ್ತಾ ಇದ್ದಾರೆ. ಇದು ಬಹುಶಃ ರಾಜಕಾರಣ ಕಾರ್ಯದಲ್ಲಿ ಈವತ್ತು ಏನಾದರೂ ಅನ್ಯಾಯ ಮಾಡಲಿಕ್ಕೆ ನೇರವಾಗಿ ರಾಜಕಾರಣದ ಹೊಣೆಯನ್ನು ಮಾಡತಕ್ಕಂಥದ್ದು ಸಮಾಜದಲ್ಲಿ ಬೆಳೆದು ಬಂದಿ ರುತ್ತದೆ. ಇಂಥ ಪ್ರಸಂಗಗಳು ದೇಶದಲ್ಲಿ ಒಂದಲ್ಲ ಎರಡಲ್ಲ ಹತ್ತಾರು ಬಾರಿ ನಡೆದಿರುತ್ತದೆ. ಇದರ ಬಗ್ಗೆ ಖಚಿತವಾದ ತನಿಖೆ ನಡೆಯಬೇಕಾಗಿದೆ. ಏತಕ್ಕೆಂದರೆ ಮಂತ್ರಿಗಳೇ ಆಗಲಿ, ರಾಜಕಾರಣಿಗಳೇ ಆಗಲಿ ದೋಷವಿಮುಕ್ತರಾಗಿರಬೇಕು. ಮಂತ್ರಿಗಳು ಈ ಸದನದಲ್ಲಿ ಭರವಸೆಗಳನ್ನು ಕೊಡುತ್ತಾರೆ,

ಕೊಟ್ಟಂಥ ಭರವಸೆಗಳನ್ನು ಕೊಡುತ್ತಾರೆ. ಕೊಟ್ಟಂಥ ಭರವಸೆಗಳನ್ನು ಉಳಿಸಿಕೊಳ್ಳತಕ್ಕಂಥ ಕೆಲಸ ಆಗಬೇಕು. ಪಾರ್ಲಿಮೆಂಟ್‌ನಲ್ಲಿಯೂ ಕೂಡ ಚರ್ಚೆಯ ಮೇಲೆ ಉತ್ತರವನ್ನು ಕೊಡುವಾಗ ಭರವಸೆಗಳನ್ನು ಕೊಡುತ್ತಾರೆ. ಮಾನ್ಯ ಮಂತ್ರಿಗಳು ಏನು ಭರವಸೆಯನ್ನು ಕೊಟ್ಟಿದ್ದಾರೆ, ಅದು ಹೇಗೆ ನಡೆದಿದೆ ಎನ್ನುವುದನ್ನು ವಿಮರ್ಶೆ ಮಾಡಿ ವರದಿಯನ್ನು ಕೊಡಲು ಆಕ್ಷನ್ ಟೇಕನ್ ಕಮಿಟಿ ಎಂದು ಇದೆ. ಅದೇರೀತಿಯಲ್ಲಿ ನಮ್ಮಲ್ಲೂ ಒಂದು ಸಮಿತಿಯಿದೆ. ಅದ್ಯಾವುದು ಎಂದರೆ ಅಷ್ಯೂರೆನ್ಸ್ ಕಮಿಟಿ ಎಂದು.

MR. SPEAKER.—You are making a reference to CBI report The Government has got it investigated by the CBI and the gist of the report is also sent to me. But from the letter from the Chief Secretary there is no indication to place it on the table of the House. I have written again to the Chief Secretary to get the report printed and also indicate the date on which the report would be placed. Therefore. don't make reference quite often on that aspect. I wanted to clarify the position.

ಶ್ರೀ ಎಚ್. ಗಂಗಾಧರನ್.—ಮುಖ್ಯ ಮಂತ್ರಿಗಳು ಹೇಳಿದ ಮಾತನ್ನು ಓದಿದ್ದೇನೆ. ಅದನ್ನು ಮಾತ್ರ ಪ್ರಸ್ತಾಪ ಮಾಡಿದ್ದೇನೆ.

MR. SPEAKER—I have got that. That is why I said it has been done. If you want I will read the last portion of the letter. Accordingly this matter was referred to the Central Bureau of Investigation for enquiry and the C.B I. have since sent a gist of the report. The report of the C.B.I. is sent here in quadruplicate." Again I have, our Secretariat has written a letter to the Chief Secretary to indicate the date on which it will have to be placed on the table of the House. Therefore, there is no lapse on the part of the Goverment in respect of that assurance,

SRI A LAKSHMISAGAR.—Sir, the occasion is, we are now discussing the demands of the Food and Civil Supplies department. This would have been most appropriate that the Government should have placed the report on the table of this House.

MR. SPEAKER.—On 22nd June this office has received Immediately, we have written back to the Chief Secretary on 15th of July.

SRI A. LAKSHMISAGAR.—So far as your office is concerned, it has taken quick action. Reference to that episode could have been easily obviated if the report having been received by the Government was placed on the table of the House.

MR. SPEAKER.—It will become public document provided it is placed on the table of the House,

ಶ್ರೀ ಹೆಚ್. ಗಂಗಾಧರನ್.—ತಮ್ಮ ಭರವಸೆಯನ್ನು ನಂಬುತ್ತೇನೆ. ನಾನು ಪ್ರಸ್ತಾಪ ಮಾಡಿದ್ದು ಏಕೆಂದರೆ ಶೀಘ್ರವಾಗಿ ಅದು ಬರಲಿ ಎಂದೂ ಶೀಘ್ರವಾಗಿ ಒದಗಿಸಿ ಕೊಡುವುದನ್ನು ಸ್ವಾಗತಿಸುತ್ತೇನೆ. ಮುಖ್ಯಮಂತ್ರಿಗಳು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ನಮಗೆ ಕಳುಹಿಸುವ ಉದ್ದೇಶವೇನೋ ಇದೆ, ಆದರೆ ಯಾವತ್ತು ಇಡುತ್ತೇವೆ ಎನ್ನುವುದನ್ನು ತಿಳಿಸಿಲ್ಲ.

ಶ್ರೀ ಹೆಚ್. ಗಂಗಾಧರನ್.—ಆ ವರದಿ ಸದನದ ಮುಂದೆ ಶೀಘ್ರವಾಗಿ ಬರಲಿ. ೧೯೭೫–೭೬ನೇ ಇಸವಿಗಳಲ್ಲಿ ಫುಡ್ ಕಾರ್ಪೊರೇಷನ್‌ರವರು ನಮ್ಮಲ್ಲಿ ಈ ವರ್ಷದಲ್ಲಿ ಇಷ್ಟು ದಾಸ್ತಾನು ಇಷ್ಟು ಇದೆ ಓಪನ್ ಬ್ಯಾಲೆನ್ಸ್ ಇಷ್ಟು ಇದೆ. ರಿಸಿಟ್ ಇಷ್ಟು ಇದೆ ಎಂದು ಅದನ್ನು ಪ್ರಕಟ ಮಾಡುತ್ತಿದ್ದರು ಯಾವ್ಯಾವ ದಿವಸ ಎಷ್ಟೆಷ್ಟು ಇದೆ ಎಂಬುದನ್ನು ತಿಳಿಸುತ್ತಿದ್ದರು. ಆದರೆ ೧೯೭೭–೭೮ರಿಂದೀಚೆಗೆ ವಾರ್ಷಿಕ ವರದಿಯಲ್ಲಿ ಬರುತ್ತಿಲ್ಲ. ಫುಡ್ ಕಾರ್ಪೊರೇಷನ್‌ರವರಾದರೂ ಸಹ ದವಸ ಇಷ್ಟು ಇದೆ, ಇಷ್ಟು ವಿತರಣೆ ಮಾಡಿದ್ದೇವೆ, ಯಾವ್ಯಾವ ಜಿಲ್ಲೆಯಲ್ಲಿ ವಿತರಣೆ ಮಾಡಿದ್ದೇವೆ. ಜಿಲ್ಲೆಗಳ ರಿಕ್ವೈರ್‌ಮೆಂಟ್ ಎಷ್ಟು ಇತ್ತು ? ಇನ್ನು ಎಷ್ಟು ಬೇಕು ? ನಮ್ಮಲ್ಲಿ ಎಷ್ಟು ಉತ್ಪಾದನೆಯಾಗುತ್ತಿದೆ ? ಇಷ್ಟು ಆಹಾರ ಪದಾರ್ಥಗಳನ್ನು ಹೊರಗಡೆಯಿಂದ ತರಿಸಿಕೊಳ್ಳುತ್ತೇವೆ. ಇಷ್ಟನ್ನು ಹೊರಗಡೆ ಕೊಡುತ್ತೇವೆ ಆದರಿಂದ ಇಷ್ಟು ಹಣ ಬಂದಿದೆ ಇಂತಹ ಸಮಗ್ರವಾದ ವಿಚಾರ ವಾರ್ಷಿಕ ವರದಿಯಲ್ಲಿರಬೇಕು. ಈ ವರದಿ ತಯಾರು ಮಾಡುವಾಗ ಈ ಪ್ರಮುಖ ವಿಷಯವನ್ನು ಏತಕ್ಕೆ ಮುಚ್ಚಿಡುತ್ತಾರೋ ಗೊತ್ತಿಲ್ಲ. ಕೇಂದ್ರ ಸರ್ಕಾರದಿಂದ ೨-೩ ಸಾವಿರ ಟನ್ ಗೋಧಿಯನ್ನು ಕೇಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಸಕ್ಕರೆಯನ್ನು ನಮ್ಮ ರಾಜ್ಯದಲ್ಲಿ ಉತ್ಪಾದನೆ ಮಾಡಿದರೂ ಒಬ್ಬ ಮನುಷ್ಯನಿಗೆ ೧ ಕೆ. ಜಿ. ಎಂದು ಹೇಳುತ್ತೀರಿ. ಈಗ ಅದರಂತೆ ನ್ಯಾಯಬೆಲೆ ಅಂಗಡಿಗಳಲ್ಲಿ ಹಂಚುತ್ತಿದ್ದೀರಿ. ಸಕ್ಕರೆಯನ್ನು ಹೆಚ್ಚಿಗೆ ಉತ್ಪಾದನೆ ಮಾಡಿದರೂ ಹೊರಗಡೆ ಕಳುಹಿಸಿ. ನಾವು ಇಲ್ಲಿ ಸಕ್ಕರೆಗೆ ಹೆಚ್ಚು ಬೆಲೆಯನ್ನು ಕೊಡುತ್ತಿದ್ದೇವೆ ಹೊರಗಡೆ ಕಳುಹಿಸುವುದರಿಂದ ಅದರ ಆದಾಯ-ವೆಚ್ಚ ಹೇಳಬೇಕಾಗಿತ್ತು. ಪ್ರತಿಯೊಂದು ದವಸಗಳನು ಅಕ್ಕಿ, ರಾಗಿ, ಜೋಳ, ಯಾವುದೇ ಆಗಬಹುದು ನಿಮ್ಮ ಇಲಾಖೆಗೆ ಒಳಪಡಬೇಕಾದ ದವಸಗಳನ್ನು ಇಷ್ಟು ಸಂಗ್ರಹ ಮಾಡಿದ್ದೇವೆ, ಇಷ್ಟು ವಿತರಣೆ ಮಾಡಿದ್ದೇವೆ. ನಮ್ಮ ಸರ್ಕಾರ ಹೊರಗಡೆ ದವಸಗಳನ್ನು ಕಳುಹಿಸಿರುವುದರಿಂದ ಅಥವಾ ಕೊಂಡಂತಹ ಬೆಲೆಯಿಂದ ಎಷ್ಟು ಲಾಭ ಬಂದಿದೆ, ಎಷ್ಟು ನಷ್ಟವಾಗಿದೆ ಎಂಬ ಸಮಗ್ರ ವರದಿ ಇದರಲ್ಲಿರಬೇಕಾಗಿತ್ತು, ಇದರಲ್ಲಿ ಕಾರ್ಪೊರೇಷನ್ ಎಷ್ಟು ಸಂಗ್ರಹ ಮಾಡುತ್ತದೆ ಈಗ ಎಷ್ಟು ದಾಸ್ತಾನು ಇರುತ್ತದೆ ಎಂಬುದು ಗೊತ್ತಾಗುವುದಿಲ್ಲ. ಯಾತಕ್ಕೆ ಕೊಟ್ಟಿಲ್ಲ ಅಂದರೆ ಇದರಲ್ಲಿ ಏನಾದರೂ ಅವ್ಯವಹಾರ ನಡೆದಿರಲೇಬೇಕು ಅಕೌಂಟೆಂಟ್ ಜನರಲ್‌ರವರು ವರದಿಯೊಳಗೆ ಸಾವಿರಾರು ರೂಪಾಯಿ ಲೆಕ್ಕದ ವೋಚರ್ಸ್‌ಗಳು ಇಲ್ಲವೆಂದು ಹೇಳಿದ್ದಾರೆ. ಕಾರ್ಪೊರೇಷನ್ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಬೇಕಾಗಿದೆ. ತಮ್ಮ ಇಲಾಖೆಯವರು ವ್ಯವಸ್ಥಿತವಾದ ವರದಿಯನ್ನು ಇಡುವುದಕ್ಕೆ ಪ್ರಯತ್ನ ಮಾಡಿಲ್ಲ ನಮ್ಮದೇಶಕ್ಕೆ ಎಷ್ಟು ದವಸ ಬೇಕು ಒಬ್ಬ ಮನುಷ್ಯ ಬದುಕಿ ಜೀವನ ಮಾಡಬೇಕಾದರೆ ಎಷ್ಟು ದವಸವನ್ನು ಸಂಗ್ರಹಮಾಡಬೇಕು ಎನ್ನುವುದು ನಿಮಗೆ ಗೊತ್ತಿಲ್ಲ. ಎಲ್ಲರಿಗೂ ರೇಷನ್ ಕಾರ್ಡುಗಳನ್ನು ಕೊಡುತ್ತೇವೆ ಎನ್ನುವ ಘೋಷಣೆ ಮಾಡಿದ್ದಾರೆ ರೇಷನ್ ಕಾರ್ಡ್‌ಗಳನ್ನು ತೆಗೆದುಕೊಂಡು ಒಲೆಗೆ ಇಡಬೇಕು. ರೇಷನ್ ಕೊಡದಿದ್ದರೆ ಇನ್ನೇನು ಮಾಡುವುದು. ಇಷ್ಟು ಆಹಾರಪದಾರ್ಥಗಳು ಸಿಗುತ್ತವೆ ಇಷ್ಟು ದಾಸ್ತಾನು ನಮ್ಮಲ್ಲಿದೆ ಎಂದು ಹೇಳತಕ್ಕ ಸಾಮರ್ಥ್ಯ ಸಮಯೋಚಿತ ನಿಮಗೆ ಇದೆಯೇ ? ಎಷ್ಟು ಭತ್ತ ಕೊಟ್ಟರೂ ತೆಗೆದುಕೊಳ್ಳುತ್ತೇವೆ ಎನ್ನುವ ಘೋಷಣೆ ಹೇಳುತ್ತೀರಿ ನಿಮ್ಮಲ್ಲಿ ದುಡ್ಡಿರಬಹುದು ಕೇಂದ್ರಸರ್ಕಾರ ನಿಮಗೆ ಕೊಡಬಹುದು. ಆ ಬತ್ತವನ್ನು ಸಂಗ್ರಹಮಾಡಿ ಇಡಲಿಕ್ಕೆ ನಿಮ್ಮಲ್ಲಿ ಸ್ಥಳವಿದೆಯೆ ? ನಿಮ್ಮ ಹತ್ತಿರ ಗೋಣಿಚೀಲ ಇಲ್ಲ. ಮೂಲವಸ್ತುಗಳೇ ನಿಮ್ಮಲ್ಲಿ ಇಲ್ಲ. ಕೊಂಡುಕೊಂಡು ರೈತನನ್ನು ರಕ್ಷಣೆ ಮಾಡತಕ್ಕ ಅಧಿಕಾರಿಗಳು ನಿಮ್ಮಲ್ಲಿ ಇಲ್ಲ. ಲೆವಿಯನ್ನು ಯಾವಾಗ ತೆಗೆದುಕೊಳ್ಳಬೇಕೆಂಬುದು ನಿಮಗೆ ಗೊತ್ತಿಲ್ಲ ಈಗ ಲೆವಿ ಕೇಳಿದರೆ ರೈತನಿಗೂ ನೋವು, ಗ್ರಾಹಕನಿಗೂ ನೋವು ಆದ್ದರಿಂದ ಸುಗ್ಗಿಯ ಕಾಲದ ೧ ತಿಂಗಳೊಳಗೆ ನೀವು ಲೆವಿ ತೆಗೆದುಕೊಂಡರೆ ರೈತ ಕೊಡುತ್ತಾನೆ. ಸುಗ್ಗಿಯ ಕಾಲವನ್ನು ಬಿಟ್ಟು ಬೇರೆ ಕಾಲದಲ್ಲಿ ರೈತನನ್ನು ಲೆವಿ ಕೇಳಿದರೆ ಅವನು ಕೊಡುವುದಕ್ಕೆ ತಯಾರಾಗಿಲ್ಲ. ಕೊಡುವ ಕಾಲದಲ್ಲಿ ಬಿಡುತೀರಿ. ಡಿಪೋಗಳನ್ನು ಏತಕ್ಕೆ ಓಪನ್ ಮಾಡುತೀರಿ? ಬತ್ತ ಎಲ್ಲಿ ಹೆಚ್ಚು ಬೆಲೆ ಸಿಗುತ್ತದೆ ಅಲ್ಲಿಗೆ ಹೋಗುತ್ತದೆ. ಹೆಚ್ಚು ಬೆಲೆ ಸಿಗುತ್ತದೆ ಅಂದರೆ, ಯಾರು ಕಡಿಮೆ ಬೆಲೆಗೆ ಕೊಡುತ್ತಾರೆ? ಅದರ ಬಗ್ಗೆ ತೀವ್ರವಾದ ವ್ಯವಸ್ಥೆಯನ್ನು ನಿಮ್ಮ ಇಲಾಖೆಯವರು ಮಾಡಬೇಕು. ಇಲ್ಲದಿದ್ದರೆ ನಿಮ್ಮ ಇಲಾಖೆಯವರು ಪೂರ್ಣ ಪಾತ್ರರಾಗುತ್ತಾರೆ, ಜನರು ಅತೃಪ್ತರಾಗಲಿಕ್ಕೆ ಕಾರಣವಾಗುತ್ತದೆ. ಕೊನೆಯದಾಗಿ ಅವಶ್ಯಕ ವಸ್ತುಗಳನ್ನು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಹಕಾರ ಸಂಘಗಳ ಮೂಲಕ ಬಳಕೆದಾರರಿಗೆ ರೇಷನ್

ಒದಗಿಸುತ್ತೇವೆಂದು ಹೇಳುತ್ತೀರಿ. ಹಳ್ಳಿಗಳಿಗೆ ಬಿಲ್ ಮಾತ್ರ ಹೋಗಿರುತ್ತದೆ ರೇಷನ್ ಹೋಗಿರುವುದಿಲ್ಲ ಸಕ್ಕರೆ ಊರಿಗೆ ಹೋಗುವುದೇ ಇಲ್ಲ. ಅದು ಹೋಗುತ್ತಾ ದಾರಿಯಲ್ಲೇ ಮಾಯವಾಗಿರುತ್ತದೆ. ಹಳ್ಳಿಯ ಜನರು ಬರುತ್ತದೆಂದು ಕಾಯುತ್ತಾರೆ, ಅದು ಇಲ್ಲೇ ಹೊರಟುಹೋಗಿರುತ್ತದೆ ವೋಚರ್ ಮಾತ್ರ ಹಳ್ಳಿಗೆ ಹೋಗಿರುತ್ತದೆ. ಗೋಧಿ ಕೂಡ ಅದೇ ರೀತಿ ಆಗುತ್ತದೆ. ಸಿಮೆಂಟ್ ಕೂಡ ಇದೇಪರಿಸ್ಥಿತಿಯಲ್ಲಿದೆ ಇಲ್ಲಿ ಮಾರಾಟ ಮಾಡತಕ್ಕ ಕೋ-ಆಪರೇಟೀವ್ ಸೊಸೈಟಿಗಳಿಗೆ ಬಿಲ್ ಮಾತ್ರ ಊರು ಕಾಣುತ್ತದೆ. ಪೂರ್ತಿ ಯಾವುದೂ ಹೋಗುವುದಿಲ್ಲ. ಅಲ್ಪಸ್ವಲ್ಪ ಹೋದುದ್ದು ಸರಿಯಾದ ವಿತರಣೆಯಾಗಬೇಕು. ಅಲ್ಲೊಂದು ವರ್ಗ ರಚನೆಯಾಗಿದೆ, ಬಂದಂತಹ ಎಲ್ಲಾ ಸೌಲಭ್ಯಗಳನ್ನು ಅವರೇ ಅನುಭವಿಸುವುದ ಕೋಸ್ಕರ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಗ್ರಾಹಕರಿಗೆ ಕೊಡುವುದಿಲ್ಲ ಅವರೇ ಸಂಗ್ರಹ ಮಾಡಿಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ಮಾರಾಟ ಮಾಡಿಕೊಳ್ಳುತ್ತಾರೆ. ಆದ್ದರಿಂದ ನ್ಯಾಯಬೆಲೆ ಅಂಗಡಿಗಳಿಗೆ ಮತ್ತು ಕೋ-ಅಪರೇಟೀವ್ ಸೊಸೈಟಿಗಳಿಗೆ ಎಷ್ಟು ಕೊಡುತ್ತೀರಿ ಎನುವುದು ತೀರ್ಮಾನವಾದ ಕೂಡಲೇ ಆ ಕೋಟವನ್ನು ನೋಡಿಕೊಂಡು ಸಣ್ಣಕರ ಪತ್ರಗಳನ್ನು ಹಂಚಬೇಕು. ಯಾವ ಊರಿನಲ್ಲಿ ಸೊಸೈಟಿ ಇದೆ, ಎಷ್ಟು ಕೋಟ ಬಂದಿದೆ, ಯಾವಾಗ ಕೊಡುತ್ತಾರೆಂಬುದನ್ನು ಅದರಲ್ಲಿ ನಮೂದಿಸಿ ಪೋಲೀಸ್ ಅಧಿಕಾರಿಯನ್ನು ನಿಲ್ಲಿಸಿ ಎಲ್ಲರಿಗೂ ಹಂಚುವಂತೆ ವ್ಯವಸ್ಥೆ ಮಾಡಿದರೆ ನೀವು ಹಂಚತಕ್ಕ ವ್ಯವಸ್ಥೆ ಪೂರ್ಣವಾದಂತಾಗುತ್ತದೆ. ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶದ ಜನರಿಗೆ ಬಿಲ್ ಮಾತ್ರ ಸಿಗುತ್ತದೆ. ಈ ಕೆಲಸವನ್ನು ತೀರ್ವವಾಗಿ ಮಾಡಬೇಕು. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಡಿಪೋಗಳನ್ನು ತೆರೆದಿದ್ದೀರಿ ಎನ್ನತಕ್ಕ ಲೆಕ್ಕವನ್ನು ಕೊಟ್ಟಿದೀರಿ. ಇದು ಪ್ರಮುಖವಾದ ಪ್ರಶ್ನೆ ಬೇರೆಯವರು ಯಾರು ತಪ್ಪಾಗಿ ತಿಳಿದುಕೊಳ್ಳಬಾರದು. ಹರಿಜನ-ಗಿರಿಜನ ಕಾಲೋನಿಗಳಲ್ಲಿ ಮತ್ತು ಹಿಂದುಳಿದ ವರ್ಗಗಳ ಪ್ರದೇಶಗಳಲ್ಲಿ ಎಷ್ಟು ನ್ಯಾಯ ಬೆಲೆ ಅಂಗಡಿಗಳು ಇವೇ ಎಷ್ಟು ಜನರಿಗೆ ಕೊಟ್ಟಿದ್ದೀರಿ ಅದನ್ನು ಸರ್ಕಾರ ಕೊಡಬೇಕು. ಪ್ರಭಾವಶಾಲಿಗಳು ತಮ್ಮದೇ ಆದ ಮೆಂಬರ್ಸ್‌ಗಳು ಎಲ್ಲವನ್ನು ಅವರೇ ಸಂಗ್ರಹ ಮಾಡುವುದಕ್ಕೆ ನೋಡುತ್ತಿದ್ದಾರೆ.

೫-೦೦ ಪಿ.ಎಂ.

ಬಹುಶಃ ಜನತಾ ಸರ್ಕಾರ ಇಡೀ ದೇಶದಲ್ಲಿ ಉರುಳುವುದಕ್ಕೆ ಈ ಕೆಲವು ಸೊಸೈಟಿಗಳೇ ಕಾರಣವೆಂದು ಈಗ ನನ್ನ ಗಮನಕ್ಕೆ ಬಂದಿದೆ. ಎಲ್ಲ ನೆಂಟರೇ ಇರುವಂತಹ ಕೋಆಪರೇಟಿವ್ ಸೊಸೈಟಿ ಮಾಡಿಕೊಂಡು ಸರ್ಕಾರದಿಂದ ಸಿಗುವಂತಹ ರವೆ, ಸಕ್ಕರೆ, ಗೋಧಿ, ಅಕ್ಕಿ ಮುಂತಾದ ಸಾಮಾನುಗಳನ್ನು ಸೊಸೈಟಿಯ ಮೂಲಕ ಪಡೆದುಕೊಂಡು ಎಲ್ಲವನ್ನೂ ಅವರೇ ಹಂಚಿಕೊಳ್ಳುತ್ತಿದ್ದಾರೆ. ಇಂತಹ ಸೊಸೈಟಿಗಳಿಗೆ ಒಂದು ಸಂಸಾರದಲ್ಲಿರುವ ಸದಸ್ಯರೇ ಡೈರಕ್ಟರ್ಸ್ ಮತ್ತು ಸದಸ್ಯರಾಗಿರುತ್ತಾರೆ. ಇಂತಹ ಫ್ಯಾಮಿಲಿ ಕೋಆಪರೇಟಿವ್ ಸೊಸೈಟಿಗಳು ಬೆಂಗಳೂರು ಮತ್ತು ಮೈಸೂರಿನಂತಹ ದೊಡ್ಡ ದೊಡ್ಡ ನಗರಗಳಲ್ಲಿ ನೂರಾರು ಇರಬಹುದು. ಜನತಾ ಸರ್ಕಾರ ಇದ್ದಾಗ ಸಕ್ಕರೆಯನ್ನು ಮುಕ್ತಪೇಟೆಯಲ್ಲಿ ಮಾರಾಟ ಮಾಡಬಹುದೆಂದು ತಿಳಿಸಿ ದರವನ್ನು ಸಹ ನಿಗದಿ ಮಾಡಿದಾಗ ಇಂತಹ ಸೊಸೈಟಿಗಳ ಬಾಗಿಲು ಮುಚ್ಚುವ ಸ್ಥಿತಿ ಬಂತು. ಇದೇ ಕಾರಣದಿಂದ ಪಾರ್ಲಿಮೆಂಟ್ ಚುನಾವಣೆ ನಡೆದಾಗ ಈ ಕೆಲವು ಶಕ್ತಿಗಳು ಜನತಾ ಪಕ್ಷಕ್ಕೆ ವಿರುದ್ಧವಾಗಿ ಸಹಾಯ ಮಾಡಿದಂಥ ಮತ್ತು ಸಹಾಯ ಮಾಡಿದಂಥ ಘಟನೆಗಳಿವೆ. ಇದನ್ನು ಕೇವಲ ರಾಜಕೀಯಕ್ಕೋಸ್ಕರವಾಗಿ ಹೇಳುತ್ತಿಲ್ಲ. ಇದು ನಿಜವಾಗಿ ನಡೆದಂಥ ಈಗಲೂ ಸಂಗತಿ. ಸಹ ಇಂತಹ ಸಹಕಾರ ಸಂಘಗಳು ಮತ್ತು ನ್ಯಾಯಬೆಲೆ ಅಂಗಡಿಗಳು ಈ ರಾಜ್ಯದಲ್ಲಿ ನೂರಾರು ಇವೆ. ಸರ್ಕಾರದಿಂದ ಸಿಗುವಂತಹ ಎಲ್ಲಾ ಆಹಾರಧಾನ್ಯಗಳನ್ನು ಕುಟುಂಬದ ಸದಸ್ಯರೇ ಉಪಯೋಗಿಸಿಕೊಂಡು ಸಾರ್ವಜನಿಕರನ್ನು .....

ಶ್ರೀ ಜಿ.ಕೆ. ತಕ್ಕೇದ್.—ಜನತಾ ಪಕ್ಷದ ಸರ್ಕಾರ ರೈತರನ್ನು ನಾಶ ಮಾಡಲು ಹೊರಟಿತ್ತು. ಈ ಕಾರಣದಿಂದಲೇ ತಾವು ಚುನಾವಣೆಯಲ್ಲಿ ಕೆಳಗೆ ಬಿದ್ದಿರಿ

ಶ್ರೀ ಎಚ್. ಗಂಗಾಧರನ್.— ರೈತರನ್ನು ನಾವು ನಾಶ ಮಾಡುವುದಿಲ್ಲ. ಈ ಕೆಲಸವನ್ನು ಯಾರು ಮಾಡುತ್ತಾರೆಂಬುದು ನನಗೆ ಗೊತ್ತಿದೆ. ನಿಮಗೆ ನೇಗಿಲು ಹಿಡಿದು ಗೊತ್ತಿಲ್ಲ. ಆದರೂ ರೈತರ ಬಗ್ಗೆ ಹೇಳುತ್ತೀರಿ ರೈತರಿಗೆ ನ್ಯಾಯವಾದ ಬೆಲೆಸಿಗಬೇಕೆಂದು ನಾವು ಮೊದಲಿನಿಂದಲೂ ವಾದ ಮಾಡುತ್ತಿದ್ದೇವೆ. ನಿಮ್ಮ ಒಂದು ಅಧಿಕಾರದಲ್ಲಿ ರೈತರು ಸ್ವರ್ಗಸುಖ ಅನುಭವಿಸುತ್ತಿದ್ದಾರೆಂದು ತಾವು ತಿಳಿದಿರಬಹುದು. ಆದರೆ ರೈತರ ಸ್ಥಿತಿ ಏನಾಗಿದೆ ಎಂಬುದನ್ನು ತಾವು ಹಳ್ಳಿಗಳಿಗೆ ಹೋಗಿ

ನೋಡಿದರೆ ತಿಳಿಯುತ್ತದೆ. ಮುಖ್ಯವಾಗಿ ರಾಜ್ಯಸರ್ಕಾರಕ್ಕೆ ಇರುವಂತಹ ಒಂದು ಅಧಿಕಾರದ ವ್ಯಾಪ್ತಿಯಲ್ಲಿ ಬಡಜನರನ್ನು ಮತ್ತು ದೀನದಲಿತರನ್ನು......

ಶ್ರೀ ಜೆ. ಎಚ್. ಪಟೇಲ್.—ಜನತಾ ಪಾರ್ಟಿ ಚುನಾವಣೆಯಲ್ಲಿ ಬಿದ್ದಿದ್ದರಿಂದಲೇ ನೀವು ಇನ್ನೂ ಉಳಿದುಕೊಂಡಿದ್ದೀರಿ. ಇಲ್ಲದಿದ್ದರೆ ನೀವು ಎಲ್ಲಿ ಇರುತ್ತಿದ್ದಿರಿ.

ಶ್ರೀ ಎಚ್. ಗಂಗಾಧರನ್.—ಆದ್ದರಿಂದ ಸರ್ಕಾರದವರು ಮುಖ್ಯವಾಗಿ ಫ್ಯಾಮಿಲಿ ಕೋ-ಆಪರೇಟಿವ್ ಸೊಸೈಟಿಗಳು ಮತ್ತು ನ್ಯಾಯಬೆಲೆ ಅಂಗಡಿಗಳವರು ಏನು ಅವ್ಯವಹಾರ ನಡೆಸುತ್ತಿದ್ದಾರೆ ಅದನ್ನು ತಪ್ಪಿಸಬೇಕು ಮತ್ತು ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಅಂದರೆ ಹರಿಜನರು ಮತ್ತು ಗಿರಿಜನರು ಹಾಗೂ ಹಿಂದುಳಿದ ವರ್ಗದವರು ವಾಸ ಮಾಡುತ್ತಿರುವ ಕೊಳಚೆ ಪ್ರದೇಶಗಳಲ್ಲಿ ಸಾಕಷ್ಟು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕೆಂದು ಹೇಳುತ್ತೇನೆ. ಈಗ ತಾವು ಇಂತಹ ಪ್ರದೇಶಗಳಿಗೆ ದೂರದ ಜಾಗಗಳಲ್ಲಿ ಡಿಪೋಗಳನ್ನು ತೆರೆದಿರುವುದರಿಂದ ಈ ಜನರು ಅಲ್ಲಿಗೆ ಹೋಗಿ ಕೊಳ್ಳುವುದಕ್ಕಾಗುವುದಿಲ್ಲ. ಮತ್ತೊಂದು ತೊಂದರೆ ಏನೆಂದರೆ, ಈ ಅಂಗಡಿಗಳನ್ನು ಬೆಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆಯವರೆಗೆ ತೆರೆದು ನಂತರ ಮುಚ್ಚಿಬಿಡುತ್ತಾರೆ ಈ ಸಮಯದಲ್ಲಿ ಈ ಜನರು ಅಂದರೆ ಗಂಡ ಹೆಂಡತಿ ಮಕ್ಕಳು ಎಲ್ಲರೂ ಕೂಲಿ ಕೆಲಸಕ್ಕೆ ಹೋಗುವುದರಿಂದ ತಮ್ಮ ಭಾಗದ ಆಹಾರಧಾನ್ಯಗಳನ್ನು ಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಈ ಅಂಗಡಿಗಳವರು ಆಹಾರಧಾನ್ಯವನ್ನು ಹಂಚದಿದ್ದರೂ ಸಹ ತಮ್ಮಲ್ಲಿರುವ ಬೋಗಸ್ ಕಾರ್ಡುಗಳಲ್ಲಿ ವಿತರಣೆ ಮಾಡಲಾಗಿದೆ ಎಂದು ಲೆಕ್ಕ ಬರೆದು ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಲೆಕ್ಕವನ್ನು ಒಪ್ಪಿಸುತ್ತಿದ್ದಾರೆ. ಈ ಅನ್ಯಾಯವನ್ನು ತಾವು ಮೊದಲು ತಪ್ಪಿಸಬೇಕು ಮತ್ತು ಕೊನೆಯಪಕ್ಷ ಶೇಕಡಾ ೨೫ರಷ್ಟು ಡಿಪೋಗಳನ್ನಾದರೂ ಈ ಜನರು ವಾಸ ಮಾಡುವ ಜಾಗದಲ್ಲಿಯೇ ತೆರೆಯಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಇಲ್ಲಿಯವರೆಗೆ ನಾನು ಕೊಟ್ಟ ಸಲಹೆಗಳನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆಯಾದರೂ ಸಾರ್ವಜನಿಕರಿಗೆ ಒಳ್ಳೆಯದಾಗುವಂತೆ ನೋಡಿಕೊಳ್ಳಬೇಕೆಂದು ಮತ್ತೊಮ್ಮೆ ಕೇಳಿಕೊಂಡು ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಪು ಸಂಜೀವಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಆಹಾರ ಮತ್ತು ನಾಗರೀಕ ಇಲಾಖಾ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿರುವ ನಾಲ್ಕು ಕೋಟಿ ಜನಸಂಖ್ಯೆಗೂ ಮತ್ತು ಈ ಇಲಾಖೆಗೂ ನೇರವಾದಂಥ ಸಂಪರ್ಕವಿದೆ. ರೈತರು ಬೆಳೆದ ಆಹಾರ ಧಾನ್ಯವನ್ನು ಕೊಂಡು ಜನಸಾಮಾನ್ಯರಿಗೆ ಅದನ್ನು ಹಂಚುವ ಕೆಲಸ ಈ ಇಲಾಖೆಯಿಂದ ನಡೆಯುತ್ತಿದೆ. ಈ ಇಲಾಖೆ ಮೂಲಕ ರೈತರಿಂದ ಕೊಂಡ ಆಹಾರವನ್ನು ದಾಸ್ತಾನು ಮಾಡುವುದು ನಂತರ ಅದನ್ನು ಎಲ್ಲ ಕಡೆಗೂ ಸರಬರಾಜು ಮಾಡುವುದು ಹೀಗೆ ಎರಡು ರೀತಿಯಿಂದ ಕೆಲಸವಾಗುತ್ತಿದೆ. ಈ ಕರ್ನಾಟಕ ಲೆವಿ ಆಜ್ಞೆ ಆದೇಶದ ಮೇರೆಗೆ ರೈತರ ಕಡೆಯಿಂದ ಲೆವಿ ಭತ್ತವನ್ನು ಸಂಗ್ರಹ ಮಾಡಲಾಗುತ್ತದೆ. ಇದಕ್ಕೆ ಸರ್ಕಾರದವರು ಬೆಂಬಲ ಬೆಲೆ ಕೊಡುವುದು ನಮ್ಮ ಜಿಲ್ಲೆಗೆ ಸಂಬಂಧಪಡದಿದ್ದರೂ ಸಹ ಶಿವಮೊಗ್ಗ, ಭದ್ರಾವತಿ, ಮಂಡ್ಯ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಸುಗ್ಗಿಯ ಕಾಲದಲ್ಲಿ ಅಂದರೆ ಬೆಲೆ ಕಡಿಮೆ ಆದಾಗ ಬೆಂಬಲ ಬೆಲೆ ಕೊಡುವುದರ ಮೂಲಕ ಸಂಗ್ರಹ ಮಾಡುತ್ತಿದ್ದಾರೆ. ಈ ಲೆವಿ ಪದ್ಧತಿಯನ್ನು ಕೇಂದ್ರ ಸರ್ಕಾರದ ಒಂದು ಆದೇಶದ ಮೇರೆಗೆ ೧೯೮೦ನೇ ಇಸವಿಯಲ್ಲಿ ಬದಲಾವಣೆ ಮಾಡಿ ಮಿಲ್-ಪಾಯಿಂಟ್‌ನಲ್ಲಿ ಭತ್ತ ವಸೂಲಿ ಮಾಡುವ ಕ್ರಮವನ್ನು ಸರ್ಕಾರ ಜಾರಿಗೆ ತಂದಿದೆ. ಈ ಒಂದು ಪದ್ಧತಿಯಿಂದ ಕಳೆದ ಒಂದು ವರ್ಷದಿಂದ ರೈತರಿಗೆ ಆಗುತ್ತಿರುವ ಸಂಕಷ್ಟಗಳನ್ನು ನಾವು ಇಲ್ಲಿ ಅನೇಕ ಸಲ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮೊನ್ನೆ ಇದೇ ಪ್ರಶ್ನೆ ಇಲ್ಲಿ ಬಂದಾಗ ರೈತರು ತಮ್ಮ ಸ್ವಂತ ಉಪಯೋಗಕ್ಕೆ ೨ ಕ್ವಿಂಟಾಲ್‌ಗೆ ಬದಲು ೫ ಕ್ವಿಂಟಾಲ್‌ವರೆಗೆ ಮಿಲ್ ಮಾಡಿಸಲು ತೆಗೆದುಕೊಂಡು ಹೋಗಲು ರಿಯಾಯಿತಿ ಕೊಟ್ಟಿದೆ ಎಂದು ಹೇಳಿದರು. ಮಿಲ್-ಪಾಯಿಂಟ್‌ಗೆ ಬದಲು ಮೊದಲಿನ ರೀತಿಯಲ್ಲಿಯೇ ರೈತರಿಂದ ನೇರವಾಗಿ ಲೆವಿ ವಸೂಲಿ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ, ಏಕೆಂದರೆ ಮಿಲ್-ಪಾಯಿಂಟ್‌ನಲ್ಲಿ ಲೆವಿಯನ್ನು ಮಿಲ್‌ನ ಮಾಲೀಕರು ತಮ್ಮ ಕೈಯಿಂದ ಏನೂ ಕೊಡುವುದಿಲ್ಲ. ಇವನ್ನು ಅವರು ರೈತರ ತಲೆ ಮೇಲೆ ಹಾಕುತ್ತಾರೆ ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ಹಾವಳಿ ಇದೆ. ೨ ಕ್ವಿಂಟಾಲ್ ಭತ್ತ ತೆಗೆದು

ಕೊಂಡು ಹೋಗಿ ಮಿಲ್ ಮಾಡಿಸುವುದೂ ಸಹ ಕಷ್ಟವಾಗಿದೆ. ಈ ಪದ್ಧತಿಯಿಂದ ಸರ್ಕಾರಕ್ಕೂ ಪ್ರಯೋಜನವಿಲ್ಲ ಮತ್ತು ರೈತರಿಗೂ ಅನುಕೂಲವಿಲ್ಲ ಎಂಬಂತಾಗಿದೆ. ಮೊದಲಿನ ಪದ್ಧತಿ ಪ್ರಕಾರ ಸರ್ಕಾರದ ಗುರಿಯಂತೆ ಶೇಕಡಾ ನೂರರಷ್ಟು ಲೆವಿ ವಸೂಲಿಯಾಗುತ್ತಿತ್ತು. ಆದರೆ ಈಗಿನ ಪದ್ಧತಿಯಂತೆ ಶೇಕಡಾ ೭೫ ರಿಂದ ೮೦ರಷ್ಟು ಸಹ ಲೆವಿ ವಸೂಲಿಯಾಗಿಲ್ಲ. ಆದ್ದರಿಂದ ಈಗಲಾದರೂ ತಾವು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಮೊದಲಿನ ಪದ್ಧತಿಯ ಪ್ರಕಾರ ಲೆವಿ ವಸೂಲಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಒಟ್ಟಿನಲ್ಲಿ ಇದು ಸರ್ಕಾರಕ್ಕೆ ಬಿಟ್ಟಿದ್ದು.

ಇನ್ನು ರಾಜ್ಯ ಮಟ್ಟದಲ್ಲಿ ಕೆ.ಎಫ್.ಸಿ.ಎಸ್. ಕಾರ್ಪೊರೇಷನ್ ಲೆವಿ ವಸೂಲಿ ಮಾಡುವ ಏಜೆಂಟ್ ಆಗಿ ಮತ್ತು ಟಿ.ಎ.ಪಿ.ಎಂ ಎಸ್.ನವರು ತಾಲ್ಲೂಕ್ ಮಟ್ಟದಲ್ಲಿ ಲೆವಿ ಸಂಗ್ರಹ ಮಾಡುವ ಸಬ್-ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಇದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ನಾನೂ ಸಹ ಈ ಟಿ.ಎ.ಪಿ.ಎಂ.ಎಸ್.ನಲ್ಲಿ ಕೆಲಸ ಮಾಡಿದ ಒಂದು ಅನುಭವದಿಂದ ಹೇಳಬೇಕೆಂದರೆ, ಮಳೆಗಾಲದ ಸಮಯದಲ್ಲಿ ಭತ್ತಕ್ಕೆ ಶೀತ ಬರುತ್ತದೆಂಬ ಕಾರಣದಿಂದ ಅರ್ಧ ಪರ್ಸೆಂಟ್ ಡ್ರೈಯೇಜ್ ಕೊಡುವ ಒಂದು ಪದ್ಧತಿ ಸರ್ಕಾರದಲ್ಲಿ ಇದ್ದರೂ ಸಹ ನಮ್ಮ ಜಿಲ್ಲೆಯಲ್ಲಿ ಚಂಡಿ ಭತ್ತಕ್ಕೆ ಮತ್ತು ಕೊಟ್ಟಿಗೆ ಭತ್ತಕ್ಕೆ ಈ ಒಂದು ರಿಯಾಯಿತಿ ಸಿಕ್ಕದ ಕಾರಣ ನಮಗೆ ಅನ್ಯಾಯವಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಲೆವಿ ಭತ್ತ ವಸೂಲಿ ಮಾಡುವಾಗ ಈ ಒಂದು ಅನುಕೂಲ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಸಬ್-ಏಜೆನ್ಸಿಯನ್ನು ಫಿಕ್ಸ್ ಮಾಡುವಾಗ ೬ ತಿಂಗಳ ಒಂದು ಲೆಕ್ಕಾಚಾರ ಹಾಕಿ ಕಾಸ್ಟ್ ಷೀಟ್ ತಯಾರು ಮಾಡುತ್ತಾರೆ. ಆದರೆ ಸಬ್-ಏಜೆನ್ಸಿಗಳು ಸಂಗ್ರಹ ಮಾಡಿದ ಭತ್ತವನ್ನು ೬ ತಿಂಗಳೊಳಗಾಗಿ ವಿಲೇವಾರಿ ಮಾಡದೆ ಒಂದು ವರ್ಷ ಇಲ್ಲವೇ ಒಂದೂವರೆ ವರ್ಷದವರೆಗೆ ನಿಧಾನ ಮಾಡುತ್ತಾರೆ. ಇದರಿಂದ ಭತ್ತದ ಮೇಲೆ ಹಾಕಿದ ಬಂಡವಾಳಕ್ಕೆ ಬಡ್ಡಿ ಏನಾಯಿತು ಮತ್ತು ಗೋಡೌನ್‌ನ ಬಾಡಿಗೆ ಏನಾಯಿತು ಎಂಬುದನ್ನು ತಾವು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಇದೇ ಕಾರಣದಿಂದ ಎಷ್ಟೋ ಸೊಸೈಟಿಗಳಿಗೆ ನಷ್ಟವಾಗಿದೆ. ಭತ್ತವನ್ನು ಬಹಳ ಕಾಲ ಸಂಗ್ರಹಿಸಿಟ್ಟರೆ ಷಾರ್ಟೇಜ್ ಸಹ ಬರುತ್ತದೆ. ಈ ರೀತಿ ಷಾರ್ಟೇಜ್ ಬಂದಾಗ ಅವರ ಒಂದು ನಷ್ಟವನ್ನು ಸರ್ಕಾರದವರು ತುಂಬಿ ಕೊಟ್ಟರೆ ಸೊಸೈಟಿಯವರು ತಿಂದು ಹಾಕಿದ್ದಾರೆಂಬ ಅಪವಾದ ಬರುವುದಿಲ್ಲ.

ಇನ್ನು ಲೆಕ್ಕಾಚಾರದ ಬಗ್ಗೆ ಹೇಳಬೇಕಾದರೆ ಟಿಎಪಿಸಿಎಂ.ನಲ್ಲಿ ಮತ್ತು ಕೆಎಸ್‌ಎಫ್‌ಸಿ.ನಲ್ಲಿ ಲೆಕ್ಕಾಚಾರ ಯಾವುದೂ ಸರಿಯಾಗಿ ಫೈನಲ್ ಆಗಿಲ್ಲಾ. ಇದರ ಲೆಕ್ಕಾಚಾರವೆಲ್ಲಾ ಅಮಾನತ್‌ನಲ್ಲಿ ಬರುತ್ತಾ ಇದೆ. ಇದನ್ನು ಸರಿಯಾಗಿ ಫೈನಲ್ ಮಾಡದೇ ಹೋದರೆ ಮುಂದೆ ಕಷ್ಟ ಬರುತ್ತದೆ. ಅದನ್ನು ಈಗಲೇ ಸರಿ ಮಾಡುವುದಕ್ಕೆ ಪ್ರಯತ್ನ ಮಾಡಿ: ಹಾಗೆಯೇ ಸಹಕಾರ ಸೊಸೈಟಿ ಆಡಿಟ್ ಕೂಡ ಕಾಲ ಕಾಲಕ್ಕೆ ಆಗದೆ ಹೋದರೆ ಮುಂದೆ ಬಹಳಷ್ಟು ತೊಂದರೆಯಾಗುತ್ತದೆ. ವಂಚನೆಯಾಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇವೆಲ್ಲದರ ಕಡೆಯೂ ಲೆಕ್ಕಾಚಾರಗಳನ್ನು ತಡ ಮಾಡದೆ ಬೇಗನೆ ಫೈನಲ್ ಮಾಡಬೇಕೆಂದು ತಾವು ಅವರಿಗೆಲ್ಲಾ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಸೊಸೈಟಿಗಳಲ್ಲಿ ಸ್ಟೋರೇಜ್ ಮಾಡುವ ಭತ್ತ ಮತ್ತು ಅಕ್ಕಿ ಏನು ಇದೆ ಅದನ್ನು ರಿಲೀಸ್ ಮಾಡುವಾಗ ನೋಡಿದರೆ ತುಂಬಾ ಕೆಟ್ಟುಹೋಗಿರುತ್ತದೆ. ಏತಕ್ಕೆಂದರೆ ಟಿಎಪಿಸಿಎಂ ರವರು ಖಾಸಗೀ ವ್ಯಕ್ತಿಗಳಿಗೆ ಮಿಲ್ ಮಾಡುವುದಕ್ಕೆ ಕೊಡುವಾಗ ಚಂಡಿ ಭತ್ತವನ್ನು ಕೊಡುವುದರಿಂದ ಸರಿಯಾಗಿ ಅಕ್ಕಿಯಾಗುವುದಿಲ್ಲ. ಏತಕ್ಕೆಂದರೆ ಮಳೆಗಾಲದಲ್ಲಿ ಈ ಭತ್ತವನ್ನು ಸರಿಯಾಗಿ ಬೇಯಿಸಿರುವುದಿಲ್ಲ. ಆದುದರಿಂದ ಅದನ್ನು ಮಿಲ್‌ಗೆ ಕೊಡುವಾಗ ಬಹಳಷ್ಟು ನಷ್ಟವಾಗುತ್ತದೆ. ಇನ್ನು ಮೇಲಾದರೂ ಕೂಡ ಜೂನ್ ಬರುವುದರೊಳಗೆ ಅದರಲ್ಲೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಟಿಎಪಿಸಿಎಂನಲ್ಲಾಗಲಿ ಅಥವಾ ಕರ್ನಾಟಕ ಸ್ಟೇಟ್ ಫುಡ್ ಕಾರ್ಪೊರೇಷನ್ ಆಗಲಿ ಇವರು ಜೂನ್ ತಿಂಗಳೊಳಗೆ ಮಿಲ್‌ಗೆ ಕೊಟ್ಟು ಗಟ್ಟಿ ಅಕ್ಕಿ ಮಾಡುವ ಹಾಗೆ ಮಾಡಿ ಎಲ್ಲರಿಗೂ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಕ್ವಾಲಿಟಿ ಕಂಟ್ರೋಲ್ ಬಗ್ಗೆ ಹೇಳಬೇಕಾದರೆ ಇದು ಬಹಳ ಪ್ರಾಮುಖ್ಯವಾದುದು, ನಾನು ಹೋದ ವರ್ಷ ಈ ಸದನದಲ್ಲಿ ಇದರ ವಿಚಾರವಾಗಿ ಹೇಳಿದ್ದೆ. ಅದರ ಮೇಲೆ ಮಾನ್ಯ ಮಂತ್ರಿಗಳು ಗಮನ ಹರಿಸಿದ್ದುದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಸ್ವಲ್ಪ ಮಟ್ಟಿಗೆ ಕ್ವಾಲಿಟಿ ಕಂಟ್ರೋಲ್ ಆಗಿದೆ.

ಸಾಮಾನ್ಯವಾಗಿ ಈ ಚಡಿ ಭತ್ತವನ್ನು ಲೆವಿಗೆ ತೆಗೆದುಕೊಂಡು ಹೋದರೆ ಅವರು ೧೦೦ ಕೆಜಿ ಭತ್ತಕ್ಕೆ ಆ ಒದ್ದೆ ಭತ್ತಕ್ಕೆ ೭೬ ಪರ್ಸೆಂಟ್ ನಂತೆ ಅಕ್ಕಿ ಕೊಡುತ್ತಾರೆ. ಕೆಲವು ಸಂದರ್ಭದಲ್ಲಿ ಅದು ೭೦ ಪರ್ಸೆಂಟ್ ಸಹ ಬರುತ್ತದೆ ಇತರ ಕಡೆಗಳಲ್ಲಿ ಈ ಕ್ವಾಲಿಟಿ ಕಂಟ್ರೋಲ್ ಅನ್ನು ಇನ್ನೂ ಒಂದು ಒಳ್ಳೆಯ ಸ್ಥಿತಿಗೆ ತಂದಿಲ್ಲ. ನಾನು ಡಿಎಲ್‌ಸಿ ಕಮಿಟಿಯಲ್ಲೂ ಸಹ ಹೋಗಿ ಸ್ಯಾಂಪಲ್ ತೋರಿಸಿದ್ದೇನೆ. ಆ ಚಡಿ ಭತ್ತವನ್ನು ಅಂದರೆ ಒದ್ದೆ ಭತ್ತವನ್ನು ಅಕ್ಕಿ ಮಾಡಿದರೆ ೨-೩ ದಿವಸವಾದ ನಂತರ ಅದು ಉಂಡೆ ಬಂದು ನಂತರ ವಾಸನೆಗೆ ಶುರುವಾಗುತ್ತದೆ. ಇದನು ಗ್ರಾಮಾಂತರ ಪ್ರದೇಶಕ್ಕೆ ಕೊಡುತ್ತಾರೆ, ಅಲ್ಲಿ ಜನಗಳು ಇದನ್ನು ಉಪಯೋಗಿಸಿದರೆ ಏನಾಗಬಹುದು ತಿಳಿದುಕೊಳ್ಳಿ ೩-೪ ದಿವಸ ಬಿಟ್ಟು ಅದನ್ನು ನೋಡಿದರೆ ಅದರಲ್ಲಿ ನೀರು ಇರುತ್ತದೆ. ಅದರಲ್ಲಿರುವ ಶಕ್ತಿ ಕಡಿಮೆಯಾಗುತ್ತದೆ. ಅದರಿಂದ ಇದನ್ನು ಕೆಲವು ಜನರು ತೆಗೆದುಕೊಂಡು ಹೋಗಿ ಮಾರುವುದಕ್ಕೆ ಹೆದರುತ್ತಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಹೇಳಿದ ಮೇಲೆ ಈಗ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಇಷ್ಟು ದಿವಸದವರೆಗೂ ಅದರ ಬಗ್ಗೆ ಕಂಪ್ಲೇಂಟ್ ಏನೂ ಬಂದಿಲ್ಲಾ. ಈ ಅಕ್ಕಿಯನ್ನು ಉಪಯೋಗಿಸಿದರೆ ಜನರ ಆರೋಗ್ಯವೂ ಕೆಟ್ಟು ಹೋಗುತ್ತದೆ. ಅಲ್ಲದೆ ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆ ಆದುದರಿಂದ ಈ ಬಗ್ಗೆ ಇನ್ನಷ್ಟು ಎಚ್ಚರಿಕೆ ವಹಿಸಿ ಈ ಕ್ವಾಲಿಟಿ ಕಂಟ್ರೋಲ್ ಅನ್ನು ಇನ್ನೂ ಉತ್ತಮ ಪಡಿಸಬೇಕು ಎಂದು ಹೇಳುತ್ತೇನೆ. ಇದನ್ನು ಏನಾದರೂ ಸಂಘ ಸಂಸ್ಥೆಗಳಿಗೆ ಕೊಟ್ಟರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದರಿಂದ ಅಂಥಾವರನ್ನು ನೋಡಿ ತಡೆಯುವಂತೆ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಬೆಂಬಲದ ಬೆಲೆ ವಿಚಾರವಾಗಿ ಹೇಳಬೇಕಾದರೆ, ನಮ್ಮ ಜಿಲ್ಲೆಯಲ್ಲಿ ಕುಂದಾಪುರದಲ್ಲಿ ಕ್ವಿಂಟಾಲ್ ಒಂದಕ್ಕೆ ಭತ್ತ ೧೨೫ ರೂಪಾಯಿಯಂತೆ ಸಿಕ್ಕುತ್ತದೆ. ಆದರೆ ಇವರು ಬೆಳೆಯಬೇಕಾದರೆ ಅದರ ಖರ್ಚು ನೋಡಿದರೆ ಬಹಳ ಜಾಸ್ತಿಯಾಗುತ್ತದೆ. ಶಿವಮೊಗ್ಗ ಮತ್ತು ಭದ್ರಾವತಿ ೧೦೦ಕ್ಕೆ ೯೦ ಭಾಗ ಬೆಳೆಯುತ್ತಾರೆ. ನಮ್ಮ ಜಿಲ್ಲೆಯಲ್ಲಿ ಎರಡನೇ ಕಂತಿನಲ್ಲಿ ೧೪೫೦ ಕ್ವಿಂಟಾಲ್ ಭತ್ತವನ್ನು ೧೨೫ ರೂಪಾಯಿನಂತೆ ಕೇಳಿದ್ದಾರೆ. ಮೊನ್ನೆಯೂ ಕೂಡ ನಾನು ಹೋಗಿ ವಿಚಾರಿಸಿದಾಗ ಇನ್ನೂ ಆರ್ಡರ್ ಉಂಟು ಅಂತ ಹೇಳಿದರು. ತಸೀಲ್ದಾರರೇ ಅಲ್ಲಿಗೆ ಹೋಗಿ ವಸೂಲ್ಮಾಡುತ್ತಿದ್ದಾರೆ, ಪರ್ಮಿಟ್ ಮುಖಾಂತರ ಬೇರೆ ಕಡೆಗೆ ಭತ್ತವನ್ನು ಕೊಡುವುದಕ್ಕೆ ನಮ್ಮಲ್ಲಿ ಇನ್ನೂ ಭತ್ತ ಬೇಕಾದಷ್ಟು ಇದೆ ಈ ಮಧ್ಯವರ್ತಿ ಜನಗಳು ಇದ್ದಾರಲ್ಲಾ ಸಾಹುಕಾರರು ಇವರಿಗೆ ಕೊಡದೆ ತಸೀಲ್ದಾರರಿಗೇನೇ ಭತ್ತವನ್ನು ಕೊಡುತ್ತಿದ್ದಾರೆ. ಈ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ನಮ್ಮಲ್ಲಿ ಬೇಕಾದಷ್ಟು ಭತ್ತ ಇರುವುದರಿಂದ ನಾವೇ ಓಪನ್ ಮಾರ್ಕೆಟ್‌ಗೆ ೧೩೫ ರೂಪಾಯಿಯಂತೆ ಕೊಡುವುದರಿಂದ ದಯ ಬಿಟ್ಟು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಲೆವಿ ಮಾಡಕೂಡದು ಎಂದು ಕೇಳಿಕೊಳ್ಳುತ್ತೇನೆ. ಇವಿಷ್ಟೂ ಸಂಗ್ರಹಣೆ ಹಾಗೂ ಸರಬರಾಜು ಬಗ್ಗೆ ಆಯಿತು.

ಇನ್ನು ಇವರು ರೇಷನ್ ಷಾಪ್‌ಗೆ ಸರಬರಾಜು ಮಾಡುವ ವಿಚಾರದಲ್ಲಿ ಹೇಳಬೇಕಾಗಿದೆ. ಇವರ ಒಂದು ಅಂಕಿ ಅಂಶದ ಪ್ರಕಾರ ಒಟ್ಟು ಖುಷನ್ ಷಾಪ್ಸ್ ೧೪೨೩೦ ಇದೆ. ಇದರಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಇರುವುದು ೬೧,೯೪೩೮೯ ಇತರರಿಗೆ ಕೊಟ್ಟಿರುವುದು ೩,೭೮,೬೨೮ ಇದ್ದಾರೆ. ನಮ್ಮಲ್ಲಿ ರೇಷನ್ ಷಾಪ್ಸ್ ಏನು ಇದೆ ಇದರ ಒಂದು ಗುಣಮಟ್ಟ ಯಾವ ರೀತಿ ಇದೆ ಎನ್ನುವುದನ್ನು ಮಾನ್ಯ ಗಂಗಾಧರರವರು ಹೇಳಿದ್ದಾರೆ. ಹಾಗೂ ಇವರು ಯಾವ ರೀತಿ ಜನಗಳಿಗೆ ಕೊಡುತ್ತಿದ್ದಾರೆ ಅದ್ನುವ ಮಾತನ್ನು ಹೇಳಿದ್ದಾರೆ. ಈ ತರಹ ಒಂದು ಅವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಾ ಇದೆ, ರೇಷನ್ ಆರ್ಟಿಕಲ್ ತಂದಾಗ ಸೊಸೈಟಿ ಹೆಸರಿನಲ್ಲಿ ಬಿಲ್ ಹಾಕಿದರೆ ಯಾವುದೇ ಹೆಸರಿನಲ್ಲಿ ಬಿಲ್ ಹಾಕಿ ಮಾರಿ ಕೊಳ್ಳುತ್ತಾರೆ. ಸಕ್ಕರೆ ಧಾರಣೆ ೯-೧೦ ರೂಪಾಯಿ ಇದ್ದಾಗ ಇವರು ಯಾವ ರೀತಿ ಬಿಲ್ ಹಾಕುತ್ತಿದ್ದರು ಅನ್ನುವುದನ್ನು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ ಆದರೆ ನಮ್ಮ ಕುಂದಾಪುರದಲ್ಲಿ ಮಾತ್ರ ನಾವು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೆವು. ನಮ್ಮ ಕುಂದಾಪುರಕ್ಕೆ ಇವರು ಅಕ್ಕಿ ಮತ್ತು ಸಕ್ಕರೆಯನ್ನು ಏನು ಅಲಾಟ್ ಮಾಡುತ್ತಿದ್ದರೋ ಅದರಂತೆ ಹಂಚಿದ್ದೇವೆ. ಪ್ರತಿ ಟೌನ್ ಪಂಚಾಯಿತಿ ಹಾಗೂ ವಿಲೇಜ್ ಅಕೌಂಟೆಂಟ್‌ರವರಿಂದ ಲಿಸ್ಟ್ ತರಿಸಿಕೊಂಡು ಆ ಪ್ರಕಾರ ಹಂಚಿಕೆ ಮಾಡುತ್ತಿದ್ದೆವು. ನಾವು ಆ ಜನಗಳಿಗೆ ಮತ್ತೊಂದು ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ಅದೇನೆಂದರೆ ಕುಂದಾಪುರದ ಟಿಎಪಿಸಿಎಂ. ಸೊಸೈಟಿಯಲ್ಲಿ ಡೋರ್ ಟೂ ಡೋರ್ ಡಿಲಿವರಿ ಕೊಡುವ ಹಾಗೆ ಒಂದು ವ್ಯವಸ್ಥೆ ಮಾಡಿದ್ದೇವೆ ೨-೩ ವರ್ಷ ಚೆನ್ನಾಗಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿತು, ಹಾಗೆ ಮಾಡಿದರೆ ಮಧ್ಯವರ್ತಿ ಜನಗಳಿಂದ ಏನು ಅನಾನುಕೂಲವಾಗುತ್ತಿತ್ತೋ ಅದನ್ನು ತಡೆಗಟ್ಟಬಹುದು ಎಂದು ಹೇಳುತ್ತೇನೆ. ಈ

ರೇಷನ್ ಷಾಪ್‌ನಲ್ಲಿ ಗುಣಮಟ್ಟ ಹಾಗೂ ತೂಕದಲ್ಲಿ ವ್ಯವಸ್ಥಿತವಾಗಿರುವುದನ್ನು ನಾವು ನೋಡಿದ್ದಿಲ್ಲಾ. ಆಗಾಗ್ಗೆ ಇದನ್ನು ಚೆಕ್ ಮಾಡಬೇಕು. ಅದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಇದು ರೆವಿನ್ಯೂ ಹಾಗೂ ಫುಡ್ ಈ ಇಬ್ಬರ ಕಂಟ್ರೋಲ್‌ನಲ್ಲಿ ಇದೆ, ಅವರು ಇದರ ಬಗ್ಗೆ ಆಗಾಗ್ಗೆ ವಿಸಿಟ್ ಮಾಡಿ ಅದರಲ್ಲಿ ಏನು ಕಂಪ್ಲೆಂಟ್ ಇದೆ ಅನ್ನುವುದನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತೇನೆ. ಶ್ರೀಮಾನ್ ರಾಮ್‌ದೇವ್‌ರವರು ಹೇಳಿದ ಹಾಗೆ ಈ ರೇಷನ್ ಆರ್ಟಿಕಲ್ಸ್ ಚೆನ್ನಾಗಿ ಬಡವರಿಗೆ ಸಿಕ್ಕುತ್ತಾ ಇಲ್ಲ ಅನ್ನುವ ಮಾತನ್ನು ಹೇಳಿದರು. ಕಾರಣ ಒಬ್ಬರಿಗೊಬ್ಬರಿಗೆ ಇದರಲ್ಲಿ ಪೈಪೋಟಿ ಇರುವುದರಿಂದ ಅವರಿಗೆ ಸಿಕ್ಕುವುದಿಲ್ಲ ಎಂದು ಹೇಳಿದರು. ರೈತರ ಹಾಗೂ ಕನ್‌ಸೂಮರ್ಸ್ ಇವರ ಒಂದು ಪೈಪೋಟಿಯಲ್ಲಿ ನಷ್ಟವಾಗುವುದು ನೋಡಿದರೆ ಕಾರ್ಪೋರೇಷನ್ನಿಗೆ ಈ ಬಗ್ಗೆ ಎರಡು ಅಪವಾದ ಇದೆ ಒಂದು ಕಡೆ ರೈತ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಇನ್ನೊಂದು ಕಡೆ ನೋಡಿದರೆ ಕನ್‌ಸೂಮರ್ಸ್ ಹೇಳುತ್ತಾರೆ, ನಾವು ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ, ಇದರಲ್ಲಿ ಪ್ರಾಫಿಟ್ ಮಾರ್ಜಿನ್ ಬೆಲೆ ಜಾಸ್ತಿ ಉಂಟು ಅನ್ನುವ ಆಪಾದನೆ, ಆದುದರಿಂದ ತಾವು ಈ ಬಗ್ಗೆ ಗಮನ ಹರಿಸಿ ಇಬ್ಬರಿಗೂ ಅನುಕೂಲವಾಗುವ ರೀತಿಯಲ್ಲಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ಹೇಳಬಯಸುತ್ತೇನೆ.

ಇನ್ನೊಂದು ಪ್ರಮುಖ್ಯವಾದ ವಿಚಾರ ಏನೆಂದರೆ ನಮ್ಮ ಕಾರ್ಪೋರೇಷನ್ನಿನ ಗೋಡೌನ್‌ನಿಂದ ಸಾಮಾನುಗಳನ್ನು ಏನು ಟ್ರಾನ್ಸ್‌ಪೋರ್ಟ್ ಮಾಡುತ್ತಾರೆ ಅದರ ವಿಚಾರ ಸ್ವಲ್ಪ ಹೇಳಬೇಕಾಗಿದೆ, ಈ ಗೌಡೌನ್‌ನಲ್ಲಿ ತಾವು ಏನು ಸಂಗ್ರಹಣೆ ಮಾಡುತ್ತಿರೋ ಅದನ್ನು ಅಲ್ಲಲ್ಲೇ ಡಿಸ್ಟ್ರಿಬ್ಯೂಟ್ ಮಾಡುವ ಹಾಗೆ ಮಾಡಿದರೆ ಟ್ರಾನ್ಸ್‌ಪೋರ್ಟ್ ಛಾರ್ಜ್ ಕಡಿಮೆಯಾಗಿ ಜನಗಳಿಗೂ ಅನುಕೂಲವಾಗುತ್ತದೆ. ಉದಾಹರಣೆಗೆ ಆಯಾಯ ಜಿಲ್ಲೆಯಲ್ಲಿ ಸಂಗ್ರಹಿಸಿದುದನ್ನು ಅಲ್ಲಲ್ಲೇ ಕೊಟ್ಟರೆ ನಿಮಗೆ ಟ್ರಾನ್ಸ್‌ಪೋರ್ಟೆಷನ್ ಬಹಳ ಕಡಿಮೆ ಬೀಳುತ್ತದೆ. ಹಾಗೆ ಮಾಡದೆ ಮಂಗಳೂರು ಜಿಲ್ಲೆಯ ಭತ್ತವನ್ನು ಶಿವಮೊಗ್ಗಾಕ್ಕೆ ಕಳುಹಿಸಿದರೆ ಇದರಿಂದ ಟ್ರಾನ್ಸ್‌ಪೋರ್ಟೇಷನ್‌ಗೆ ಖರ್ಚು ಆಗುವುದಲ್ಲದೆ ಜನಗಳಿಗೂ ಅನುಕೂಲವಾಗುವುದಿಲ್ಲ, ಎಲ್ಲಿ ಸಕ್ಕರೆ ಕಾರ್ಖಾನೆ ಇದೆ ಆ ಜಿಲ್ಲೆಯ ಜನಕ್ಕೆ ಅದನ್ನು ಸರಬರಾಜು ಮಾಡುವುದಿಲ್ಲ. ಅದನ್ನು ಇನ್ನೆಲ್ಲಿಗೋ ಕೊಡುವುದು. ಈ ಒಂದು ಸಾಗಾಣಿಕೆ ಕ್ರಮವನ್ನು ತಾವು ಕಂಟ್ರೋಲ್ ಮಾಡಿದರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ಈ ಸಾಗಟನಿಂದ ಎಷ್ಟು ದುಡ್ಡು ಖರ್ಚಾಗುತ್ತದೆ ಎಂದರೆ ನಾನು ನನ್ನ ತಾಲ್ಲೂಕಿನ ಸೊಸೈಟಿಯಲ್ಲಿ ಪ್ರಸಿಡೆಂಟ್ ಆಗಿದ್ದೆ. ನನಗೆ ಅನುಭವ ಇದೆ, ಅದರಿಂದ ನಾನು ಹೇಳುತ್ತಿದ್ದೇನೆ. ಒಂದು ಲಾರಿ ಲೋಡ್ ತೆಗೆದುಕೊಂಡು ಹೋಗಬೇಕಾದರೆ ಒಂದು, ಒಂದೂವರೆ ಸಾವಿರ ರೂಪಾಯಿ ಕೊಡಬೇಕಾಗುತ್ತದೆ ಅಲ್ಲದೆ ಇವರು ಏನು ಮಾಡುತ್ತಾರೆ ಎಂದರೆ ಪ್ರೈವೇಟ್ ಲಾರಿಯವರಿಗೆ ಇದರ ಸಾಗಾಣಿಕೆಗೆ ೧೦-೧೧ ರೂಪಾಯಿ ಕೊಡುತ್ತೇವೆಂದು ಹೇಳಿ ಅವರ ಹತ್ತಿರ ಬರೆಸಿ ಕೊಂಡರೆ ಅವರಿಗೆ ನ್ಯಾಯವಾಗಿ ಕೊಡುವುದು ನೋಡಿದರೆ ೫-೬ ರೂಪಾಯಿ ಕೊಡುವುದು. ಹೀಗೆ ಮಾಡಿದರೆ ಕಾರ್ಪೋರೇಷನ್ನಿಗೆ ನಷ್ಟವಾಗುವುದಿಲ್ಲವೇ, ಅದನ್ನು ಅವರು ಉಳಿಸಿಕೊಳ್ಳುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ರೇಷನ್ ಷಾಪ್‌ಗಳನ್ನು ಕೊಡಬೇಕಾದರೆ ಸೊಸೈಟಿಯವರಿಗೆ ಕೊಟ್ಟರೆ ಅವರ ಮುಖಾಂತರ ರೇಷನ್ ಸಾಮಾನುಗಳನ್ನು ಮಾರುವುದಾದರೆ ಅಷ್ಟು ಅಪವಾದ ಬರುವುದಿಲ್ಲ. ಅದೇ ಖಾಸಗೀ ವ್ಯಕ್ತಿಗೇನಾದರೂ ಕೊಟ್ಟರೆ ಅಪವಾದ ಬರುತ್ತದೆ ಕನ್‌ಸ್ಯೂಮರ್ಸ್ ಸೊಸೈಟಿಗಳಿಗೆ ರೇಷನ್ ಷಾಪ್ಸ್ ಕೊಡುವ ಹಾಗೆ ಮಾಡಿದರೆ ಒಳ್ಳೆಯದು. ಅದಕ್ಕೆ ಒಂದು ಪಾಲಿಸಿ ಮಾಡಿದರೆ ಒಳ್ಳೆಯದು. ಆದುದರಿಂದ ಹೆಚ್ಚು ಮಟ್ಟಿಗೆ ಸೊಸೈಟಿಗಳಿಗೇನೇ ರೇಷನ್ ಷಾಪ್ಸ್ ಕೊಡಬೇಕೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಕಂಟ್ರೋಲ್ ಬಟ್ಟೆಯನ್ನು ಜನರಿಗೆ ಒದಗಿಸಿಕೊಡುವಂತಾದ್ದು ಬಹಳ ಪ್ರಾಮುಖ್ಯವಾದದ್ದು. ಇತರ ಬಟ್ಟೆಗಳ ಬೆಲೆ ಗಗನಕ್ಕೆ ಏರಿರತಕ್ಕಂಥ ಇಂದಿನ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಆ ಬಡಜನರಿಗೆ ಕಂಟ್ರೋಲ್ ಬಟ್ಟೆಯನ್ನು ಒದಗಿಸಿಕೊಡುವುದರಿಂದ ಅವರಿಗೆ ನಿಜಕ್ಕೂ ಪ್ರಯೋಜನವಾಗುತ್ತದೆ. ಅಲ್ಲೆಲ್ಲಾ ಈಗಾಗಲೇ ಕಂಟ್ರೋಲ್ ಬಟ್ಟೆಯನ್ನು ಮಾರಾಟ ಮಾಡುತ್ತಿದ್ದಾರೆ ಅದರ ಜೊತೆಗೆ ಇನ್ನಷ್ಟು ಹೆಚ್ಚಿನ ರೀತಿಯಲ್ಲಿ ಕಂಟ್ರೋಲ್ ಬಟ್ಟೆಯನ್ನು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ

ಮಂತ್ರಿಯವರು ವ್ಯವಸ್ಥೆ ಮಾಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಸಭಾಧ್ಯಕ್ಷರೇ ಈ ಸಭೆಯ ಮುಂದೆ ಮಂಡಿಸಲ್ಪಟ್ಟಿರತಕ್ಕಂಥ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಬೇಡಿಕೆಗಳ ಬಗ್ಗೆ ನಾನೇನು ಹೆಚ್ಚಿಗೆ ಹೇಳಬೇಕಾದ್ದು ಇಲ್ಲ. ಏಕೆಂದರೆ ನಾನು ಹೇಳಬೇಕಾಗಿರುವುದನ್ನೆಲ್ಲಾ ನಮ್ಮ ಸ್ನೇಹಿತರಾದ ಮಾನ್ಯ ರಾಮಂದೇಸಾರವರೇ ಹೇಳಿದ್ದಾರೆ. ಆದರೂ ಕೂಡ ರೈತರಿಂದ ಲೆವಿ ಭತ್ತ ಸಂಗ್ರಹಣೆ ಮಾಡಿ ಅದನ್ನು ವಿತರಣೆ ಮಾಡತಕ್ಕಂಥ ವ್ಯವಸ್ಥೆ ಏನಿದೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಈ ವಿಚಾರದಲ್ಲಿ ಹೇಳಬೇಕಾದರೆ ಈ ಒಂದು ವ್ಯವಸ್ಥೆ ಅಷ್ಟು ಸಮರ್ಪಕವಾಗಿಲ್ಲ. ಒಂದು ಕಡೆ ರೈತರಿಂದ ಸಂಗ್ರಹಣೆ ಮಾಡತಕ್ಕಂಥಾದರಲ್ಲೂ ಅವ್ಯವಸ್ಥೆ ಇದೆ. ಇನ್ನೊಂದು ಕಡೆ ಅವನ್ನು ವಿತರಣೆ ಮಾಡತಕ್ಕಂಥಾದರಲ್ಲೂ ಕೂಡ ಅವ್ಯವಸ್ಥೆ ಇದೆ. ಒಂದು ಕಡೆ ರೈತರಿಗೆ ತೊಂದರೆಯಾಗುತ್ತಿದೆ. ಇನ್ನೊಂದು ಕಡೆ ನಾಗರೀಕರಿಗೂ ಅನುಕೂಲವಾಗುತ್ತಾ ಇಲ್ಲ. ಒಂದು ಕಡೆ ರೈತರಿಗೆ ತೊಂದರೆಯಾದರೂ ಪರವಾಗಿಲ್ಲ ಎಂದು ತಿಳಿದುಕೊಂಡರೂ ಕೂಡ ಅದನ್ನು ನಾಗರೀಕರಿಗೆ ವಿತರಣೆ ಮಾಡತಕ್ಕಂಥಾದರಲ್ಲಿ ಸುವ್ಯವಸ್ಥೆ ಇದ್ದರೆ, ಅದರಿಂದ ನಾಗರೀಕರಿಗೆ ಅನುಕೂಲವಾದರೆ ರೈತರು ಕಷ್ಟಪಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಈ ವಿತರಣಾ ವ್ಯವಸ್ಥೆ ಕೂಡ ಸರಿಯಿಲ್ಲ. ಅದೆಲ್ಲವನ್ನೂ ರೈತರಿಂದ ಸಂಗ್ರಹಣೆ ಮಾಡಿ ಇವತ್ತು ದೊಡ್ಡ ದೊಡ್ಡ ನಗರಗಳಲ್ಲಿ ವಿತರಣೆ ಮಾಡುತ್ತಿದ್ದಾರೆ. ಸಾಮಾನ್ಯ ಜನರಿಗೆ ಅಥವಾ ಕೂಲಿ ಇಲ್ಲದೇ ಇರತಕ್ಕಂಥ, ಅಥವಾ ಹಣವಿಲ್ಲದೆ ಇರತಕ್ಕಂಥ ಅಥವಾ ಬಹಳ ಕಡಿಮೆ ಕೂಲಿಯಲ್ಲಿ ದುಡಿಯುತಕ್ಕಂಥ ಜನರಿಗೆ ಇದರ ವ್ಯವಸ್ಥೆ ಏನೇನೂ ಇಲ್ಲ. ಸಾಮಾನ್ಯ ಜನರಿಗೆ ಈ ವ್ಯವಸ್ಥೆಯ ಪೂರ್ಣ ಉಪಯೋಗ ಇದೆಯೋ ಎಂದರೆ ಅದು ಏನೇನೂ ಇಲ್ಲ. ಇದರ ಪೂರ್ಣ ಉಪಯೋಗ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವವರಿಗೆ ಹೋಗುತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಮಾಡತಕ್ಕಂಥ ಜನರಿಗೆ ವಿತರಣೆ ಮಾಡುವುದಕ್ಕಾಗಿ ಈ ಲೆವಿ ಭತ್ತವನ್ನು ಸಂಗ್ರಹಣೆ ಮಾಡತಕ್ಕಂಥ ಪದ್ಧತಿಯನ್ನು ಪ್ರಾರಂಭಿಸಿ ಅದರಿಂದ ರೈತರಿಗೆ ಸುಮ್ಮನೆ ತೊಂದರೆಯನ್ನು ಕೊಡುತ್ತಿದ್ದಾರೆ. ಇವತ್ತು ಕಷ್ಟಪಟ್ಟು ಬೆಳೆದಂತಹ ರೈತನಿಗೆ. ಅವನು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಸರ್ಕಾರ ಇವತ್ತು ಆ ರೈತ ಬೆಳೆದಂತಹ ಬೆಳೆಯನ್ನು ಕಡಿಮೆ ಬೆಲೆಗೆ ಕೊಳ್ಳತಕ್ಕಂಥ ವ್ಯವಸ್ಥೆ ಏನಿದೆ ಅದು ಸಂಪೂರ್ಣವಾಗಿ ಹೋಗಬೇಕು. ರೈತನಿಗೆ ಸರಿಯಾದ ಬೆಲೆಯನ್ನು ಕೊಟ್ಟು ಕೊಳ್ಳತಕ್ಕಂಥ ವ್ಯವಸ್ಥೆಯಾಗಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ರೈತನಿಗೆ ಗೊಬ್ಬರದ ಬೆಲೆ ಏರುತ್ತಾ ಇದೆ. ಅದನ್ನು ಇಳಿಸುವ ಬಗ್ಗೆ ಸರ್ಕಾರ ಏನೇನೂ ಯೋಚನೆ ಮಾಡಿಲ್ಲ. ಅಲ್ಲದೇ ಇವತ್ತು ರೈತ ಮನೆ ಕಟ್ಟಲು ಬೇಕಾದಂತಹ ಸಿಮೆಂಟ್ ಆಗಲೀ, ಉಕ್ಕು ಆಗಲೀ, ಮರವಾಗಲೀ. ಅವನು ಉಡುವ ಬಟ್ಟೆಯಾಗಲೀ—ಇದೆಲ್ಲವನ್ನೂ ಕೂಡ ಮಾರ್ಕೆಟ್ ಬೆಲೆಯಲ್ಲೇ ಕೊಳ್ಳಬೇಕು. ಆದರೆ ಅವರು ಬೆಳೆದಂತಹ ಬೆಳೆಯನ್ನು ಸರ್ಕಾರದವರು ಕೇಳುವಂತಹ ಬೆಲೆಗೆ ಕೊಡಬೇಕು. ಇದು ಯಾವ ಲೆಕ್ಕಾಚಾರವೋ ಗೊತ್ತಿಲ್ಲ. ಈ ಲೆಕ್ಕಾಚಾರದಿಂದ ನಾವು ರೈತರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರಿಂದ ರೈತರು ಏನೇನೂ ಉದ್ಧಾರವಾಗುವುದಿಲ್ಲ. ಹೋದಸಲ ...

ಶ್ರೀ ಜೆ. ಹೆಚ್. ಪಟೇಲ್.—ಸರ್ಕಾರದವರು ಯಾವಾಗ ಆ ರೀತಿ ಹೇಳಿದರು ?

ಶ್ರೀ ಪಂಪಾಪತಿ.—ಪ್ರತಿದಿವಸ ಅವರು ಅದನ್ನೇ ಹೇಳುತ್ತಿದ್ದಾರೆ ಇದೇ ಸದನದಲ್ಲಿ ನಾವು ಕೂಡ ಈ ಲೆವಿ ಪದ್ಧತಿಯಿಂದ ರೈತರಿಗೆ ತುಂಬಾ ಅನ್ಯಾಯವಾಗುತ್ತಾ ಇದೆಯೆಂದು ಹೇಳುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಎಂದು ಹೇಳಿದರು. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಲಿಲ್ಲ. ಸ್ವಾಮಿ, ನಾನು ಈ ವರದಿಯಲ್ಲಿ ನೋಡಿದಹಾಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ೬ ಸಾವಿರ ಕ್ವಿಂಟಾಲ್ ಭತ್ತ ಸಂಗ್ರಹಣೆ ಯಾಗಿದೆ ಎಂದು ತೋರಿಸಿದ್ದಾರೆ. ಅದರ ಅರ್ಥ ಏನು ಎಂಬುದು ನನಗೆ ಗೊತ್ತಿಲ್ಲ. ನಮ್ಮ ದಾವಣಗೆರೆ. ಹರಿಹರಗಳಲ್ಲಿ ಯಥೇಚ್ಛವಾಗಿ ಭತ್ತವನ್ನು ಬೆಳೆದಿದ್ದಾರೆ. ನನಗೆ ತಿಳಿದ ಮಟ್ಟಿಗೆ ಈ ಚಿತ್ರದುರ್ಗದಲ್ಲೂ ಹೆಚ್ಚಿನ ರೀತಿಯಲ್ಲಿ ಭತ್ತವನ್ನು ಬೆಳೆದಿದ್ದಾರೆ. ಆದರೆ ಅಲ್ಲಿ ೬ ಸಾವಿರ ಟನ್ ಮಾತ್ರ ಈ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಗ್ರಹಣೆಯಾಗಿದೆ ಇದು ಇನ್ನೂ ಜಾಸ್ತಿಯಾಗಬೇಕಾಗಿತ್ತು. ಇದರಲ್ಲಿ ಏನೋ ಅನ್ಯಾಯವಾಗಿದೆ. ಈ ಮಿಲ್ ಪಾಯಿಂಟ್‌ನಲ್ಲಿ ಸರ್ಕಾರಕ್ಕೆ ಬರತ

ಕ್ಕಂಥ ಭತ್ತ ಏನಿದೆ ಅದು ಸರಿಯಾಗಿ ಬಂದಿಲ್ಲ. ಈ ಮಿಲ್ ಪಾಯಿಂಟ್‌ನಲ್ಲಿ ಲೆವಿ ಸಂಗ್ರಹಣೆ ಮಾಡತಕ್ಕಂಥ ಪದ್ಧತಿ ಏನಿದೆ ಇದರಿಂದ ರೈತರಿಗೆ ಏನೂ ಅನುಕೂಲವಾಗಿಲ್ಲ. ಹಿಂದೆ ಇದ್ದಂತಹ ಪದ್ಧತಿಯ ಪ್ರಕಾರ ೨ ಎಕರೆ ಇದ್ದವರನ್ನು ಬಿಟ್ಟು ಜಾಸ್ತಿ ಎಕರೆ ಭೂಮಿ ಇದ್ದವರಿಗೆ ಲೆವಿ ಹಾಕಿ ಸಂಗ್ರಹಣೆ ಮಾಡುತ್ತಿದ್ದರು. ಆಗ ಹೆಚ್ಚಿನ ರೀತಿಯಲ್ಲಿ ಭತ್ತ ಸಂಗ್ರಹಣೆಯಾಗುತ್ತಿತ್ತು. ರೈತರಿಗೂ ಅನುಕೂಲವಾಗಿತ್ತು. ಆದರೆ ಮಿಲ್ ಪಾಯಿಂಟ್‌ನಲ್ಲಿ ಈ ಲೆವಿಯನ್ನು ಹಾಕಿರುವುದರಿಂದ ಅನೇಕ ರೀತಿಯ ಅವ್ಯವಹಾರಕ್ಕೆ ಅವಕಾಶವಾಗಿದೆ. ಮತ್ತು ಒಂದೆರಡು ಎಕರೆ ಇದ್ದವರಿಗೂ ಇದನ್ನು ಹಾಕಿರುವುದರಿಂದ ಅವರಿಗೂ ತೊಂದರೆಯಾಗಿದೆ. ಅಕ್ಕಿಯ ಬೆಲೆ ಎಲ್ಲಾ ಇವತ್ತು ಹೆಚ್ಚಾಗಿದೆ. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು ಎಂದು ಹೇಳುತ್ತಿದ್ದೇನೆ. ಇನ್ನು ಈ ಬಡಜನರ ಅನುಕೂಲಕ್ಕಾಗಿ ಕಂಟ್ರೋಲ್ ಬಟ್ಟೆಯನ್ನು ಮಾರಾಟ ಮಾಡುತ್ತಿದ್ದಾರೆ ಈ ಕಂಟ್ರೋಲ್ ಬಟ್ಟೆಯನ್ನು ಮಾರಾಟ ಮಾಡತಕ್ಕಂಥಾದ್ದು ಸ್ವಲ್ಪಮಟ್ಟಿಗೆ ಉತ್ತಮವಾದ ಕೆಲಸವಾದರೂ ಕೂಡ ಬಟ್ಟೆಗಳ ಬೆಲೆಗಳು ಮಾತ್ರ ಕಡಿಮೆಯಾಗಿಲ್ಲ. ಸಾಮಾನ್ಯ ಜನರಿಗೆ ವಿತರಣೆ ಮಾಡತಕ್ಕಂಥ ಜನತಾ ಬಟ್ಟೆಯನ್ನು ಕಂಟ್ರೋಲ್ ರೇಟ್‌ನಲ್ಲಿ ಏನು ಕೊಡುತ್ತಿದ್ದಾರೆ ಆ ಬಟ್ಟೆಯನ್ನು ಇನ್ನೂ ಕಡಿಮೆ ಬೆಲೆಯಲ್ಲಿ ಆ ಜನರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮಿಲ್‌ನವರಿಗೆ ಸರ್ಕಾರದವರು ಹೇಳಿದರೆ ಅವರು ಕಂಟ್ರೋಲ್ ಬಟ್ಟೆಯನ್ನು ತಯಾರು ಮಾಡಿ ಕೊಡುತ್ತಾರೆ. ನನಗೆ ತಿಳಿದಮಟ್ಟಿಗೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತಹ ಮಿಲ್‌ಗಳಲ್ಲಿ ಮಾತ್ರ ಕಂಟ್ರೋಲ್ ಬಟ್ಟೆಯನ್ನು ತಯಾರು ಮಾಡುವ ವ್ಯವಸ್ಥೆ ಇದೆ. ಈ ನಮ್ಮ ದಾವಣಗೆರೆ ಕಾಟನ್ ಮಿಲ್‌ನಲ್ಲಿ ಈ ಕಂಟ್ರೋಲ್ ಬಟ್ಟೆಯನ್ನು ತಯಾರು ಮಾಡುವ ವ್ಯವಸ್ಥೆಯಿಲ್ಲ. ಎಲ್ಲಾ ಮಿಲ್‌ನವರಿಗೂ ಕೂಡ ಸರ್ಕಾರದವರು ಈ ಕಂಟ್ರೋಲ್ ಬಟ್ಟೆಯನ್ನು ತಯಾರು ಮಾಡಿ ಕೊಡಿ ಎಂದು ಹೇಳಿದರೆ ಅವರು ತಯಾರು ಮಾಡಿಕೊಡುತ್ತಾರೆ. ಅದನ್ನು ಸಾಮಾನ್ಯ ಜನರಿಗೆ, ಅತಿ ಬಡಜನರಿಗೆ ಕಡಿಮೆ ಬೆಲೆಯಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಎಣ್ಣೆಯ ಬಗ್ಗೆ ನಾನು ಹೇಳಬೇಕಾದ್ದು ಏನೂ ಇಲ್ಲ ನಮ್ಮ ಮಾನ್ಯ ಸ್ನೇಹಿತರೇ ಅದರ ಬಗ್ಗೆ ಸರ್ಕಾರದವರಿಗೆ ಮನದಟ್ಟಾಗುವಂತೆ ಹೇಳಿದ್ದಾರೆ. ಆ ಮೇಲೆ ಸರ್ಕಾರದವರು ರೈತರಿಗೆ ಈ ಗೊಬ್ಬರವನ್ನು ಕಂಟ್ರೋಲ್ ರೇಟ್‌ನಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಅವರಿಗೆ ಸಬ್ಸಿಡಿ ಕೊಟ್ಟು, ಕಡಿಮೆ ರೇಟ್‌ನಲ್ಲಿ ಅವರಿಗೆ ಗೊಬ್ಬರವನ್ನು ಒದಗಿಸಿಕೊಟ್ಟರೆ ಅವರು ಸರ್ಕಾರದವರು ಕೇಳಿದಷ್ಟು ಭತ್ತವನ್ನು ಬೆಳೆದು ಕೊಡುತ್ತಾರೆ. ಸರ್ಕಾರದವರು ಅದನ್ನು ಸಂಗ್ರಹಣೆ ಮಾಡಬಹುದು. ಈ ಭತ್ತವನ್ನು ಸಂಗ್ರಹಣೆ ಮಾಡುವುದಕ್ಕೆ ಗೋಡೌನ್ ಇಲ್ಲ ಎಂದು ಕೆಲವರು ಹೇಳುತ್ತಿದ್ದರು ಈ ಬಗ್ಗೆ ಗೋಡೋನ್‌ಗಳು ಇದ್ದರೂ ಕೂಡ ಮತ್ತೊಂದು ಗೋಡನ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ಹಣ ಹೊಡೆಯುವುದಕ್ಕೆ ಅವಕಾಶವಾಗುವಂತಹ ಒಂದು ವ್ಯವಸ್ಥೆ ನಡೆಯುತ್ತಾ ಇದೆಯೆಂದು ಗೊತ್ತಾಗಿದೆ. ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕು ಮತ್ತು ಆ ರೀತಿ ಆಗದಂತೆ ನೋಡಿಕೊಳ್ಳಬೇಕು. ಗೋಡನ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿರುವುದರಿಂದ ಆ ಹಣ ಸರಿದೂಗಿಸುವುದಕ್ಕೆ ಆ ಪದಾರ್ಥಗಳನ್ನು ಮಾರಾಟ ಮಾಡುವಾಗ ಬೆಲೆಯನ್ನೆಲ್ಲಾ ಹೆಚ್ಚು ಮಾಡುತ್ತಿದ್ದಾರೆ. ಆ ಹೆಚ್ಚಿನ ಬೆಲೆಯೆಲ್ಲಾ ಸಾಮಾನ್ಯ ಜನರ ಮೇಲೆ ಬೀಳುತ್ತಿದೆ. ಆದ್ದರಿಂದ ಇರತಕ್ಕಂಥ ಗೋಡನ ಗಳಲ್ಲಿ ಆಹಾರ ಪದಾರ್ಥಗಳನ್ನು ಸಂಗ್ರಹಣೆ ಮಾಡಬೇಕು ಮತ್ತು ಮಾರಾಟದ ಬೆಲೆಯಲ್ಲಿ ಕಡಿಮೆ ಮಾಡಬೇಕು. ಆ ಮೇಲೆ ನ್ಯಾಯಬೆಲೆ ಅಂಗಡಿಗಳ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೇರೆ ಬೇರೆ ಪಟ್ಟಣ ಪ್ರದೇಶಗಳಲ್ಲಿ ಈ ನ್ಯಾಯಬೆಲೆ ಅಂಗಡಿಗಳನ್ನು ಹೆಚ್ಚಿನ ರೀತಿಯಲ್ಲಿ ತೆಗೆಯುವುದಕ್ಕಿಂತಲೂ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಹೆಚ್ಚಿನ ರೀತಿಯಲ್ಲಿ ತೆರೆದು ಅಲ್ಲಿನ ಜನರಿಗೆ ಹೆಚ್ಚು ಅನುಕೂಲಗಳನ್ನು ಒದಗಿಸಿಕೊಡಬೇಕು. ಅದರಲ್ಲೂ ಕೂಡ ಈ ಬರಗಾಲಪೀಡಿತ ಪ್ರದೇಶಗಳೆಂದು ನಾವೇನು ಹೇಳುತ್ತೇವೆ ಆ ಭಾಗಗಳಲ್ಲಿ ಹೆಚ್ಚಿನ ರೀತಿಯಲ್ಲಿ ಈ ನ್ಯಾಯಬೆಲೆ ಅಂಗಡಿಗಳನ್ನು ಒದಗಿಸಬೇಕಾಗುತ್ತದೆ. ನಮ್ಮ ದಾವಣಗೆರೆ ಭಾಗದಲ್ಲಿ ಕೂಡ ಅಂತಹ ಬರಗಾಲ ಪ್ರದೇಶಗಳು ಬರುತ್ತವೆ. ಅಲ್ಲೆಲ್ಲಾ ಒಬ್ಬೊಬ್ಬರಿಗೆ ಒಂದೊಂದು ಕೇಜಿ ಗೋದಿಯನ್ನು ಕೊಡುತ್ತಿದ್ದಾರೆ. ಆ ಒಂದು ಕೇ.ಜಿ. ಗೋದಿಯನ್ನು ತೆಗೆದುಕೊಂಡು ಯಾರು ಏನು ಮಾಡುವುದಕ್ಕಾಗುತ್ತದೆ ? ಒಂದು ಕಾರ್ಡಿಗೆ ಒಂದು ಕೇಜಿ ಗೋದಿಯನ್ನು ತೆಗೆದುಕೊಂಡು ಹೋಗಿ ಅವರೇನು ಕೋಳಿ ಸಾಕಬೇಕಾಗಿದೆಯೋ ಅಥವಾ ಗುಬ್ಬಿ ಸಾಕಬೇಕಾಗಿದೆಯೋ ? ಆ ಒಂದು ಕೇ.ಜಿ.ಯಲ್ಲಿ ಅವರು ಏನು ಮಾಡಬೇಕೆಂಬುದು ಅವರಿಗೆ ಗೊತ್ತಿಲ್ಲ. ಆದ್ದರಿಂದ ಒಂದೊಂದು ಜಿಲ್ಲೆಗೆ ೫೦–೧೦೦ ಗೋದಿ ಚೀಲಗಳನ್ನಾಗಲೀ ಅಥವಾ ರಾಗಿ

ಚೀಲಗಳನ್ನಾಗಲೀ ಹಂಚುವುದರಿಂದ ಯಾರಿಗೂ ಉಪಯೋಗವಾಗುವುದಿಲ್ಲ. ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿಯ ಮಟ್ಟದಲ್ಲಿ ಈ ನ್ಯಾಯಬೆಲೆ ಅಂಗಡಿಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರಾರಂಭಿಸಿ, ಆ ಜನರಿಗೆ ಹೆಚ್ಚು ಹೆಚ್ಚು ಆಹಾರ ಧಾನ್ಯಗಳನ್ನು ಒದಗಿಸಿಕೊಡಬೇಕು. ಅದರಲ್ಲೂ ಕೂಡ ಎಲ್ಲಿ ಬರಗಾಲ ಇದೆ, ಎಲ್ಲಿ ಜನ ತೊಂದರೆಯಲ್ಲಿದ್ದಾರೆ ಅಲ್ಲಿ ಆಧ್ಯತೆಯ ಮೇರೆಗೆ ಅಂತಹ ನ್ಯಾಯಬೆಲೆ ಅಂಗಡಿಗಳನ್ನು ಹೆಚ್ಚಿನ ರೀತಿಯಲ್ಲಿ ತೆರೆದು ಆ ಜನರಿಗೆ ಅನುಕೂಲ ಮಾಡಿಕೊಟ್ಟರೆ ಖಂಡಿತವಾಗಿಯೂ ಆ ಸಾಮಾನ್ಯ ಜನರಿಗೆ ಸಹಾಯ ಮಾಡಿದಂತಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ದವರು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

-೩೦ ಪಿ.ಎಂ.

ಇವತ್ತು ನಮ್ಮ ಸರ್ಕಾರದವರು ಮಿಲ್‌ಪಾಯಿಂಟ್‌ನಿಂದ ಸಾವಿರಾರು ಚೀಲಗಳಷ್ಟು ಬತ್ತವನ್ನು ಸಂಗ್ರಹಣೆಮಾಡುತ್ತಾರೆ. ಆದರೆ ನಮಗೆ ಅವರು ಮಾರಾಟ ಮಾಡುವುದು ಬಹಳ ಜಾಸ್ತಿ. ಮತ್ತು ಶ್ರೀಸಾಮಾನ್ಯನಿಗೆ ಅನುಕೂಲವಾಗುವಂತೆ ಮಾಡಬೇಕಾದರೆ ಶ್ರೀಸಾಮಾನ್ಯನಿಗೆ ಬೇಕಾದಂಥಎಲ್ಲಾಆಹಾರ ಪದಾರ್ಥಗಳನ್ನು ಸಹ ಸರ್ಕಾರದವರು ನೇರವಾಗಿ ಸಗಟು ವ್ಯಾಪಾರ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ಏನಾಗುತ್ತದೆ ಎಂದರೆ ಮಧ್ಯವರ್ತಿಗಳು ಪಡೆಯುತ್ತಿರುವ ಲಾಭಾಂಶ ತಪ್ಪಿಸುವುದಕ್ಕೆ ಅನು ಕೂಲವಾಗುತ್ತದೆ. ಅಂಗಡಿಗಳ ಮಾಲೀಕರು ಒಂದು ಕ್ವಿಂಟಾಲ್ ಅಕ್ಕಿಯನ್ನು ಸುಮಾರು ೨೫೦ ರೂಪಾಯಿಗಳಿಗೆ ತಂದು ಅವರು ಸುಮಾರು ೪೫೦ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ ಇವತ್ತು ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ ಅದು ಏನೆಂದರೆ ನಮ್ಮ ಕೋ-ಆಪ ರೇಟೀವ್ ಸೊಸೈಟಿಗಳಲ್ಲಿ ಸಕ್ಕರೆಯನ್ನು ಹಂಚುವ ಒಂದು ಪದ್ಧತಿ ಇದೆ. ಆ ಪದ್ಧತಿಯ ಪ್ರಕಾರ ಸಕ್ಕರೆಯಯನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಬೇಕಾದರೆ ಆತನು ಕಾರ್ಡ್ ಇಟ್ಟಿರಬೇಕಾಗುತ್ತದೆ. ಸುಮಾರು ಸಾವಿರಾರು ಕಾರ್ಡ್ಸ್ ಇರುತ್ತವೆ. ತಾವು ಒಂದು ಕೋ-ಆಪರೇಟೀವ್ ಸೊಸೈಟಿಗೆ ಸುಮಾರು ಒಂದು ೧೦ ಚೀಲ ಸಕ್ಕರೆಯನ್ನು ಕಳುಹಿಸಿಕೊಡುತ್ತೀರಿ. ಈ ೧೦ ಚೀಲ ಸಕ್ಕರೆಯ ಲ್ಲಿ ಅವರು ಸುಮಾರು ಒಂದು ೨೦೦ ಕಾರ್ಡ್ಸ್‌ಗಳಿಗೆ ಸಕ್ಕರೆಯನ್ನು ಹಂಚಿಕೆ ಮಾಡುತ್ತಾರೆ ಇನ್ನು ಉಳಿದ ಸಕ್ಕರೆ ಯನ್ನು ಬೇರೆ ಅಂಗಡಿ ಮಾಲೀಕರಿಗೆ ಅಥವಾ ಹೋಟೇಲ್ ಮಾಲೀಕರಿಗೆ ಮಾರಾಟ ಮಾಡಿಕೊಳ್ಳು ತ್ತಾರೆ. ಆದರೆ ಅದೇ ಬೇರೆ ಒಬ್ಬ ಕಾರ್ಡ್‌ದಾರರು ಹೋಗಿ ಸಕ್ಕರೆಯನ್ನು ಕೇಳಿದರೆ ಸಕ್ಕರೆ ಈ ಸಾರಿ ಬಂದಿದ್ದು ಬಹಳ ಕಡಿಮೆ ಎಲ್ಲಾ ಸಕ್ಕರೆ ಮುಗಿದು ಹೋಗಿದೆ ಮುಂದಿನ ಸಾರಿ ಸಕ್ಕರೆಯನ್ನು ಕೊಡು ತ್ತೇವೆ ಎನ್ನುವ ಒಂದು ಮಾತನ್ನು ಈ ಸೊಸೈಟಿಯವರು ಹೇಳುತ್ತಾರೆ. ಈ ರೀತಿಯಲ್ಲಿ ಕೋ- ಆಪರೇಟೀವ್ ಸೊಸೈಟಿಗಳಲ್ಲಿ ಅಕ್ರಮ ಮತ್ತು ಅವ್ಯವಹಾರ ನಡೆಯುತ್ತಿದೆ ಇದನ್ನು ತಾವು ಯಾವ ರೀತಿಯಲ್ಲಿ ತಡೆಗಟ್ಟುತ್ತೀರಿ. ಈ ರೀತಿಯಲ್ಲಿ ನಡೆಯುತ್ತಿರುವಂತಹ ಅಕ್ರಮ ಮತ್ತು ಅನ್ಯಾಯ ಗಳನ್ನು ತಡೆಗಟ್ಟುವುದಕ್ಕೆ ತಮ್ಮ ಇಲಾಖೆಗೆ ಬೇಕಾದಷ್ಟು ಅಧಿಕಾರವಿದೆ ಆದ್ದರಿಂದ ಮಾನ್ಯ ಮಂತ್ರಿ ಗಳು ಈ ರೀತಿಯ ಅಕ್ರಮಗಳನ್ನು ತಡೆಗಟ್ಟುವುದಕ್ಕೆ ಸೂಕ್ತವಾದಂತಹ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ,

ಇನ್ನು ರೈತರಿಂದ ಹಾಗೂ ಮಿಲ್ ಪಾಯಿಂಟ್‌ಗಳಿಂದ ತಾವು ಲೆವಿಯನ್ನು ವಸೂಲು ಮಾಡು ತ್ತಿದ್ದೀರಿ. ಆದರೆ ರೈತನು ತನ್ನ ವ್ಯವಸಾಯ ಕಸಬಿನಲ್ಲಿ ಬೆಳೆದಂತಹ ಬತ್ತವನ್ನು ಕೊಯ್ದು ಬತ್ತ ವನ್ನು ಸಂಗ್ರಹಣೆ ಮಾಡುವಂತಹ ಸಂದರ್ಭದಲ್ಲಿ ತಾವು ಲೆವಿಯನ್ನು ವಸೂಲು ಮಾಡಿದರೆ ರೈತರಿಗೆ ಇದರಿಂದ ಅನುಕೂಲವಾಗುತ್ತದೆ. ಮತ್ತೆ ರೈತರು ಆಹಾರ ಪದಾರ್ಥಗಳನ್ನು ಬೆಳೆದಂಥ ಸಂದರ್ಭ ದಲ್ಲಿ ಎಲ್ಲಾ ಆಹಾರ ಪದಾರ್ಥಗಳ ಬೆಲೆಗಳು ಸಹ ಕಡಿಮೆಯಾಗಿರುತ್ತವೆ. ಮತ್ತು ಮಾರ್ಕೇಟ್‌ಗಳ ಲ್ಲಿಯೂ ಸಹ ಬೆಲೆಗಳು ಕಡಿಮೆಯಾಗಿರುತ್ತವೆ. ಒಂದುವೇಳೆ ಬತ್ತದ ಬೆಲೆ ಜಾಸ್ತಿಯಾಗಿದ್ದಾಗ ತಾವು ಆ ಬತ್ತವನ್ನು ಕೊಂಡುಕೊಳ್ಳುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ತಾವು ರೈತರಿಂದ ನೇರವಾಗಿ ಬತ್ತವನ್ನು ಕೊಂಡುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಬೇಕು, ಮತ್ತು ರೈತರಿಗೆ ಹೆಚ್ಚು ಲಾಭವನ್ನು ಕೊಡಬೇಕು. ಹಾಗೂ ತಾವು ಈಗ ವಸೂಲು ಮಾಡುತ್ತಿರುವ ಲೆವಿ ಬತ್ತವನ್ನು ಮಿಲ್ ಪಾಯಿಂಟ್‌ಗಳ ಮುಖಾಂತರ ತೆಗೆದುಕೊಳ್ಳದೆ ರೈತರಿಂದಲೇ ನೇರವಾಗಿ ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ರೈತರಿಗೂ ತೊಂದರೆಯಾಗುವುದಿಲ್ಲ. ಮತ್ತು

ಸಾರ್ವಜನಿಕರಿಗೂ ಸಹ ತಾವು ಸೊಸೈಟಿಗಳ ಮುಖಾಂತರ ಒಳ್ಳೆಯ ಅಕ್ಕಿಯನ್ನು ಸರಬರಾಜು ಮಾಡುವುದಕ್ಕೆ ಅನುಕೂಲವಾಗುತ್ತದೆ, ಆದ್ದರಿಂದ ನಾನು ನಮ್ಮ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರವಾಗಿ ಎಲ್ಲಾ ವ್ಯಾಪಾರವನ್ನು ಮಾಡುವಂತೆ ಮಾಡಬೇಕು ಮತ್ತು ಸರ್ಕಾರದವರೇ ಈ ಸಗಟುವ್ಯಾಪಾರ ಮಾಡುವಂತಹ ವ್ಯವಸ್ಥೆಯಾದರೂ ಜಾರಿಗೆ ತರಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ಹೆಚ್ಚು ಹೆಚ್ಚು ನ್ಯಾಯಬೆಲೆ ಅಂಗಡಿಗಳನ್ನು ತೆರೆದು ಅದರ ಮುಖಾಂತರವಾಗಿ ಎಲ್ಲಾ ಜನರಿಗೆ ಆಹಾರ ಪದಾರ್ಥಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಫ್. ಎಸ್. ಪಾಟೀಲ್ (ಕಲ್‌ಘಟ್‌ಗ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಆರೋಗ್ಯ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಸದನದಲ್ಲಿ ಮಂಡಿಸಿರತಕ್ಕಂತಹ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಸರ್ಕಾರಕ್ಕೆ ಕೆಲವಾರು ಸಲಹೆಗಳನ್ನು ಕೊಡಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ನಾನು ನಮ್ಮ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ನಮ್ಮ ರಾಜ್ಯದಲ್ಲಿ ತಾವು ವಸೂಲು ಮಾಡುತ್ತಿರುವ ಮಿಲ್ ಪಾಯಿಂಟ್ ಲೆವಿಯಿಂದ ಬಹಳ ಜನ ರೈತರಿಗೆ ತೊಂದರೆಯಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ರೀತಿ ತಾವು ಮಿಲ್ ಪಾಯಿಂಟ್ ಮುಖಾಂತರವಾಗಿ ಲೆವಿಯನ್ನು ವಸೂಲು ಮಾಡುತ್ತಿರುವುದು ಸರ್ಕಾರದ ನೀತಿ. ಆದರೆ ಈ ರೀತಿಯಲ್ಲಿ ಕೆಲವಾರು ಲೋಪದೋಷಗಳು ಇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೇ ನಮ್ಮ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು ಆದರೆ ಆ ಹೇಳಿಕೆಯನ್ನು ನಾನು ಓದಿದ್ದೇನೆ. ಈ ಲೆವಿ ಭತ್ತವನ್ನು ರೈತರಿಂದ ಸರ್ಕಾರದವರು ವಸೂಲು ಮಾಡದೇ ನೇರವಾಗಿ ಮಿಲ್ ಪಾಯಿಂಟ್ ಮುಖಾಂತರ ವಸೂಲು ಮಾಡುತ್ತೇವೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಆದರೆ ಇದರಿಂದ ಏನಾಗಿದೆ ಎಂದರೆ ಸರ್ಕಾರದವರು ಮಿಲ್ ಪಾಯಿಂಟ್ ಮುಖಾಂತರ ಲೆವಿ ಭತ್ತವನ್ನು ಸಂಗ್ರಹಣೆ ಮಾಡುವುದರಿಂದ ರೈತರಿಗೆ ಬಹಳ ನಷ್ಟವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಬ್ಬ ವ್ಯಾಪಾರಸ್ಥ ಒಬ್ಬ ರೈತನಿಂದ ಭತ್ತವನ್ನು ಖರೀದಿ ಮಾಡಿಕೊ ಡು ಹೋಗಲು ಬಂದ ಆದರೆ ಆ ವ್ಯಾಪಾರಸ್ಥ ಆ ರೈತನಿಗೆ ಹೇಳಿದ ನೀವು ಕೊಡುವಂತಹ ಭತ್ತದಲ್ಲಿ ನಾವು ಶೇಕಡ ೧೦ ಪರ್ಸೆಂಟ್ ಭತ್ತದ ಹಣವನ್ನು ಖೋತ ಮಾಡಿಕೊಳ್ಳಬೇಕಾಗ ತ್ತದೆ ಕಾರಣ ನಾವು ಸರ್ಕಾರಕ್ಕೆ ಲೆವಿಯನ್ನು ಕೊಡಬೇಕು ಆದ್ದರಿಂದ ನಾವು ನಿಮ್ಮಿಂದ ಶೇಕಡ ೧೦ ಪರ್ಸೆಂಟ್ ಭತ್ತವನ್ನು ವಸೂಲು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು ಈ ರೀತಿಯಾಗಿ ಅನೇಕ ಕಡೆಗಳಲ್ಲಿ ಅಕ್ರಮ ಮತ್ತು ಅನ್ಯಾಯಗಳು ದೇಶದಲ್ಲಿ ನಡೆಯುತ್ತಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು. ತಾವು ಈಗ ಹೊಸದಾಗಿ ತಂದಿರುವಂತಹ ಈ ಲೆವಿ ಪದ್ಧತಿಯನ್ನು ಬಿಟ್ಟು ನೇರವಾಗಿ ರೈತರಿಂದಲೇ ಭತ್ತವನ್ನು ವಸೂಲು ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಮತ್ತು ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲ ; ಎನ್ನುವ ಮಾತನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಆದರೆ, ಮಾನ್ಯ ಆಹಾರ ಸಚಿವರು ಮೊನ್ನೆತಾನೆ ಪತ್ರಿಕೆಯಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ, ಅದರಲ್ಲಿ ಏನು ಹೇಳಿದ್ದಾರೆ ಎಂದರೆ ಸೆಂಟ್ರಲ್ ಆ್ಯಕ್ಟನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ, ಸ್ವಾಮಿ, ಮತ್ತೊಂದು ಸ್ಟೇಟ್ ಆ್ಯಕ್ಟನ್ನೂ ಕೂಡ ಮಾಡಿ ಇಲ್ಲಿಯ ರೈತಾಪಿ ಜನರ ಅನುಕೂಲತೆಗೆ ಅನುಸಾರವಾಗಿ ಲೆವಿ ಪದ್ಧತಿಯನ್ನು ಜಾರಿಗೆತನ್ನಿ. ಇದರಿಂದೇನೂ ಮಹಾ ಅಪರಾಧವಾಗುವುದಿಲ್ಲ. ಲೆವಿ ಸಂಬಂಧವಾಗಿ ಒಂದು ಮಾತನ್ನು ಹೇಳಬೇಕೆಂದರೆ ರೈತರು ಸಂತೋಷದಿಂದ ಅದನ್ನು ಕೊಡುತ್ತಿದ್ದಾರೆ. ರೈತ ಕಷ್ಟಪಟ್ಟು ಬೆಳೆದಿದ್ದಕ್ಕೆ ಯೋಗ್ಯ ಬೆಲೆಗೆ ಖರೀದಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಲೆವಿ ಪದ್ಧತಿಯ ವಸೂಲು ಕ್ರಮವನ್ನು ಸಾಮಾನ್ಯವಾಗಿ ಎಲ್ಲಾ ದೇಶದ, ರಾಜ್ಯದ ಎಲ್ಲಾ ಭಾಗಗಳಲ್ಲಿ ಕೋ-ಅಪರೇಟಿವ್ ಸೊಸೈಟಿಗಳ ಮುಖಾಂತರ ಲೆವಿ ವಸೂಲು ಮಾಡುವ ಪದ್ಧತಿಯನ್ನು ಸರ್ಕಾರದವರು ಮಾಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇದು ಮಹಾ ಅನ್ಯಾಯವೆಂದು ಈ ಸಂದರ್ಭದಲ್ಲಿ

ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನನ್ನದೇ ಕ್ಷೇತ್ರದಲ್ಲಿ ಟಿಎಪಿಸಿಎಮ್ಎಸ್ ಈ ಸಂಸ್ಥೆ ಮುಖಾಂತರ ಭತ್ತ ವಸೂಲು ಮಾಡುತ್ತಿದ್ದಾರೆ. ಈ ಸಂಸ್ಥೆ ಪ್ರತಿವರ್ಷದಲ್ಲೂ ಶಾರ್ಟೇಜ್ ಎನ್ನುವ ಮಾತನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಆದರೆ ಶಾರ್ಟೇಜ್ ನಿಜವಾದುದಲ್ಲ. ಆರ್ಟಿಫಿಶಲ್ ಶಾರ್ಟೇಜ್‌ನ್ನು ಸೃಷ್ಟಿಸುತ್ತಾರೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಆಫಟಗಿ ಕ್ಷೇತ್ರದಲ್ಲಿ ಪ್ರತಿವರ್ಷ ೨೫–೩೦ ಸಾವಿರ ಕ್ವಿಂಟಾಲ್ ಭತ್ತ ಲೆವಿ ರೂಪದಲ್ಲಿ ವಸೂಲು ಆಗುತ್ತದೆ. ಆದರೆ, ಪ್ರತಿವರ್ಷವೂ ಸರ್ಕಾರಕ್ಕೆ ಅವರು ಕೊಡತಕ್ಕ ಲೆವಿ ಅಕ್ಕಿ ಪ್ರಮಾಣ ಎಷ್ಟು ಎಂದು ಮಾನ್ಯ ಅಧ್ಯಕ್ಷರ ಮೂಲಕ ಸನ್ಮಾನ್ಯ ಮಂತ್ರಿಯವರನ್ನು ನಾನು ಪ್ರಶ್ನೆ ಕೇಳುತ್ತೇನೆ. ಅವರು ಪ್ರತಿವರ್ಷವೂ ಒಂದು ಕ್ವಿಂಟಾಲ್‌ಗೆ ೬೭.೫ ಪರ್ಸೆಂಟ್ ಪ್ರಮಾಣದಲ್ಲಿ ಸರ್ಕಾರಕ್ಕೆ ಲೆವಿ ಕೊಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ನಿಜವಾಗಿ ಹೇಳುವುದಾದರೆ ನಮ್ಮ ತಾಲೂಕಿನಲ್ಲಿ ಭತ್ತ ಪ್ರತಿ ಕ್ವಿಂಟಾಲ್‌ಗೆ ಕಡಿಮೆ ಎಂದರೂ ೭೦ ರಿಂದ ೭೫ ಪರ್ಸೆಂಟೇಜ್ ಬೆಲೆ ಕೊಟ್ಟು ಪ್ರತಿವರ್ಷ ಸ್ಟಾಕ್‌ಲ್ಲಿ ಶಾರ್ಟೇಜ್‌ನ್ನು ತೋರಿಸುತ್ತಿದ್ದಾರೆ. ಈ ವಿಷಯವನ್ನು ಅನೇಕ ಮಾನ್ಯ ಆಹಾರ ಸಚಿವರ ಗಮನಕ್ಕೆ ತಂದಿದ್ದೇವೆ. ಮಾನ್ಯ ಸಚಿವರು ಕೂಡ ಸೂಕ್ತ ಕ್ರಮವನ್ನು ಕೈಗೊಂಡು ಒಂದು ಆಜ್ಞೆಯನ್ನು ಹೊರಡಿಸಿದರು. ಆದರೆ ದುರಾದೃಷ್ಟವಶಾತ್ ಆ ಸಂಸ್ಥೆಯವರು ಹೈಕೋರ್ಟಿಗೆ ಅಪೀಲ್ ಹೋಗಿ ಅದರ ಮೇಲೆ ಸ್ಟೇ ಅನ್ನು ತಂದರು. ಅದರ ಬಗ್ಗೆ ಈಗ ಹೇಳುವುದು ಸರಿಯಾಗುವುದಿಲ್ಲ. ಅದು ಕೋರ್ಟಿನ ಮುಂದೆ ಇರುವುದರಿಂದ ಅದು ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ. ಅದನ್ನು ಅಷ್ಟಕ್ಕೇ ಬಿಟ್ಟು ಸ್ಟೇ ಅನ್ನು ತೆಗೆದುಕೊಂಡ ಮೇಲೆ ನನ್ನನ್ನು ಕೂಡ ಪಾರ್ಟಿ ಮಾಡಿದರು. ಮಾನ್ಯ ಅಧ್ಯಕ್ಷರೇ. ನಾನು ಈ ಸಂಸ್ಥೆಯಲ್ಲಿ ಯಾವುದೇ ಒಂದು ಆಡಳಿತ ವರ್ಗದಲ್ಲಿ ಇದ್ದವನು ಅಲ್ಲ. ಆದರೂ ಕೂಡ ನನ್ನನ್ನು ಅದಕ್ಕೆ ಪಾರ್ಟಿ ಮಾಡಿದರು. ಈ ಸಂಸ್ಥೆಯಲ್ಲಿದ್ದಂತಹ ಯಾರೇ ಆಗಲಿ, ಯಾವ ಸುಧಾರಣೆಗಳನ್ನೂ ಮಾಡಿಲ್ಲ. ಆದ್ದರಿಂದ ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ, ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಈಗಿರುವ ಲೆವಿ ವಸೂಲು ಮಾಡುವ ಕ್ರಮವನ್ನು ಬದಲಾಯಿಸಿ ನೇರವಾಗಿ ಸರ್ಕಾರವೇ ಭತ್ತವನ್ನು ರೈತರಿಂದ ತೆಗೆದುಕೊಂಡು, ಅವರು ಕಷ್ಟಪಟ್ಟು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಧ್ಯವರ್ತಿಗಳನ್ನು, ದಳ್ಳಾಳಿಗಳನ್ನು ತೆಗೆದುಹಾಕಬೇಕೆಂದು ಕೂಡ ನನ್ನ ಕಳಕಳಿಯ ಪ್ರಾರ್ಥನೆಯಾಗಿದೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ ಸಾಮಾನ್ಯವಾಗಿ ಲೆವಿ ಪದ್ಧತಿಯಲ್ಲಿ ತನ್ನಲ್ಲಿರುವ ಎಲ್ಲಾ ತರಹದ ಕಾಳುಗಳಿಗೆ ಡಿಕ್ಲರೇಶನ್ ಕೊಡುವ ಪರಿಪಾಠ ಈ ಲೆವಿ ಕಾನೂನಿನಲ್ಲಿದೆ. ಮಾನ್ಯ ಅಧ್ಯಕ್ಷರೇ ಈ ಕಾನೂನಿನ ವ್ಯಾಪ್ತಿಗೆ ಒಳಪಡುವವರು ಮುಗ್ಧ ರೈತರು. ೧೯೭೪ನೇ ಇಸವಿಯಿಂದ ೭೫ರವರೆಗೆ ನಾನು ನೋಡುತ್ತಿದ್ದೇನೆ. ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ನೂರಕ್ಕೆ ೮೦–೮೫ ಜನರು ನಿರಕ್ಷರಸ್ಥರಾಗಿದ್ದಾರೆ. ಕೇವಲ ಐದು ಹತ್ತು ಪರ್ಸೆಂಟ್ ಜನರು ಓದು ಬರಹ ಬಲ್ಲವರಾಗಿಬಹುದು. ಆದ್ದರಿಂದ ನಾನು ಮಾನ್ಯ ಆಹಾರ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ. ಪ್ರತಿ ತಿಂಗಳಿಗೊಮ್ಮೆ ಡಿಕ್ಲರೇಶನ್ ಕೊಡುವ ಕಾನೂನನ್ನು ಬದಲಾಯಿಸಿ ವರ್ಷಕ್ಕೆ ಒಂದು ಸಾರಿ ಕೊಟ್ಟರೆ ಸಾಕೆನ್ನುವ ಪದ್ಧತಿಯನ್ನು ಜಾರಿಗೆ ತರಬೇಕು. ಬೇಕಾದರೆ ಇದು ವ್ಯಾಪಾರಸ್ಥರಿಗೆ ಮೀಸಲಾಗಿರಲಿ ಏಕೆಂದರೆ ಅವರು ಬಹಳ ಬುದ್ಧಿವಂತರಿರುತ್ತಾರೆ.

ಆದ್ದರಿಂದ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಲೆವಿ ಪದ್ಧತಿಯಲ್ಲಿರತಕ್ಕ ಲೋಪದೋಷಗಳು ಎಂದರೆ ಮೊದಲನೆಯದಾಗಿ, ಸರ್ಕಾರದವರು ರೈತರಿಂದಲೇ ನೇರವಾಗಿ ಇದನ್ನು ವಸೂಲು ಮಾಡಬೇಕು. ರೈತರು ಲೆವಿಯನ್ನು ಕೊಡಲು ತಯಾರಾಗಿದ್ದಾರೆ. ಎರಡನೆಯದಾಗಿ ಸರಿಯಾದ, ಯೋಗ್ಯವಾದ ಬೆಲೆಯನ್ನು ಕೊಡಬೇಕು ಮಧ್ಯವರ್ತಿಗಳು, ದಳ್ಳಾಳಿಗಳಿಂದ ಲೆವಿ ವಸೂಲಿ ಕಾರ್ಯಕ್ರಮವನ್ನು ತೆಗೆದುಹಾಕಿ ನೇರವಾಗಿ ಸರ್ಕಾರವೇ ಯೋಗ್ಯ ಬೆಲೆಗೆ ಲೆವಿಯನ್ನು ಖರೀದಿ ಮಾಡಬೇಕು. ತಿಂಗಳಿಗೊಮ್ಮೆ ಕೊಡಬೇಕಾದ ಡಿಕ್ಲರೇಶನ್‌ನು ರೈತರ ಮಟ್ಟಿಗೆ ಮಾತ್ರ ವರ್ಷಕ್ಕೊಮ್ಮೆ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್.ಡಿ ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಸಂಬಂಧಿಸಿದಂತೆ ಎರಡು ಪ್ರಮುಖವಾದ ವಿಷಯಗಳ ಬಗ್ಗೆ ಮಾತ್ರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ. ಒಂದು, ಲೆವಿ ಪ್ರೈಸ್ ಕೊಡತಕ್ಕಂಥಾದ್ದು ಬಹುಶಃ ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರ ಇನ್ನೂ ಅನೌನ್ಸ್ ಮಾಡಿಲ್ಲ

ವೆಂದು ಭಾವಿಸುತ್ತೇನೆ. ಸಪೋರ್ಟಿಂಗ್ ಪ್ರೈಸ್ ಪ್ಯಾಡಿಗೆ ೧೧೫ ರೂಪಾಯಿ +೧೦ ರೂಪಾಯಿ ಬೋನಸ್. ಕೊಡಬೇಕೆಂದು ಹಿಂದಿನ ನಿರ್ಣಯದ ಪ್ರಕಾರ ಹೇಳಿದ್ದಾರೆ. ಅದರ ಪ್ರಕಾರ ಮೀಡಿಯಂ ಪ್ಯಾಡಿಗೆ ೧೧೮ ರೂಪಾಯಿ + ೧೦ ರೂಪಾಯಿ ಬೋನಸ್. ಫೈನ್ ಪ್ಯಾಡಿಗೆ ೧೨೦ ರೂಪಾಯಿ + ೧೦ ರೂಪಾಯಿ ಬೋನಸ್ ಎಂದು ಹಾಕಿರತಕ್ಕಂಥಾದ್ದು ಬಹುಶಃ ಇವತ್ತು ಕಾಸ್ಟ್ ಆಫ್ ಕಲ್ಟಿವೇಶನ್ ಅನ್ನು ಗಣನೆಗೆ ತೆಗೆದುಕೊಂಡು ಈ ನಿರ್ಣಯ ಮಾಡಿದ್ದರೆ ಅದು ಸರಿಯಲ್ಲವೆಂದು ನನ್ನ ಭಾವನೆ. ಏತಕ್ಕೆಂದರೆ ಇವತ್ತು ಫರ್ಟಿಲೈಸರ್ಸ್ ರೇಟ್ ಸುಮಾರು ೨೫೦ ಪರ್ಸೆಂಟ್‌ನಷ್ಟು ಹೆಚ್ಚಾಗಿದೆ. ಕಾಸ್ಟ್ ಆಫ್ ಕಲ್ಟಿವೇಶನ್‌ನನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಅದಕ್ಕೆ ನಾನು ಒಪ್ಪುವುದಿಲ್ಲ. ಜಪಾನ್ ದೇಶದಲ್ಲಿ ವ್ಯವಸಾಯ ವ್ಯವಸ್ಥೆಯನ್ನು ನೋಡುವುದಾದರೆ, ಅಲ್ಲಿ ಒಬ್ಬ ರೈತನನ್ನು ಸರ್ಕಾರವೇ ನೇಮಕಮಾಡಿ ಅವನಿಗೆ ಸಂಬಳ ಕೊಟ್ಟು ವ್ಯವಸಾಯ ಮಾಡಿಸಿ ಕಾಸ್ಟ್ ಆಫ್ ಕಲ್ಟಿವೇಶನ್ ಆಧಾರದ ಮೇಲೆ ಬೆಲೆ ನಿಗದಿಮಾಡತಕ್ಕಂಥ ವ್ಯವಸ್ಥೆ ಇರುವಾಗ ಸರ್ಕಾರದವರು ಅದನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲಿ ನಮ್ಮ ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್ ಕೊಡತಕ್ಕ ನಿರ್ಣಯಕ್ಕೆ ತಾಲಿ ಬಾಗುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಸರ್ಕಾರ ತನ್ನದೇ ಆದ ದೃಢ ನಿಲುವನ್ನು ತಾಳಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಸದನದಲ್ಲಿ ಒಂದು ನಿರ್ಣಯ ತೆಗೆದುಕೊಂಡು ಅದನ್ನು ಅನೌನ್ಸ್ ಮಾಡಿದ್ದಾರೆ. ೧೦ ರೂಪಾಯಿ ಬೋನಸ್ ಜೊತೆಗೆ ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಕೊಡುತ್ತಾ ಇದ್ದರು. ಬೋನಸ್ ಪ್ಲಸ್ ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಎರಡನ್ನೂ ರಾಜ್ಯಸರ್ಕಾರವೇ ತನ್ನ ಬೊಕ್ಕಸದಿಂದ ಭರ್ತಿ ಮಾಡತಕ್ಕ ನಿರ್ಣಯ ತೆಗೆದುಕೊಂಡಿರುವುದು ಅವರು ಅಧಿಕಾರ ಬಿಟ್ಟು ಹೋಗುವವರೆಗೂ ಇತ್ತು ಎಂದು ನಾನು ಭಾವಿಸುತ್ತೇನೆ. ಇವತ್ತು ಕೋರ್ಸ್, ಮೀಡಿಯಂ ಮತ್ತು ಫೈನ್ ಪ್ಯಾಡಿಗೆ ೧೧೫-೧೧೮-೧೨೦ ರೂಪಾಯಿ ಇಟ್ಟಿದ್ದೀರಿ ಪ್ಲಸ್ ೧೦ ರೂಪಾಯಿ ಬೋನಸ್ ಎಂದು ಇಟ್ಟಿದ್ದೀರಿ. ಇದು ಏನೇನೂ ಸಾಲದು. ದಯಮಾಡಿ ಫೈನ್ ಪ್ಯಾಡಿಗೆ ೧೫೦ ರೂಪಾಯಿ ಇಡಬೇಕಾಗುತ್ತದೆ. ಮೀಡಿಯಂಗೆ ೧೪೦ ರೂಪಾಯಿ ಮತ್ತು ಕೋರ್ಸ್‌ಗೆ ೧೩೦ ರೂಪಾಯಿ ಇನ್‌ಕ್ಲೂಡಿಂಗ್ ಬೋನಸ್ ಅಂಡ್ ಟ್ರಾನ್ಸ್‌ಪೋರ್ಟೇಷನ್ ಎಂದು ನಿಗದಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಇದನ್ನು ಕಾಸ್ಟ್ ಆಫ್ ಕಲ್ಟಿವೇಷನ್‌ಗೆ ಸರಿದೂಗಿಸಿದಾಗ ಏನೇನೂ ಹೊಂದಾಣಿಕೆ ಆಗಲಿಕ್ಕೆ ಸಾಧ್ಯವಿಲ್ಲ. ಆದರೂ ಇದ್ದುದರಲ್ಲಿ ಈ ದರವನ್ನು ನಿಗದಿ ಮಾಡತಕ್ಕಂಥಾದ್ದು ಅತ್ಯಂತ ಅವಶ್ಯಕ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮೊನ್ನೆ ನೀವು ಕಬ್ಬಿನ ದರವನ್ನು ರಿವೈಸ್ ಮಾಡಿದಿರಿ. ಆದರೆ ಪೂರ್ಣ ಸಮಾಧಾನ ಆಗದೇ ಹೋದರೂ ರೈತನ ಈಗಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಾವು ನಿರ್ಣಯ ತೆಗೆದುಕೊಂಡಿದ್ದೀರಿ ಎಂದು ನಾನು ಭಾವಿಸುತ್ತೇನೆ. ಅದನ್ನು ಪೂರ್ಣವಾಗಿ ಅಲ್ಲಗಳೆಯುವುದಕ್ಕೆ ನಾನು ತಯಾರಾಗಿಲ್ಲ. ಮೊನ್ನೆ ತಾವು ಏನು ನಿರ್ಣಯ ತೆಗೆದುಕೊಂಡಿದ್ದೀರಿ, ಸ್ವಲ್ಪ ತಡವಾದರೂ ಕೂಡ ತಾವು ತೆಗೆದುಕೊಂಡಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುವುದಕ್ಕೆ ತಯಾರಾಗಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕನಿಷ್ಠ ೧೫೦ ರೂಪಾಯಿ ಫೈನ್ ಪ್ಯಾಡಿಗೆ ಕೊಡದೇಹೋದರೆ ಪ್ರಯೋಜನವಾಗುವುದಿಲ್ಲ, ಒಂದು ಕ್ವಿಂಟಾಲ್ ಮೀಡಿಯಂ ಪ್ಯಾಡಿಗೆ ೧೪೦ ರೂಪಾಯಿ ಕೊಡಬೇಕಾಗಿರುತ್ತದೆ, ೧೩೦ ರೂಪಾಯಿ ಕೋರ್ಸ್ ಪ್ಯಾಡಿಗೆ ಕೊಡಬೇಕಾಗುತ್ತದೆ ಪ್ಲಸ್ ಬೋನಸ್ ಪ್ಲಸ್ ಟ್ರಾನ್ಸ್‌ಪೋರ್ಟೇಷನ್ ಅಳವಡಿಸಿ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಏನು ಘೋಷಣೆ ಮಾಡಿದ್ದಾರೆ ಅದಕ್ಕೆ ಕಟಿಬದ್ಧರಾಗಿ ನಿಲ್ಲಬೇಕಾದ ಅವಶ್ಯಕತೆ ಇಲ್ಲ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತನನ್ನು ಉಳಿಸಬೇಕು ಎಂದು ಇದ್ದರೆ ಒಂದೆರಡು ಕೋಟಿ ರೂಪಾಯಿಗಳ ಸಬ್ಸಿಡಿ ಕೊಟ್ಟರೂ ಚಿಂತೆಯಿಲ್ಲ, ಸರ್ಕಾರ ದೃಢ ನಿಲುವನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಕಾಸ್ಟ್ ಆಫ್ ಕಲ್ಟಿವೇಷನ್ ೨೫೦ ರೂಪಾಯಿಗಿಂತ ಹೆಚ್ಚು ಬರುತ್ತದೆ. ಒಂದು ಹಿನ್ನೆಲೆಯಲ್ಲಿ ಸರ್ಕಾರದ ಮುಂದೆ ಈ ಒಂದು ಒತ್ತಾಯವನ್ನು ನಾನು ಇಡುತ್ತಿದ್ದೇನೆ, ಇನ್ನು ಲೆವಿ ವಿಚಾರ ಹೇಳುವುದಕ್ಕೆ ಮುಂಚೆ ಪ್ರೊಕ್ಯೂರ್‌ಮೆಂಟ್‌ನಲ್ಲಿ ಏನು ಹಿಂಸೆಯಾಗುತ್ತಿದೆ ಎನ್ನುವುದನ್ನು ಹೇಳಬೇಕಾಗಿದೆ ನೀವು ತಾಲ್ಲೂಕು ಲೆವೆಲ್‌ನಲ್ಲಿ ಮಾರ್ಕೆಟಿಂಗ್ ಕೋ ಆಪರೇಟೀವ್ ಸೊಸೈಟಿಗಳನ್ನು ತಮ್ಮ ಏಜೆಂಟ್ಸ್ ಎಂದು ಮಾಡಿಕೊಂಡಿದ್ದೀರಿ. ಅಲ್ಲಿ ಹೋದರೆ ಸಾಮಾನ್ಯವಾಗಿ ಎಲ್ಲಾ ಮಾರ್ಕೆಟಿಂಗ್ ಕೊ ಆಪರೇಟೀವ್ ಸೊಸೈಟಿಗಳಲ್ಲಿ ಈ ರೋಗ ಇದೆ. ಕೆಲವು ಕಡೆ ಉತ್ತಮವಾಗಿ ಕೆಲಸ ಮಾಡಬಹುದು. ಆದರೆ ಕೆಲವು ಕಡೆ ಕ್ವಾಲಿಟಿ ಚೆನ್ನಾಗಿಲ್ಲ ಎಂದು

ಮುಂತಾಗಿ ರೈತನಿಗೆ ಕಿರುಕುಳ ಕೊಡತಕ್ಕಂಥಾದ್ದನ್ನು ನಮ್ಮ ಕಣ್ಣು ಮುಂದೆ ನೋಡುತ್ತಾ ಇದ್ದೇವೆ, ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಇವತ್ತು ಜಿಲ್ಲಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ ಕಟ್ಟುನಿಟ್ಟಾದಂಥ ಆದೇಶವನ್ನು ಕೊಡಬೇಕು. ಅಲ್ಲಿ ನಡೆಯುತಕ್ಕ ಕಿರುಕುಳವನ್ನು ತಪ್ಪಿಸದೇ ಹೋದರೆ ರೈತನಿಗೆ ಸಾಕಷ್ಟು ಅನಾಹುತ ಇದೆ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ನಾರ್ಮ್ಸ್ ಫಿಕ್ಸ್ ಮಾಡಿದ್ದೀರಿ, ಅದರಲ್ಲಿ ಈ ರೀತಿ ಕ್ವಾಲಿಟಿ ಇರಬೇಕು ಎಂದು ನಿಗದಿ ಮಾಡಿದ್ದೀರಿ. ಅಲ್ಲಿ ಕೂತು ಅದೇ ಚೌಕಟ್ಟಿನಲ್ಲಿ ರೈತನಿಗೆ ಕೊಡಬಾರದ ಕಿರುಕುಳ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುವುದು ಸೂಕ್ತ ಎಂದು ನಾನು ಸಲಹೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ, ನಿಮ್ಮ ಇಲಾಖೆಯ ಮುಖ್ಯಸ್ಥರಾಗಿ ಕೆಲಸ ಮಾಡತಕ್ಕ ಕಾರ್ಯದರ್ಶಿಗಳಿದ್ದಾರೆ, ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಇದ್ದಾರೆ, ಅವರಿಗೆ ರೈತರಿಗೆ ಆಗತಕ್ಕ ಕಿರುಕುಳದ ಮನವರಿಕೆ ಇದೆ ಎಂದು ನಾನು ನಂಬಿಕೊಂಡಿದ್ದೇನೆ. ಇದರಲ್ಲಿ ಕೆಲವು ಸುಧಾರಣೆಗಳನ್ನು ಮಾಡುವುದರಲ್ಲಿ ಅವರು ಪ್ರಾಮಾಣಿಕವಾದ ಪ್ರಯತ್ನ ನಡೆಸುವುದರಲ್ಲಿ ಸಂಶಯವಿಲ್ಲ ಎಂದು ನಾನು ಭಾವಿಸುತ್ತೇನೆ. ಅವರು ತಾಲ್ಲೂಕು ಮಟ್ಟದಲ್ಲಿ ರೈತರಿಗೆ ಆಗತಕ್ಕ ಕಿರುಕುಳಗಳನ್ನು ಕಂಡು. ವಿಷಯವನ್ನು ಅಧ್ಯಯನಮಾಡಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ತಮ್ಮ ಪ್ರೊಕ್ಯೂರ್‌ಮೆಂಟ್ ವಿಚಾರವನ್ನು ಹೇಳಬೇಕಾದರೆ, ಗವರ್ನಮೆಂಟ್ ಆಫ್ ಇಂಡಿಯಾದ ಒಂದು ಪಾಲಿಸಿಗೆ ಅನುಗುಣವಾಗಿ ಮಿಲ್ ಪಾಯಿಂಟ್‌ನಲ್ಲಿ ಲೆವಿ ಹಾಕಿದ್ದೇವೆ ಎಂದು ಘೋಷಣೆ ಮಾಡಿದಿರಿ, ಇಲ್ಲಿಂದ ಮುಂದಕ್ಕೆ ರೈತನಿಗೆ ಲೆವಿ ಇಲ್ಲವೇ ಇಲ್ಲ, ರೈತ ಲೆವಿ ಕೊಡಬೇಕಾಗಿತ್ತು ಅದನ್ನು ತೊಡೆದು ಹಾಕಿದ್ದೇವೆ ಎಂದು ದೊಡ್ಡ ಘೋಷಣೆ ಮಾಡಿ ಪತ್ರಿಕೆಯಲ್ಲಿ ಜಾಹೀರಾತನ್ನು ಹಾಕಿಸಿದಿರಿ. ಇದು ಕೇವಲ ಹುಸಿಯಾದಂಥ ಮಾತು. ಯಾವ ಮಿಲ್ ಮಾಲೀಕ ಲೆವಿ ಕೊಡಲಿಕ್ಕೆ ಹೋಗುತ್ತಾನೆ. ದಯಮಾಡಿ ಇದರ ಬಗ್ಗೆ ತಾವು ಆಳವಾಗಿ ಅಧ್ಯಯನಮಾಡಬೇಕು. ನಿಮ್ಮ ಅಧಿಕಾರಿಗಳ ಹತ್ತಿರ ನಾನು ಚರ್ಚೆ ಮಾಡಿದ್ದೇನೆ ಹಿಂದಿದ್ದ ಅಧಿಕಾರಿಗಳ ಹತ್ತಿರ, ಮುಖ್ಯ ಕಾರ್ಯದರ್ಶಿಗಳ ಕಛೇರಿಯಲ್ಲಿ ಕುಳಿತು ಚರ್ಚೆಮಾಡಿದ್ದೇನೆ. ಇದನ್ನು ಮಾಡಬೇಡಿ ತುಂಬ ಅನಾಹುತವಾಗುತ್ತದೆ ಎಂದು ಹೇಳಿದ್ದೇನೆ. ರೈತನಿಗೆ ಇಷ್ಟೆಲ್ಲಾ ಕಿರುಕುಳ ಕೊಟ್ಟು, ಆಗಿರತಕ್ಕ ಲಾಭ, ನೀವು ಇಟ್ಟುಕೊಂಡಿರತಕ್ಕ ಗುರಿ ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ನೀವು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ೧೯೮೦–೮೧ ರಲ್ಲಿ ೨ ಲಕ್ಷ, ೮ ಸಾವಿರ ಟನ್ ಶೇಖರಣೆ ಮಾಡಬೇಕು ಎಂಬ ಗುರಿಯನ್ನು ಇಟ್ಟುಕೊಂಡಿದ್ದೀರಿ. ಆದರೆ ಅದರಲ್ಲಿ ಅರ್ಧಕೂಡ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ಕೇಂದ್ರಸರ್ಕಾರದವರು ಈ ವಿಚಾರದಲ್ಲಿ ಏನೇ ಹೇಳಲಿ, ದಯಮಾಡಿ ನೀವು ಮಿಲ್ ಪಾಯಿಂಟ್ ಲೆವಿಯನ್ನು ರದ್ದುಪಡಿಸುವುದು ಅತೀ ಅವಶ್ಯಕ. ಬಹುಶಃ ಇಲ್ಲಿ ಲೆವಿ ಇಟ್ಟಿರುವುದರಿಂದ ಸರ್ಕಾರಕ್ಕೆ ಬರಬಾರದಂಥ ಕೆಟ್ಟ ಹೆಸರು ಇದರಿಂದ ಬಂದಿದೆ, ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಿಮಗೆ ಏನಾದರೂ ಅಹಂ ಇದ್ದರೆ ಚಿಂತೆ ಇಲ್ಲ. ಚುನಾವಣೆಯಲ್ಲಿ ಗೆಲ್ಲಬಹುದು ಎಂಬ ಅಹಂ ಇದ್ದರೆ ಇದರ ಪರಿಣಾಮವನ್ನು ನೀವು ಮುಂದೆ ಎದುರಿಸಬೇಕಾಗುತ್ತದೆ ಎಂದು ನಾನು ಸೂಚ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಪ್ರತಿ ಹಂತದಲ್ಲೂ ಸರ್ಕಾರವನ್ನು ತೆಗಳುತ್ತಾರೆ. ಸರ್ಕಾರದ ಬಗ್ಗೆ ಎಷ್ಟೊಂದು ಕಟುವಾದ ನಿಂದನೆಯ ಮಾತುಗಳನ್ನು ಆಡುವುದನ್ನು ತಾಲ್ಲೂಕು ಲೆವಲ್‌ನಲ್ಲಿರತಕ್ಕ ಪ್ರತಿಯೊಬ್ಬರಿಗೂ ಗೊತ್ತಿರತಕ್ಕ ವಿಷಯ. ಯಾವ ಪಕ್ಷದ ಸದಸ್ಯರೇ ಇರಲಿ ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ದಯಮಾಡಿ ಮಿಲ್ ಪಾಯಿಂಟ್ ಲೆವಿಯನ್ನು ಕಿತ್ತುಹಾಕಿ. ಹಿಂದೆ ಇದ್ದಂಥ ಲೆವಿ ಪದ್ಧತಿಯನ್ನೇ ತೆಗೆದುಕೊಂಡು ಬನ್ನಿ. ಹಿಂದಿನ ಪದ್ಧತಿ ಪ್ರಕಾರ ಒಂದು ಎಕರೆವರೆಗೆ ಇದ್ದಂಥ ರೈತನಿಗೆ ಲೆವಿ ಕೊಡಬೇಕಾದ್ದಿಲ್ಲ ಒಂದು ಎಕರೆಗ ಮೇಲ್ಪಟ್ಟು ಇದ್ದ ಅವನಿಗೆ ಇರತಕ್ಕಂಥ ವಿಸ್ತೀರ್ಣದ ಆಧಾರದ ಮೇಲೆ ಏಕರೇಜ್ ಮೇಲೆ ಫಿಕ್ಸ್ ಮಾಡುತ್ತಿದ್ದರೆ, ಇದರಿಂದ ರೈತನಿಗೆ ಯಾವುದೇ ರೀತಿಯಾದ ಕಿರುಕುಳ ಇರಲಿಲ್ಲ. ಇವತ್ತು ೫ ಕ್ವಿಂಟಾಲ್ ಪ್ಯಾಡಿಯನ್ನು ಮಿಲ್‌ನಲ್ಲಿ ಹಲ್ ಮಾಡಲಿಕ್ಕೆ ಪರವಾನಗಿ ಕೊಡುತ್ತೇವೆಂದು ಹೇಳಿದರೆ, ಈ ಪರವಾನಗಿ ತೆಗೆದುಕೊಳ್ಳಬೇಕಾದರೆ ಕಿರುಕುಳ ಎಷ್ಟಿದೆ ಎನ್ನುವುದನ್ನು ನೋಡಬೇಕು. ಮನೆಯಲ್ಲಿ ಯಾರಾದರೂ ತೀರಿಕೊಂಡು ಹೋದರೆ ಅವನ ತಿಥಿ ಮಾಡಲಿಕ್ಕೆ, ಅಕ್ಕಿ ಮಾಡಿಸಬೇಕು ಎಂದು ಮಿಲ್‌ಗೆ ತೆಗೆದುಕೊಂಡು ಹೋದರೆ ಅದರಲ್ಲಿ ಅರ್ಧ ಲೆವಿ ಕೊಡಿ ಎಂದು ಕೇಳುತ್ತಾರೆ. ಮನೆಯಲ್ಲಿ ಯಾವುದಾದರೂ ಮದುವೆ, ಮುಂಜಿ ಕಾರ್ಯಗಳಿಗೆ ಅಕ್ಕಿ ಮಾಡಿಸಲಿಕ್ಕೆ ಮಿಲ್‌ಗೆ ತೆಗೆದು

ಕೊಂಡುಹೋದರೆ ಅದರಲ್ಲಿ ಅರ್ಧ ಲೆವಿ ಕೊಡಬೇಕು. ಆದುದರಿಂದ ಎಲ್ಲಾ ಹಂತದಲ್ಲೂ ರೈತನಿಗೆ ಕಿರುಕುಳ ಜಾಸ್ತಿಯಾಗಿದೆ. ೫ ಕ್ವಿಂಟಾಲ್ ಪುಕ್ಕಟೆ ಹಲ್ ಮಾಡುವುದಕ್ಕೆ ಪರವಾನಗಿ ಕೊಡುತ್ತೇವೆ ಎಂದು ಹೇಳಿದರೆ ಯಾವನೋ ಗ್ರಾಮಸೇವಕ ಅದಕ್ಕೆ ಪರ್ಮಿಟ್ ಇಷ್ಯೂ ಮಾಡಬೇಕು. ಇಲ್ಲದೇಹೋದರೆ ಸಾಧ್ಯವಿಲ್ಲ. ಪ್ರತಿಯೊಂದು ಪರ್ಮಿಟ್‌ಗೆ ೨೫ ರೂಪಾಯಿ ಮಿನಿಮಂ ಕೊಡಬೇಕಾಗುತ್ತದೆ. ಅದಕ್ಕೆ ಲೆಕ್ಕ ಇಲ್ಲ. ಆದ್ದರಿಂದ ಈ ಮಿಲ್ ಪಾಯಿಂಟ್ ಲೆವಿಯನ್ನು ರದ್ದುಮಾಡಬೇಕು ಎಂದು ನಾನು ಬಹಳ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಕೇಂದ್ರಸರ್ಕಾರದವರು ನೆರವನ್ನು ಕೊಡಲಿ ಬಿಡಲಿ. ಒಟ್ಟಿನಲ್ಲಿ ಇದನ್ನು ರದ್ದು ಮಾಡಬೇಕು. We should not fall in line with the Government of India Policy. ಗತ್ಯಂತರವಿಲ್ಲದೆ ಆ ನಿಯಮವನ್ನು ಪಾಲಿಸಬೇಕಾಗಿ ಬಂತು ಎಂದು ಮುಖ್ಯ ಕಾರ್ಯದರ್ಶಿಗಳು ಹೇಳಿದರು. ಅವರಿಂದ ಆಗಬೇಕಾದಂಥ ಅನೇಕ ಸಹಾಯಗಳು ಇದ್ದರೂ ಕೂಡ ಕೆಲವು ಕೊರತೆಗಳನ್ನು ನೀಗಿಕೊಳ್ಳತಕ್ಕದ್ದರಲ್ಲಿ ನಮ್ಮ ಪ್ರಯತ್ನ ವಿಫಲವಾಯಿತು ಎಂದು ತಾವೇ ಹೇಳಿದಿರಿ. All efforts to enhance the quantities allotted by the Govt. of India did not bear much fruit. ಎಂದು ಹೇಳಿದಿರಿ. ಕೇಂದ್ರಸರ್ಕಾರದ ಧೋರಣೆಗೆ ಅನುಗುಣವಾಗಿ ಲೆವಿ ಕಲೆಕ್ಟ್ ಮಾಡುವುದಕ್ಕೆ ನಾವು ಮನಸ್ಸು ಮಾಡದೇ ಹೋದರೆ ತುಂಬಾ ಕಿರುಕುಳ ಆಗುತ್ತದೆ ಎಂದು ಮಾಜಿ ಮುಖ್ಯ ಕಾರ್ಯದರ್ಶಿಗಳಾದ ನರಸಿಂಹರಾಯರು ಹೇಳಿದರು.

೬-೦೦ ಪಿ. ಎಂ.

ಹಿಂದೆ ರಿಜರ್ವ್ ಬ್ಯಾಂಕ್‌ನವರು ತಿಳಿಸಿದ್ದಾರೆ ಆ ರೀತಿಯ ಕಟ್ಟುಪಾಡುಗಳಿವೆಯೆಂದು ನನಗೆ ತಿಳಿಸಿ ನನಗೆ ನನ್ನ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ವಾದವನ್ನು ಮಂಡನೆ ಮಾಡಿದ್ದರು. ಆದುದರಿಂದ ಅದು ಏನೇ ಇರಲ್ಲಿ ದಯಮಾಡಿ ಎಲ್ಲೆಲ್ಲಿ ಲೆವಿ ಸಿಸ್ಟಂ ಇದೆ ಈಗಿರತಕ್ಕ ಮಿಲ್ ಪಾಯಿಂಟ್ ರೀತಿಯಲ್ಲಿ ರೈತರಿಗೆ ಆಗಬಾರದು ಕಿರುಕುಳವಾಗುತ್ತಿದೆ. ಇದರ ಜೊತೆಗೆ ಎಲ್ಲೆಲ್ಲಿ ಹಲ್ ಆಗುತ್ತದೆಂದು ನಾವು ಸಾಧಾರಣವಾದ ಒಂದು ಲೆಕ್ಕವನ್ನು ಇಟ್ಟುಕೊಂಡಿದ್ದೀರಿ ಅದು ನಿಮ್ಮ ತಪ್ಪು ಕಲ್ಪನೆ. ಏತಕ್ಕೆಂದರೆ ಅವರು ಹಲ್ ಮಾಡುವಾಗ ಮೀಟರ್‌ನ್ನು ರೀಡಿಂಗ್‌ನ್ನು ಕಿತ್ತು ಹಾಕಿ ಕೆ.ಇ.ಬಿ.ಗೂ ಬರತಕ್ಕ ತೆರಿಗೆ ಲೆವಿಯನ್ನು ಹಾಳುಮಾಡುತ್ತಿದ್ದಾರೆ ಮತ್ತು ರೈತರಿಗೂ ಸಹ ಸಾಕಷ್ಟು ತೊಂದರೆಯನ್ನು ಕೊಡುತ್ತಿದ್ದಾರೆ. ಆದುದ ಂದ ಆ ವಿಷಯದ ಬಗ್ಗೆ ನೀವು ಯಾರಿಂದಲಾದರೂ ಬೇಕಾದರೆ ತಿಳಿದುಕೊಳ್ಳಿ ಆದುದರಿಂದ ಈಗಿರುವ ಲೆವಿ ಪದ್ಧತಿಯನ್ನು ಕಿತ್ತು ಹಾಕಿ ಹಿಂದೆ ಇದ್ದ ಪದ್ಧತಿಯನ್ನೇ ಜಾರಿಗೆ ತರಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಕೊನೆಯದಾಗಿ ನೀವು ಲೆವಿ ಪ್ರೈಜ್‌ನ್ನು ಫಿಕ್ಸ್ ಮಾಡುವಾಗ ಅವರ ಕಲ್ಟಿವೇಷನ್‌ಗೆ ಎಷ್ಟು ಖರ್ಚು ಬೀಳುತ್ತದೆ ಎಂಬುದನ್ನೆಲ್ಲಾ ಲೆಕ್ಕಾಚಾರ ಮಾಡಿ ಅವರಿಗೆ ಲೆವಿ ಪ್ರೈಜ್‌ನ್ನು ಎಷ್ಟು ಎಂದು ನಿಗದಿ ಮಾಡುವುದು ಒಳ್ಳೆಯದೆಂದು ಒತ್ತಾಯ ಮಾಡಿ ನಾನು ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ ಟಿ ರಾಮು (ಚನ್ನಪಟ್ಟಣ).—ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ನಾಡಿನ ನಾಗರೀಕರ ಜೀವನ ಉತ್ತಮವಾಗಿರಬೇಕಾದರೆ ಜನರು ನೆಮ್ಮದಿಯಿಂದ ಇರಬೇಕಾದರೆ ಆ ರಾಜ್ಯದಲ್ಲಿ ಆ ರಾಷ್ಟ್ರದಲ್ಲಿ ಆಹಾರ ಮತ್ತು ಸರಬರಾಜು ಇಲಾಖೆ ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ ಈ ಇಲಾಖೆ ತನ್ನದೇ ಆದ ಮಹತ್ವವಾದ ಪಾತ್ರವನ್ನು ಜನರ ಜೀವನದಲ್ಲಿ ವಹಿಸಬೇಕು ಅದಕ್ಕೆ ಮೊದಲನೆಯದಾಗಿ ಪ್ರಾಮಾಣಿಕತನವಿರಬೇಕು ಸತ್ಯ ಸಂಧತೆ ಇರಬೇಕು, ಬಡವರ ಬಗ್ಗೆ ಅನುಕಂಪವಿರಬೇಕು ಅಂದಾಗ ಮಾತ್ರ ಈ ಇಲಾಖೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬಹುದು ಎನ್ನತಕ್ಕ ಒಂದು ಮನೋಭಾವನೆ ಬರುತ್ತದೆ. ಒಬ್ಬ ಬಡವ ಬೆಳಿಗ್ಗೆ ಕೂಲಿಗೆ ಹೋಗುತ್ತಾನೆ, ಕೂಲಿಗೆ ಹೋಗಿ ಅವನು ಸಂಜೆಯವರೆಗೆ ದುಡಿದು ೧೦ ರೂಪಾಯಿ ಸಂಪಾದನೆ ಮಾಡಿಕೊಂಡು ಬರುತ್ತಾನೆ. ಆ ರೀತಿ ಸಂಪಾದನೆ ಮಾಡಿಕೊಂಡು ಬಂದ ಮೇಲೆ ಪುನಃ ಸಾಯಂಕಾಲ ಸೀಮೆ ಎಣ್ಣೆಗಾಗಿ, ರೇಷನ್‌ಗಾಗಿ ಅವನು ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲಬೇಕೆಂದು ಬಹಳ ಕಷ್ಟವಾಗುತ್ತದೆ. ಇದರಿಂದ ಅವನು ಎಷ್ಟೊ ಮನೋವೇದನೆ ಪಟ್ಟುಕೊಳ್ಳುತ್ತಾನೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಈ ಒಂದು ಕಾರಣದಿಂದ ಈ ಒಂದು ಇಲಾಖೆ ಬಹಳಷ್ಟು ಚೆನ್ನಾಗಿ ಕೆಲಸ ಮಾಡಬೇಕು. ಇವತ್ತಿನ ದಿವಸ ನಿಮ್ಮ ಇಲಾಖೆ ಸಾಕಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದೆ ಆದರೆ ಇನ್ನೂ ಬಹಳ ಚೆನ್ನಾಗಿ ಕೆಲಸ ಮಾಡಿದರೆ ತಮಗೂ ಒಂದು ಒಳ್ಳೆಯ ಹೆಸರು ಬರುತ್ತದೆ. ನಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ.

ಇವತ್ತಿನ ದಿವಸ ತಾಲ್ಲೂಕ್ ಮಟ್ಟದಲ್ಲಿ ಪಳ್ಳಿಗಳಲ್ಲಿ ಸೀಮೆ ಎಣ್ಣೆಯು ಹಂಚಿಕೆ ನಡೆಯುತ್ತಿದೆ. ಆದರೆ ಸೀಮೆ ಎಣ್ಣೆಯನ್ನು ಸರಿಯಾಗಿ ಹಂಚದೇ ಹೋದಾಗ ಒಂದು ಪರಿಣಾಮ ಸಾಮಾನ್ಯ ಜನರ ಮೇಲೆ ಆಗುತ್ತದೆ. ನಾನು ಸುಮಾರು ೨-೩ ತಿಂಗಳ ಹಿಂದೆ ನನ್ನ ಕ್ಷೇತ್ರಕ್ಕೆ ಪ್ರವಾಸ ಹೋದಾಗ ಕೆಲವರು ಹೇಳಿದರು ನಿಮ್ಮ ಯೋಗ್ಯತೆ ಸಾಕು ಹೋಗ್ರೀ ಒಂದು ಲೀಟರ್ ಸೀಮೆ ಎಣ್ಣೆಗೆ ೪ ರೂಪಾಯಿ ಕೊಡ ಬೇಕಾಗಿದೆ ಎನ್ನುವ ಮಾತನ್ನು ಹೇಳಿದರು.

ಶ್ರೀ ಜೆ. ಎಚ್. ಪಟೇಲ್,—ಅವರು ಬೈಯ್ದದ್ದು ಪೂರ್ತಿ ಹೇಳಿ, ಬರೀ ಅಷ್ಟೇ ಹೇಳಿದಿರೋ' ಇಲ್ಲ ಜನ ಇನ್ನೂ ಏನನ್ನಾದರೂ ಬೈಯ್ದರೋ ಅದನ್ನು ಹೇಳಿ.

ಶ್ರೀ ಡಿ. ಟಿ ರಾಮು.—ನಮ್ಮಲ್ಲಿ ಸೀಮೆ ಎಣ್ಣೆಯು ಸರಬರಾಜು ಆಗಿದೆ ಆದರೆ ಸರಿಯಾದ ಹಂಚಿಕೆಯಾಗಿಲ್ಲವೆಂದು ತಿಳಿದು ಬಂದಿದೆ ಇದು ಕಾಳಸಂತೆಯಲ್ಲಿ ಮಾರಾಟವಾಗಿದೆ ಅದನ್ನು ಚನ್ನಪಟ್ಟಣ ದಿಂದ ಬೆಂಗಳೂರಿಗೆ ತಂದು ಮಾರಾಟ ಮಾಡುತ್ತಿದ್ದಾರೆಂಬು ನನಗೆ ತಿಳಿದು ಬಂದಿದೆ. ಆದುದರಿಂದ ಈ ಕಾಳಸಂತೆ ಕೋರರು ಯಾರಿದ್ದಾರೆ ಅವರು ಯಾವ ಪಕ್ಷದವರೇ ಆಗಿರಲ್ಲಿ ಅಂಥವರು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡರೆ ಈಗ ಮಾತ್ರ ಸಾಮಾನ್ಯ ಜನರ ನೆಮ್ಮದಿಯನ್ನು ಕಾಪಾಡಬಹುದು ಎನ್ನ ತಕ್ಕದ್ದು ನನ್ನ ಮನವಿ ಆ ದೃಷ್ಟಿಯಿಂದ ನಾನು ಒಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ, ಅದು ಏನೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಶಾಸಕರನ್ನೊಳಗೊಂಡು ಸಮಿತಿಯನ್ನು ಮಾಡಿ ಆಹಾರ ವಿತರಣೆ ಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ರಾಮದೇವ್—ಶಾಸಕರ ಸಮಿತಿಯನ್ನು ಮಾಡಿದರೆ ಚುನಾವಣೆಗೆ ಬಹಳ ಅನುಕೂಲ ವಾಗುತ್ತದೆ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ಚುನಾವಣೆ ಬರುತ್ತದೆ ಹೋಗುತ್ತದೆ ಅದು ಬೇರೆ ವಿಷಯ ಇನ್ನು ೪-೫ ತಿಂಗಳಾದ ಮೇಲೆ ನಿಮ್ಮ ಪ್ರತಾಪವನ್ನು ತೋರಿಸಿ. ಮೊನ್ನೆ ಚುನಾವಣೆ ನಡೆಯಲ್ಲಿಲ್ಲವೇ ಹೊಸದುರ್ಗ, ಬೀದರ್‌ನಲ್ಲಿ ಚುನಾವಣೆ ಆಯಿತು, ಅಲ್ಲಿ ಏನಾಯಿತು ಎಂಬುದು ನಿಮಗೇ ಗೊತ್ತಿದೆ. ಆದುದರಿಂದ ಚುನಾವಣೆಗೋಸ್ಕರವಾಗಿ ಇದನ್ನು ಮಾಡಬೇಕೆಂದು ಹೇಳುತ್ತಿಲ್ಲ. ಇದನ್ನು ಮಾನ್ಯ ಸದಸ್ಯರು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಆ ರೀತಿ ಒಂದು ಸಮಿತಿಯನ್ನು ಮಾಡಿದರೆ ಆಹಾರದ ವಿತರಣೆ ನಿಷ್ಪಕ್ಷಪಾತವಾಗಿ ಹಂಚಿಕೆಯಾಗುತ್ತದೆ ಎನ್ನತಕ್ಕದ್ದು ನನ್ನ ಮನೋ ಭಾವನೆ, ಎರಡನೆಯದಾಗಿ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅನೇಕ ಜನ ಪದವೀಧರರಿದ್ದಾರೆ ಅವರಿಗೆ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಿ ಅದರಿಂದ ಅವರ ನಿರುದ್ಯೋಗವನ್ನು ನಿವಾರಣೆ ಮಾಡಿದ ಹಾಗಾಗುತ್ತದೆ ಜೊತೆಗೆ ಆಹಾರದ ವಿತರಣೆಯೂ ಸಹ ಸಮರ್ಪಕವಾಗಿ ಸಾಮಾನ್ಯ ಜನರಿಗೂ ಅನುಕೂಲವಾಗುತ್ತದೆ ಆದುದರಿಂದ ಈ ಪ್ರಯತ್ನವನ್ನು ತಾವು ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮೂರನೆಯದಾಗಿ, ಇವತ್ತಿನ ದಿವಸ ಲೆವಿ ಪದ್ಧತಿ ಬಂದಿದೆ. ಇದು ಸರಿಯಾಗಿದೆಯೋ ಇಲ್ಲವೋ ಎನ್ನುವ ಬಗ್ಗೆ ನಾವು ವಿಚಾರ ಮಾಡ ಬೇಕಾಗಿದೆ, ಈಗ ಬೆಳೆಯತಕ್ಕ ರೈತರ ಈ ಲೆವಿ ಪದ್ಧತಿಯನ್ನು ಎನ್‌ಫೋರ್ಸ್‌ಮೆಂಟ್ ಕೊಡತಕ್ಕ ಅಧಿಕಾರಿ ಹತ್ತಿರ ಹೋಗಿ, ನಾನು ೩ ಕ್ವಿಂಟಾಲ್ ಭತ್ತವನ್ನು ಮಿಲ್ ಮಾಡಬೇಕಾಗಿದೆ ಅದಕ್ಕೆ ಪರ್ಮಿಷನ್ ಕೊಡಿ ಎಂದರೆ ಅವನು ಎಷ್ಟು ಕಷ್ಟಪಡಬೇಕಾಗಿದೆ ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಈ ಒಂದು ಕಾರಣದಿಂದ ಹಿಂದೆ ಏನು ಪದ್ಧತಿಯಿತ್ತು ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿ ಎಂದು ಸಲಹೆ ಮಾಡಬಯಸುತ್ತೇನೆ. ಇನ್ನು ಇವತ್ತಿನ ದಿವಸ ರೈತ ಬೆಳೆದ ಬೆಳೆಗೆ ಬೆಂಬಲ ಬೆಲೆ ಸರಿಯಾಗಿ ನಿಗದಿ ಮಾಡುತ್ತಿಲ್ಲ. ಇವತ್ತು ನಮಗೆ ಉದಾ ಹರಣೆಗೆ ಹೇಳಬೇಕೆಂದರೆ ಫೇಸ್ ಪೌಡರನ್ನು ತಯಾರಿಸತಕ್ಕವರು ಟೂತ್ ಪೌಡರನ್ನು ತಯಾರಿಸ ತಕ್ಕವರು ತಮ್ಮ ತಮ್ಮ ವಸ್ತುಗಳ ಬೆಲೆ ಇಷ್ಟು ಆಗುತ್ತದೆಂದು ನಿರ್ಧರಿಸಿ ಅಷ್ಟಕ್ಕೇ ಮಾರುತ್ತಾರೆ. ನನ್ನ ಟೂತ್ ಪೌಡರ್‌ಗೆ ೩೦ ಗ್ರಾಂ ಎರಡೂವರೆ ರೂಪಾಯಿ ಎಂದು ನಿಖರವಾಗಿ ಹೇಳಿ ಅಷ್ಟಕ್ಕೇ ಮಾರುತಾನೆ. ಆದಕ್ಕೆ ಜನ ಯಾರೂ ಮಾತನಾಡುವ ಹಾಗಿಲ್ಲ. ಅದೇ ರೀತಿ ಇತರೇ ವಸ್ತುಗಳನ್ನು ತಯಾರಿಸುವವರು ತಮ್ಮ ತಮ್ಮ ಬೆಲೆಯನ್ನು ನಿಗದಿ ಮಾಡಿ ಹೇಳುತ್ತಿದ್ದಾರೆ. ಆದರೆ ಇವತ್ತು ರೈತ ತಾನು ಬೆಳೆದಂಥ ಬೆಳೆಗೆ ಬೆಲೆಯನ್ನು ನಿಗದಿ ಪಡಿಸಿ ಹೇಳುವ ಹಾಗಿಲ್ಲ. ಆದುದರಿಂದ ರೈತರನ್ನು

ಸೇರಿಸಿ ಒಂದು ಸಮಿತಿಯನ್ನು ಮಾಡಿ ಅವರೇ ತಮ್ಮ ಬೆಳೆಗೆ ಬೆಲೆಯನ್ನು ನಿಗದಿ ಮಾಡುವ ಹಾಗೆ ಮಾಡಬೇಕೆಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನೀವು ೧೨೦ ಪ್ಲಸ್ ೧೦ ರೂಪಾಯಿ ಬೋನಸ್ ಎಂದು ಕೊಡುತ್ತಿದ್ದೀರಿ, ಅದು ಏನೇನೂ ಸಾಲದು ಇವತ್ತಿನ ದಿವಸ ರೈತರು ಉಪಯೋಗಿಸುವ ಗೊಬ್ಬರದ ಬೆಲೆ ಶೇಕಡಾ ೧೦೦ರಷ್ಟು ಏರಿದೆ. ಕ್ರಿಮಿನಾಶಕ ಬೆಲೆ ಕೂಡ ಹೆಚ್ಚಿದೆ ಹೀಗೆಲ್ಲಾ ಇರುವಾಗ ಇವತ್ತಿನ ದಿವಸ ನೀವು ರೈತರಿಗೆ ಸಪೋರ್ಟ್ ಪ್ರೈಜ್ ಎಂದು ಏನು ನಿಗದಿ ಮಾಡುತ್ತಿದ್ದೀರಿ ಅದು ಬಹಳ ಕಡಿಮೆ ಇದೆ ಇವತ್ತು ಬೋನಸ್ ಸೇರಿಸಿ ೧೨೦, ೧೩೦ ರೂಪಾಯಿ ಗಳನ್ನು ನಿಗದಿ ಮಾಡುವ ಬದಲು ೧೫೦ ರೂಪಾಯಿಗಳನ್ನಾದರೂ ನಿಗದಿ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಸಹಕಾರ ಸಂಸ್ಥೆಗಳು ರೈತರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸ್ಥಾಪಿತವಾಗಿವೆ. ಇದು ಕ್ವಿಂಟಾಲ್ ಬತ್ತ ತೆಗೆದುಕೊಂಡು ಹೋದರೆ ಅದು ಹಸಿಯಾಗಿದೆ, ಜೊಳ್ಳಾಗಿದೆ, ಎಂದು ಏನೋ ಹೇಳಿ ಒಂದು ಕ್ವಿಂಟಾಲ್‌ಗೆ ೧೫–೨೦ ಕೆ.ಜಿ.ಯಷ್ಟು ಭತ್ತವನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಇದು ರೈತನಿಗೆ ಮಾಡತಕ್ಕ ಮೋಸ. ಇದನ್ನು ತಪ್ಪಿಸಲು dryage ಏನಿದೆ ಅದನ್ನು ನಿಲ್ಲಿಸಬೇಕೆಂದು ಸರ್ಕಾರ ಆಜ್ಞೆಯನು ಹೊರಡಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿ ಕೊಳ್ಳುತ್ತೇನೆ. ಇನ್ನು ಅಗತ್ಯ ವಸ್ತುಗಳ ಬಗ್ಗೆ ಹೇಳಬೇಕೆಂದರೆ ಸಾಮಾನ್ಯ ಜನರು ಬದುಕಬೇಕಾದರೆ ಅಗತ್ಯವಸ್ತುಗಳ ಪೂರೈಕೆ ಚೆನ್ನಾಗಿ ಆಗಬೇಕು. ಬಡವನಿಗೆ ಅರಮನೆ ಬೇಕಾಗಿಲ್ಲ. ಗುಡಿಸಲು ಬೇಕು. ತಿನ್ನುವುದಕ್ಕೆ ಶ್ರೀಮಂತ ಆಹಾರ ಬೇಕಾಗಿಲ್ಲ. ಸ್ವಲ್ಪ ಹಿಟ್ಟು, ಅನ್ನ ಬೇಕು. ಅವನಿಗೆ ಗ್ಯಾಬರ್ಡಿನ್ ಸೂಟ್ ಬೇಕಾಗಿಲ್ಲ, ಸಾಮಾನ್ಯ ದರ್ಜೆಯ ಬಟ್ಟೆ ಸಾಕು. ರಿಯಾಯಿತಿ ದರದಲ್ಲಿ ಗಿರಣಿಗಳಿಂದ ಬಟ್ಟೆ ಒದಗಿಸತಕ್ಕ ವ್ಯವಸ್ಥೆಮಾಡಬೇಕು. ಸರ್ಕಾರದವರು ಅದನ್ನು ಮಾಡುತ್ತಿದ್ದರೂ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾಡುವ ಅವಶ್ಯಕತೆ ಇದೆ, ಕಡಿಮೆ ದರದಲ್ಲಿ ಕೊಡುವುದಕ್ಕೆ ೧೦ ಸಾವಿರ ಪಂಚೆಗಳು ನಮ್ಮ ಊರಿಗೆ ಬಂದವು. ಮಾರನೇ ದಿನ ಅದನ್ನು ತೆಗೆದುಕೊಳ್ಳುವುದಕ್ಕೆ ಎಲ್ಲಾ ಜನರು ಕ್ಯೂ ನಿಂತು ಕೊಂಡರು. ಅಷ್ಟರೊಳಗೆ ಕೆಲವು ಪಂಚೆಗಳು ಅಂಗಡಿಗೆ ಹೋಗಿದ್ದವು. ಏಕೆಂದರೆ ರಿಯಾಯಿತಿ ದರದ ಬಟ್ಟೆ ೮ ರೂಪಾಯಿ ಆದರೆ ಅಂಗಡಿಯಲ್ಲಿ ಅದೇ ಸಂಜೆ ೨೫ ರೂಪಾಯಿ ಕೊಟ್ಟರೂ ಸಿಗುವುದಿಲ್ಲ. ಆ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿದ್ದರೂ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇಂಥಾದ್ದು ಆಗ ಬಾರದು. ಈ ರೀತಿ ಮಾಡುವ ಜನರನ್ನು ಉಗ್ರವಾಗಿ ಶಿಕ್ಷೆ ಮಾಡಲು ಮಿನಿ ಮೀಸಾ ಜಾರಿಗೆ ತರಬೇಕು. ೧೦ ಜನರಿಗೆ ಬಿಸಿ ಮುಟ್ಟಿಸಿದರೆ ಹನ್ನೊಂದನೆಯವನು ಎಚ್ಚೆತ್ತುಕೊಳ್ಳುತ್ತಾನೆ. ಇಲ್ಲ ದಿದ್ದರೆ ಇದೇ ಜನ ಬ್ಲಾಕ್‌ಮಾರ್ಕೆಟಿಂಗ್, ಹೊರ್ಡಿಂಗ್ ಎಲ್ಲವನ್ನೂ ಮಾಡುತ್ತಾರೆ. ಆದ್ದರಿಂದ ಇದನ್ನು ತಪ್ಪಿಸಲು ಉಗ್ರವಾದ ಶಿಕ್ಷೆಯನ್ನು ವಿಧಿಸಲು ಅನುಕೂಲವಾಗುವಂತೆ ಕಾನೂನನ್ನು ಜಾರಿಗೆ ತರಬೇಕು. ಈ ಇಲಾಖೆ ಚೆನ್ನಾಗಿ ಕೆಲಸ ಮಾಡಬೇಕು ಜನಸಾಮಾನ್ಯರ ಜೀವನದಲ್ಲಿ ಪ್ರಭಾವವನ್ನು ನೈಜವಾದ ರೀತಿಯಲ್ಲಿ ಆಗಬೇಕು ಎಂದು ಹೇಳಿ, ಮುಂದಿನ ವರ್ಷಗಳಲ್ಲಿ ಇಂಥ ಲೋಪದೋಷಗಳಿಗೆ ಅವಕಾಶ ಕೊಡಬಾರದೆಂದು ಕೇಳಿಕೊಂಡು, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೆ ನಾನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬೇಡಿಕೆ ವಿಚಾರದಲ್ಲಿ ಹೆಚ್ಚಿನ ವಿಷಯಗಳನ್ನು ಪ್ರಸ್ತಾಪ ಮಾಡು ವುದಿಲ್ಲ. ಈಗಾಗಲೇ ಅನೇಕರು ಈ ಬಗ್ಗೆ ಮಾತನಾಡಿರುವುದರಿಂದ ನಾನು ಕೆಲವು ವಿಷಯಗಳ ಬಗ್ಗೆ ಮಾತ್ರ ಹೇಳುತ್ತೇನೆ. ಲೆವಿ ಬಗ್ಗೆ ಆ ಕಡೆ ಸದಸ್ಯರಲ್ಲಿ ಮತ್ತು ಈ ಕಡೆ ಸದಸ್ಯರಲ್ಲಿ ಯಾವ ಭಿನ್ನಾಭಿ ಪ್ರಾಯವೂ ಇಲ್ಲ. ಮಿಲ್ ಪಾಯಿಂಟ್ ಲೆವಿಯಿಂದ ರೈತನಿಗೆ ಕಿರುಕುಳವಾಗುವುದರ ಜೊತೆಗೆ ತುಂಬ ಲಾರದ ಹಾನಿಯಾಗುತ್ತಿದೆ. ಅಲ್ಲದೆ ಭ್ರಷ್ಟಾಚಾರಕ್ಕೆ ಹೆಬ್ಬಾಗಿಲು ತೆರೆದಂತಾಗಿದೆ. ಆ ವಿಚಾರದಲ್ಲಿ ನಾನು ವಿವರವಾಗಿ ಹೇಳುವುದಿಲ್ಲ. ಏಕೆಂದರೆ ಹೊಸ ಲೆವಿ ನೀತಿ ನಿರ್ಧಾರ ಮಾಡುವುದಕ್ಕಿಂತ ಮೊದಲು ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆಗ ನಾವು ಮನವರಿಕೆ ಮಾಡಿಕೊಡುತ್ತೇವೆ. ಕೇಂದ್ರ ಸರ್ಕಾರ ನೀತಿಗೆ ಒಳಪಟ್ಟೇ ಬೇರೆ ರಾಜ್ಯಗಳಲ್ಲಿ ಮಿಲ್ ಪಾಯಿಂಟ್ ಲೆವಿಯನ್ನು ಒಪ್ಪಿಕೊಂಡಿಲ್ಲ. ನಮ್ಮ ರಾಜ್ಯಕ್ಕೆ ಯಾವ ರೀತಿ ಮಾಡಿದರೆ ಲಾಭದಾಯಕ ವಾಗುತ್ತದೆ, ರೈತರಿಗೆ, ಗ್ರಾಹಕರಿಗೆ ಅನುಕೂಲವಾಗುತ್ತದೆ ಆ ರೀತಿಯಲ್ಲಿ ನಮ್ಮ ನೀತಿಯನ್ನು ಮಾರ್ಪಾಡು ಮಾಡಬೇಕಾಗುತ್ತದೆ. ಮಿಲ್‌ನಿಂದ ಯಾವ ರೀತಿ ಅಕ್ಕಿಯನ್ನು ಲೆಕ್ಕ ಇಲ್ಲದೆ ಗೋವಾ, ಕೇರಳ ಮುಂತಾದ ರಾಜ್ಯಗಳಿಗೆ ರವಾನೆ ಮಾಡುತ್ತಿದ್ದಾರೆ ಎಂಬುದನ್ನು ನನ್ನ ಜೊತೆಯಲ್ಲಿ ಬಂದರೆ

ತೋರಿಸಿಕೊಡುತ್ತೇನೆ. ನಾನು ಈ ವಿಷಯನ್ನು ಹೋದ ಸಾರಿಯೇ ಹೇಳಿದ್ದೇನೆ. ಚೆಕ್‌ಪೋಸ್ಟಿನಲ್ಲಿ ಬೇಕಾದರೆ ನಾವು ನೀವು ಹೋಗಿ ಕುಳಿತು ನೋಡೋಣ. ಯಾವ ರೀತಿ ಹೋಗುತ್ತದೆ ಎಂಬುದನ್ನು ತೋರಿಸಿಕೊಡುತ್ತೇನೆ. ಪ್ರತಿನಿತ್ಯ ಇದು ನಡೆಯುತ್ತಿದೆ. ನಾವು ಹೋಗುತ್ತಿದೆ ಎನ್ನುವುದು, ನೀವು ಇಲ್ಲ ಎನ್ನುವುದು ಮಾಡಿದರೆ ಪ್ರಯೋಜನವಾಗುವುದಿಲ್ಲ. ೫೦ ಪರ್ಸೆಂಟ್ ಮಿಲ್ ಪಾಯಿಂಟ್ ಲೆವಿ ಕೊಡಬೇಕು ಎಂದು ನೀವೇ ಕಾನೂನು ಮಾಡಿದ್ದೀರಿ. ಮತ್ತೆ ಅದನ್ನು ನೀವೇ ಮುರಿಯುತ್ತಿದ್ದೀರಿ. ಏತಕ್ಕೋಸ್ಕರ ಈ ಟಾರ್ಜೆಟ್ ನಿಗದಿ ಮಾಡಿದ್ದೀರಿ? ಇದರ ಅವಶ್ಯಕತೆ ಇಲ್ಲ. ಮಿಲ್‌ನಲ್ಲಿ ಎಷ್ಟು ಅಕ್ಕಿ ಆಗುತ್ತದೋ ಅದರಲ್ಲಿ ಅರ್ಧ ಕೊಡಬೇಕು. ಅದರ ಪ್ರಕಾರ ೫೦ ಪರ್ಸೆಂಟ್ ಲೆವಿ ಕೊಡಬೇಕು. ೫೦ ಪರ್ಸೆಂಟ್ ಲೆವಿ ಫಿಕ್ಸ್ ಮಾಡಿ ಟಾರ್ಜೆಟ್ ಕಡಿಮೆ ಫಿಕ್ಸ್ ಮಾಡುತ್ತಿದ್ದೀರಿ. ಅಂದರೆ ನೀವು ಮಾಡಿದ ಕಾನೂನನ್ನು ನೀವೇ ಮುರಿದಂತಾಗುತ್ತಿದೆ. ಈ ವರದಿಯಲ್ಲಿ ಹೇಳಿರುವ ಪ್ರಕಾರ ೧೯೮೨ನೇ ಫೆಬ್ರುವರಿ ೨೭ರವರೆಗೆ ನೀವು ಖರೀದಿ ಮಾಡಿರುವ ಎರಡು ತರಹದ ಅಕ್ಕಿ ಒಂದು ಲಕ್ಷ ಟನ್‌ಗಿಂತ ಕಡಿಮೆ ಇದೆ. ರೈತರಿಂದ ವಸೂಲು ಮಾಡುವಾಗ ಕೂಡ ಒಂದೂ ಕಾಲ ಲಕ್ಷ ಟನ್ ವಸೂಲು ಮಾಡಿದ್ದೀ . ಇದು ಫೆಬ್ರುವರಿಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಈ ತಿಂಗಳಲ್ಲಿ ಸ್ವಲ್ಪ ಹೆಚ್ಚಾಗಬಹುದು. ೧೦ ಸಾವಿರ ೨೦ ಸಾವಿರ ಟನ್ ಹೆಚ್ಚಾಗಬಹುದು. ನಾನು ನಿಮ್ಮ ಲೆಕ್ಕದ ಪ್ರಕಾರ ಹೇಳುತ್ತಿದ್ದೇನೆ. ನಿಮ್ಮ ಲೆಕ್ಕ ಏನಾದರೂ ತಪ್ಪಿದ್ದರೆ ನನಗೆ ಗೊತ್ತಿಲ್ಲ. ನಿಮ್ಮ ಟಾರ್ಜೆಟ್ ಇಷ್ಟು ಎಂದು ನೀವು ನಿಗದಿ ಮಾಡಿದ ಮೇಲೆ ಅದನ್ನೂ ವಸೂಲು ಮಾಡಿಲ್ಲ. ಮತ್ತೆ ೫೦ ಪರ್ಸೆಂಟ್ ಲೆವಿ ಫಿಕ್ಸ್ ಮಾಡಿರುವುದರಿಂದ ಮಿಲ್‌ನವರು ವ್ಯಾಪಾರಸ್ಥರು ಈ ರೀತಿ ಆದರೆ ಕೊಡು, ಇಲ್ಲದಿದ್ದರೆ ಬೇಡ ಎಂದು ರೈತನಿಗೆ ಹೇಳುತ್ತಾರೆ. ರೈತ ಹೊರಗೆ ಒಯ್ಯುವ ಹಾಗಿಲ್ಲ, ಮನೆಯಲ್ಲಿ ಇಟ್ಟುಕೊಳ್ಳುವ ಹಾಗಿಲ್ಲ. ಕೊನೆಗೆ ಕಡಿಮೆ ಬೆಲೆಗೆ ಮಾರಿ ರೈತರು ಕಷ್ಟಕ್ಕೀಡಾಗಿದ್ದಾರೆ. ಕೇಂದ್ರ ಸರ್ಕಾರದ ನೀತಿಯನ್ನು ಅನೇಕ ಸಲ ಒಪ್ಪದೇ ಇರುವ ಸನ್ನಿವೇಶಗಳಿವೆ. ರಾಜ್ಯ ಸರ್ಕಾರ ತನಗೆ ಸರಿಯಾದ ನೀತಿಯನ್ನು ಕೇಂದ್ರದವರಿಗೆ ತಿಳಿಸಿ ಹೇಳಿ ಅವರ ಮನವೊಲಿಸುವ ಪ್ರಯತ್ನ ಮಾಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದಿಂದ ಬಂದಿರುವ ನಾವೆಲ್ಲರೂ ಈ ನೀತಿ ಸರಿಯಲ್ಲ, ಇದನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತಿದ್ದೇವೆ. ಇದರಲ್ಲಿ ಪಕ್ಷಭೇಧವಿಲ್ಲ. ಈ ನೀತಿ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುವುದರಿಂದ ರೈತರಿಗೆ ಗ್ರಾಹಕರಿಗೆ ತೊಂದರೆಯಾಗಿರುವುದರಿಂದ ತಮ್ಮ ಮನೋಧೋರಣೆ ಬದಲಾವಣೆ ಮಾಡಿಕೊಳ್ಳಬೇಕು, ಆದ್ದರಿಂದ ಗ್ರಾಹಕರ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ, ಈ ನೀತಿಯನ್ನು ಬದಲಾವಣೆ ಮಾಡಿ.

ವಿವರಗಳನ್ನು ಸಭೆ ಕರೆದಾಗ ನಾನು ಕೊಡುತ್ತೇನೆ. ಆಗ ಮನವರಿಕೆ ಮಾಡಿಕೊಡುತ್ತೇನೆ. ಇನ್ನು ತಮ್ಮ ಫುಡ್ ಕಾರ್ಪೊರೇಷನ್ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ ಮತ್ತು ವರದಿಯಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದೇವೆ. ಕರ್ನಾಟಕ ಫುಡ್ ಕಾರ್ಪೊರೇಷನ್ ಹುಟ್ಟಿದಾಗಿನಿಂದ ಇಲ್ಲಿಯವರೆಗೆ ನೋಡಿದರೆ ಅಲ್ಲಿರತಕ್ಕ ಅವ್ಯವಹಾರ, ಅಪವ್ಯಯ ಆಡಳಿತದಲ್ಲಿರತಕ್ಕ ದುರವಸ್ಥೆ ಬೇರೆ ಎಲ್ಲಿಯೂ ಇಲ್ಲ. ಇದುವರೆಗೆ ಅಲ್ಲಿ ಆಡಿಟ್ ಆಗಿಲ್ಲ. ಪ್ರತಿವರ್ಷ ಆಡಿಟ್ ಆಗುವುದಕ್ಕೆ ಏನು ತೊಂದರೆ ಇದೆ ? ಆಡಿಟ್ ಆಗದೆ ಇರುವುದರಿಂದ ಅನೇಕ ಸಮಸ್ಯೆಗಳು ಉದ್ಭವವಾಗಿವೆ. ನಿಮ್ಮ ಕೋ-ಆಪರೇಟೀವ್ ಏಜೆಂಟ್ಸ್ ಏನಿದ್ದಾರೆ ಅವರು ಏನು ಹೇಳುತ್ತಾರೆಂದರೆ ನಮಗೆ ಬರತಕ್ಕ ಕಮೀಷನ್ ಹೋಗುತ್ತಿದೆ ಎಂದು ಹೇಳುತ್ತಾರೆ. ಮಾರ್ಕೆಟಿಂಗ್ ಸೊಸೈಟಿಗಳು ಕೂಡ ಆಡಿಟ್ ಆಗಿಲ್ಲ, ಅವುಗಳಿಂದ ನಮಗೆ ಇಷ್ಟು ಹಣ ಬರಬೇಕಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ಎಷ್ಟು ಹಣ ಇದೆ ಎಂಬುದನ್ನು ಕಮಿಟಿ ರಿಪೋರ್ಟ್‌ನಲ್ಲಿ ಹೇಳಿದ್ದೇವೆ. ಶ್ರೀ ಕೆ.ಹೆಚ್. ಪಾಟೀಲರು ಆಹಾರ ಮಂತ್ರಿಗಳಾಗಿದ್ದಾಗ ಒಂದು ಸಭೆ ನಡೆಯಿತು. ಆಗ ಅವರು, ೬ ತಿಂಗಳಲ್ಲಿ ರೀ-ಕನ್ಸಿಲಿಯೇಷನ್ ಆಫ್ ಅಕೌಂಟ್ಸ್ ಆಗಬೇಕೆಂದು ಆಜ್ಞೆ ಮಾಡಿದರು. ಆದರೆ ಅದು ಇದುವರೆಗೆ ಆಗಲಿಲ್ಲ. ಯಾವಾಗ ಆಗುತ್ತದೋ ಗೊತ್ತಿಲ್ಲ. ಇದಕ್ಕೆ ಸ್ಪೆಷಲ್ ಎಫರ್ಟ್ ತೆಗೆದುಕೊಂಡು ಮಾಡಬೇಕಾಗುತ್ತದೆ. ಒಂದು ಸಾರಿ ಲೆಕ್ಕ ಕ್ಲಿಯರ್ ಆಗಬೇಕು, ಆದರೆ ಏತಕ್ಕೆ ಮಾಡುತ್ತಿಲ್ಲ ? ಯಾವ ಮಾರ್ಕೆಟಿಂಗ್ ಸೊಸೈಟಿಯವರು ಹೊಡೆದಿದ್ದಾರೆಂಬುದು ರೀ-ಕನ್ಸಿಲಿಯೇಷನ್ ಆಫ್ ಅಕೌಂಟ್ಸ್ ಆಗದೆ ಗೊತ್ತಾಗುತ್ತಿಲ್ಲ. ಫುಡ್ ಕಾರ್ಪೊರೇಷನ್ನಿನಿಂದ ಎಷ್ಟು ಹಣ ಕೊಟ್ಟಿದ್ದಾರೆಂಬುದು ಗೊತ್ತಿಲ್ಲ. ರೈತ ಬೆಳೆದ ಪದಾರ್ಥಗಳನ್ನು ಅವನು ಬೇಡಿದ ಅರ್ಧಬೆಳೆಗೆ ತೆಗೆದುಕೊಳ್ಳುತ್ತಿದ್ದಾರೆ. ಆ ರೀತಿ ತೆಗೆದುಕೊಂಡ ಮೇಲೆ ಸಮಾಜಕ್ಕೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಅವರು ಕೊಡುವುದು ಕೊಟ್ಟೇ ಕೊಡುತ್ತಾರೆ. ಆದರೆ ಅದರಿಂದ ಗ್ರಾಹಕರಿಗೇನಾದರೂ ಲಾಭ ಇದೆಯೇ? ಇಲ್ಲ. ಈ

ಕಡೆ ರೈತನ ತಲೆ ಹೊಡೆಯುತ್ತಿದ್ದಾರೆ. ಆ ಕಡೆ ಗ್ರಾಹಕರನ್ನು ಕೊಲೆ ಮಾಡುತ್ತಿದ್ದಾರೆ. ಒಂದು ಕ್ವಿಂಟಾಲ್ ಅಕ್ಕಿಗೆ ಸಾರಿಗೆ ಖರ್ಚು, ಹಲ್ಲಿಂಗ್ ಚಾರ್ಜ್ ಇತ್ಯಾದಿ ವೆಚ್ಚಗಳು ಎಷ್ಟು ಬರುತ್ತದೆಂಬುದನ್ನು ನಿಮ್ಮ ಅಧಿಕಾರಿಗಳು ಪರಿಶೀಲಿಸಿ ನೋಡಬೇಕು. ನೂರಾರು ಕಿಲೋಮೀಟರ್ ಸಾಗಣೆ ಮಾಡುವುದಕ್ಕೆ ಬದಲಾಗಿ ಯಾವ ಭಾಗದಲ್ಲಿ ಅಕ್ಕಿಯನ್ನು ಸಂಗ್ರಹ ಮಾಡಿರುತ್ತಾರೋ ಆ ಭಾಗದಲ್ಲೇ ಅದನ್ನು ಹಂಚುವ ವ್ಯವಸ್ಥೆ ಮಾಡುವುದಕ್ಕೆ ಏನು ತೊಂದರೆ ಇದೆ ? ತುರ್ತು ಪರಿಸ್ಥಿತಿಯಲ್ಲಿ ಬೇಕಾದರೆ ಮಳೆ ಬಂದಿಲ್ಲ, ಬೆಳೆ ಆಗಿಲ್ಲವೆಂದು ಬೇಕಾದ ಕಡೆಗೆ ಸಾಗಿಸಬಹುದು. ಆದರೆ ಎಲ್ಲ ಕಾಲದಲ್ಲೂ ಸಾಗಿಸುವುದು ಸೂಕ್ತವಲ್ಲ ಇದಕ್ಕೆಲ್ಲ ಕಾರಣ ಯಾರು ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಯೋಚನೆ ಮಾಡುವುದಿಲ್ಲ ಎಂಬುದು ಒಂದು. ಎರಡನೆಯದು ಇದರಲ್ಲಿ ದುಡ್ಡು ಹೊಡೆಯತಕ್ಕ ಅವಕಾಶ ಮಾಡಿ ಕೊಟ್ಟಿರುವುದು. ಟ್ರಾನ್ಸ್‌ಪೋರ್ಟ್ ಕಂಟ್ರಾಕ್ಟರುಗಳು ಯಾರು? ಅವರದೊಂದು ದೊಡ್ಡ ಇತಿಹಾಸವೇ ಇದೆ. ಆ ಕೆಲಸ- ವನ್ನು ಯಾರಿಗೆ ಕೊಡುತ್ತಿದ್ದೀರಿ, ಯಾರು ಮಾಡುತ್ತಿದ್ದಾರೆ ? ಫುಡ್ ಕಾರ್ಪೋರೇಷನ್ನಿನ ಕೆಲಸವನ್ನು ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು ನೋಡಬೇಕಾಗುತ್ತದೆ. ಇದು ಒಂದು ಬಿಳಿ ಆನೆ ಇದ್ದ ಹಾಗೆ ಈ ಇಲಾಖೆಗೆ. ಇದನ್ನು ಕರಿ ಆನೆ ಮಾಡಬೇಕಾಗುತ್ತದೆ. ಅಲ್ಲಿಯ ವರೆಗೆ ಯಾರಿಗೂ ಉಳಿಗಾಲವಿಲ್ಲ.

ಒಬ್ಬರು ಮಾನ್ಯ ಸದಸ್ಯರು.—ಐರಾವತ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಐರಾವತ ಮಾಡಿದರೆ ಒಳ್ಳೆಯದು. ಇವತ್ತು ಈ ಇಲಾಖೆಯ ಕೆಲಸವನ್ನು ಕಣ್ಣಿಗೆ ಎಣ್ಣೆ ಹಾಕಿಕೊಂಡು ನೋಡಬೇಕಾಗಿರುವುದರಿಂದ ದಯವಿಟ್ಟು ಈ ಬಗ್ಗೆ ಸರಿಯಾದ ರೀತಿಯಲ್ಲಿ ತನಿಕೆ ಮಾಡಿಸಿ, ತನಿಕೆ ಮಾಡಿಸಿದರೆ ಅದರಲ್ಲಿ ಎಲ್ಲ ಹೊರಬರುತ್ತದೆ. ಎಲ್ಲ ಅಧಿಕಾರಿಗಳೂ ಆ ರೀತಿ ಇದ್ದಾರೆಂದು ಹೇಳುವುದಕ್ಕೆ ತಯಾರಿಲ್ಲ, ಒಳ್ಳೆಯ ಅಧಿಕಾರಿಗಳು ಇದ್ದಾರೆ ಆದರೆ ಅವರು ತೀವ್ರ ತರ ಕ್ರಮ ಕೈಗೊಳ್ಳತಕ್ಕ ಒಂದು ಸ್ಥಿತಿಯಲ್ಲಿ ಇಲ್ಲ. ಅನೇಕ ಸಲ ಅನೇಕ ಒತ್ತಡಗಳು ಬರುತ್ತವೆ. ಅಡ್ಡಿ ಆತಂಕಗಳು ಬರುತ್ತವೆ, ನನಗೆ ಗೊತ್ತಿರುವ ಹಾಗೆ ಹಿಂದಿನ ಮತ್ತು ಇಂದಿನ ಕಾರ್ಯದರ್ಶಿಗಳು ಬಹಳ ಪ್ರಯತ್ನ ಮಾಡಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರು ಬರೆದ ಪತ್ರಕ್ಕೆ ಉತ್ತರ ಇಲ್ಲ. ಅವರು ಕೇಳಿದ ಮಾಹಿತಿಗಳು ಸಿಕ್ಕುತ್ತಿಲ್ಲ, ಇದು ನಡೆಯುತ್ತಿರತಕ್ಕ ರೀತಿ. ಇದನ್ನು ತಾವು ಯಾವ ರೀತಿ ಸುಧಾರಣೆ ಮಾಡುತ್ತೀರೆಂದು ಕೇಳಬಯಸುತ್ತೇನೆ. ಇನ್ನೊಂದು ವಿಷಯವನ್ನು ಒತ್ತಾಯ- ಪೂರ್ವಕವಾಗಿ ಹೇಳಬೇಕಾಗಿದೆ. ಬೆಂಗಳೂರು ನಗರದ ಶಾಸಕರು ಯಾರೂ ತಪ್ಪು ತಿಳಿಯಬಾರದು. ಸಕ್ಕರೆ, ಸೀಮೆಎಣ್ಣೆ ಪಾಮಾಯಿಲ್ ಅನ್ನು ಹಳ್ಳಿಯ ಜನರು ಯಾರೂ ಹೆಚ್ಚಿಗೆ ಉಪಯೋಗಿಸುವುದಿಲ್ಲ. ಆ ಪದಾರ್ಥಗಳನ್ನು ನಗರ ಪ್ರದೇಶಗಳಲ್ಲಿ ಹೆಚ್ಚಿಗೆ ಉಪಯೋಗಿಸುತ್ತಾರೆ ಆದರೆ ಬೆಂಗಳೂರು ನಗರ ದಲ್ಲಿ ಏನು ಕೊಡುತ್ತಿದ್ದೀರಿ ಅದು ಹುಬ್ಬಳ್ಳಿಗೆ, ಮೈಸೂರಿಗೆ ಬೇರೆ ಬೇರೆ ನಗರಗಳಿಗೆ ಇಲ್ಲ. ಈ ತಾರ ತಮ್ಯ ಏಕೆ ? ಪ್ರತಿ ನಗರಗಳ ಮಧ್ಯೆಯೂ ಈ ರೀತಿ ತಾರತಮ್ಯ ಇದೆ. ಇಲ್ಲಿಯವರು ಕುಡಿದಷ್ಟೇ ಟೀ-ಕಾಫಿಯನ್ನು ಹುಬ್ಬಳ್ಳಿಯವರು, ಮಂಗಳೂರಿನವರು, ಮೈಸೂರಿನವರು ಕುಡಿಯುತ್ತಾರೆ. ಅವ ರಿಗೂ ಸೀಮೆಎಣ್ಣೆ, ಸಕ್ಕರೆ, ಪಾಮಾಯಿಲ್ ಬೇಕು. ಆದರೂ ಏಕೆ ಈ ತಾರತಮ್ಯ ? ಗ್ರಾಮಾಂತರ ಪ್ರದೇಶಗಳಿಗೆ ಮತ್ತು ನಗರ ಪ್ರದೇಶಗಳಿಗೆ ಬಹಳ ವ್ಯತ್ಯಾಸ ಇದೆ. ಈ ಅಂತರ ಕಡಿಮೆಯಾಗಬೇಕು. ನಾನು ಸಂಪೂರ್ಣವಾಗಿ ಎಲ್ಲವನ್ನು ನಗರದವರಿಗೇ ಕೊಡಬೇಕೆಂದು ಹೇಳುವುದಿಲ್ಲ. ಅಲ್ಲ ಈ ಪದಾರ್ಥ ಗಳನ್ನು ಉಪಯೋಗಿಸುವುದಿಲ್ಲವೆಂದು ಏನಾದರೂ ತಿಳಿದುಕೊಂಡಿದ್ದೀರಾ ಹೇಗೆ ? ಹಿಂದೆ ಇದ್ದಂತಹ ಆಹಾರ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರತಿಯೊಬ್ಬರಿಗೆ ರೇಷನ್ ಕಾರ್ಡುಗಳನ್ನು ಕೊಡುವುದಾಗಿ ಹೇಳಿದ್ದರು. ಕೇವಲ ೬ ತಿಂಗಳಲ್ಲಿ ಕಾರ್ಡುಗಳನ್ನು ಮುದ್ರಿಸಿ ಕೊಡುವುದಾಗಿ ಹೇಳಿ ದ್ದರು, ಆದರೆ ಇದುವರೆಗೂ ಕೊಟ್ಟಿಲ್ಲ. ಹಳ್ಳಿಗಳಲ್ಲಿರತಕ್ಕ ಪ್ರತಿಯೊಂದು ಕುಟುಂಬಕ್ಕೂ ರೇಷನ್ ಕಾರ್ಡುಗಳನ್ನು ಕೊಡತಕ್ಕ ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳಬೇಕು ಮತ್ತು ಅವರಿಗೆ ಬೇಕಾದ ಪದಾರ್ಥ ಗಳು ಸರಿಯಾದ ಕಾಲದಲ್ಲಿ ಮುಟ್ಟತಕ್ಕ ವ್ಯವಸ್ಥೆ ಮಾಡಬೇಕು. ಇವತ್ತಿನ ದಿವಸ ಯಾವ ಪದಾರ್ಥ ಗಳೂ ಹಳ್ಳಿಗರಿಗೆ ಸರಿಯಾಗಿ ಮುಟ್ಟುತ್ತಿಲ್ಲ. ನಾನು ಹತ್ತು ವರ್ಷಗಳ ಕಾಲ ಸಹಕಾರ ಸಂಘದಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿ ನನ್ನ ಅನುಭವಕ್ಕೆ ಬಂದಿರುವ ವಿಚಾರವನ್ನು ಹೇಳುವುದಾದರೆ, ಹಳ್ಳಿಯಿಂದ ಬರತಕ್ಕ ಹೋಲ್‌ಸೇಲ್ ಏಜೆಂಟ್ ೧೦ ಚೀಲ ಸಕ್ಕರೆಯನ್ನು ಡೆಲಿವರಿ ತೆಗೆದುಕೊಂಡರೆ ೨ ಚೀಲವನ್ನು ಸೊಸೈಟಿಗೆ ತೆಗೆದುಕೊಂಡು ಹೋಗುತ್ತಾನೆ, ಇನ್ನು ಉಳಿದ ೮ ಚೀಲವನ್ನು ಹೋಟೆಲಿಗೆ ಸಾಗಿಸುತ್ತಾನೆ. ಹೀಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ರೀತಿಯಲ್ಲಿ ವಿತರಣೆ ಆಗುವುದಿಲ್ಲ, ಅಲ್ಲಿ ಸರಿಯಾದ

ರೀತಿಯಲ್ಲಿ ವಿತರಣೆ ಆಗತಕ್ಕ ವ್ಯವಸ್ಥೆ ಮಾಡಬೇಕು. ನಾನು ೨೦ ಅಂಶಗಳ ಕಮಿಟಿಯಲ್ಲಿ ಅಧ್ಯಕ್ಷನಾಗಿ ಕೆಲಸ ಮಾಡಿ ನನ್ನ ಅನುಭವಕ್ಕೆ ಬಂದಿದೆ. ಅನೇಕ ರೇಷನ್ ಡಿಪೋಗಳಲ್ಲಿ ಈ ರೀತಿ ನಡೆಯುತ್ತಿದೆ. ಇದು ಒಂದು ರೀತಿಯ ಹವ್ಯಾಸವಾಗಿಬಿಟ್ಟಿದೆ. ಇದನ್ನೆಲ್ಲ ನೋಡಿ ಸರಿಪಡಿಸುವ ಸಲುವಾಗಿ ಪೀಪಲ್ಸ್ ಕಮಿಟಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಪೀಪಲ್ಸ್ ಕಮಿಟಿ ಮಾಡಿ ಎಂದು ಏತಕ್ಕೆ ಹೇಳುತ್ತಿದ್ದೇನೆಂದರೆ ಅದಕ್ಕೆ ಕನ್‌ಸ್ಯೂಮರ್ಸ್ ಅನ್ನು ರೆಪ್ರಸೆಂಟೇಟೀವ್ಸ್ ಆಗಿ ತೆಗೆದುಕೊಳ್ಳಿ, ಬೇಡ ಎಂದು ಹೇಳುವುದಿಲ್ಲ. ಅವರಿಗೆ ಸೂಪರ್‌ವೈಸ್ ಮಾಡುವ ಅಧಿಕಾರ ಕೊಡಿ, ಅಡ್ವೈಸರಿ ಬಾಡಿ ಕೊಡಿ. ಒಟ್ಟಿನಲ್ಲಿ ಪೀಪಲ್ಸ್ ಕಮಿಟಿಗಳನ್ನು ಮಾಡುವುದು ಬಹಳ ಅಗತ್ಯವೆಂದು ಹೇಳುತ್ತೇನೆ. ದೊಡ್ಡ ನಗರ ಇದ್ದರೆ ಡಿವಿಜನಲ್ ಕಮಿಟಿ ಮಾಡಿ. ಅಲ್ಲಿ ಶಾಸಕರನ್ನು, ಅಧಿಕಾರಿಗಳನ್ನು ಹಾಕಿದರೆ ಸರಿಯಾದ ರೀತಿಯಲ್ಲಿ ವಿತರಣೆ ಮಾಡಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಅನುಕೂಲವಾಗುತ್ತದೆ. ನನ್ನ ಸಲಹೆಯನ್ನು ಸರ್ಕಾರದವರು ಕೂಡಲೇ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಖಂಡಿತ ಮಾಡುತ್ತೀರೆಂದು ನಂಬಿದ್ದೇನೆ. ಆ ರೀತಿ ಮಾಡಿ ಫುಡ್ ಕಾರ್ಪೊರೇಷನ್ ವಿಚಾರದಲ್ಲಿ ಸರಿಯಾದ ಕ್ರಮ ಕೈಗೊಳ್ಳಿ, ಇನ್ನು ಬಿಗಿಯಾದ ಕ್ರಮ ಕೈಗೊಳ್ಳಿ. ಇದರಿಂದ ರಾಜ್ಯದ ಜನರಿಗೆ ಅನೇಕ ವಿಚಾರಗಳಲ್ಲಿ ಅನುಕೂಲವಾಗುತ್ತದೆ.

೭–೩೦ ಪಿ. ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಿಮೆಂಟ್ ಡೀಕಂಟ್ರೋಲ್ ಆಗಿದೆ. ಬಂದಂಥ ಸಿಮೆಂಟ್‌ನ್ನು ಕೂಡ ಸರಿಯಾಗಿ ಹಂಚಿಕೆ ಮಾಡುವಂಥ ವ್ಯವಸ್ಥೆ ಕೂಡ ಇಲ್ಲ. ಪ್ರಿಯಾರಿಟಿ ಫಿಕ್ಸ್ ಮಾಡಿದ್ದೀರಿ.....

ಶ್ರೀ ಮಾಣಿಕರಾವ್ ಪಾಟೀಲ್.—ಅದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವೇ ಡೀಲ್ ಮಾಡುತ್ತಿರುವುದರಿಂದ, ನೀವೇ ಮಂತ್ರಿಗಳು ಎನ್ನುವ ಕಲ್ಪನೆ ಇದೆ.

ಶ್ರೀ ಜಿ. ಕೆ. ತಕ್ಕೇದ್.—ಸ್ವಾಮಿ. ೬–೩೦ ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಂಬಲ ಬೆಲೆ ಬಗ್ಗೆ ನಾನು ದೇವೇಗೌಡರು ಹೇಳಿದ್ದೆವು. ಏನು ಬೇಕಾದರೂ ಮಾಡಿಕೊಳ್ಳಿ. ರೈತನಿಗೆ ಸರಿಯಾದ ಬೆಂಬಲ ಬೆಲೆ ಕೊಡುವಂಥ ವ್ಯವಸ್ಥೆ ಮಾಡಿ, ರೈತನಿಂದ ಕೊಳ್ಳುವುದಕ್ಕೂ, ಗ್ರಾಹಕರಿಗೆ ಮಾಡುವುದಕ್ಕೂ ೨೦–೨೫ ಪರ್ಸೆಂಟಿಗಿಂತ ಜಾಸ್ತಿ ಅಂತರ ಇರಬಾರದು. ಇದರಿಂದ ರೈತರಿಗೂ ಅನುಕೂಲ ಮಾಡಿದಂತಾಗುತ್ತದೆ. ಗ್ರಾಹಕರಿಗೂ ಅನುಕೂಲ ಮಾಡಿದಂತಾಗುತ್ತದೆ, ಈ ವಿಷಯದಲ್ಲಿ ತಾವು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER.—Discussions concluded. Hon'ble Minister for food and civil suppiles will reply to the demands on Monday.

AN: OUNCEMENT

I have one more announcement to make. I have received a message from the Chairman Legislative Council.